
Downloaded From:www.kpscvaani.com

ವಾರ್ಷಿಕ ಚಂದಾ ರೂ.25/-

ಜನಪದ

ಸಂಪುಟ-10 • ಸಂಚಿಕೆ-01 • ಅಕ್ಟೋಬರ್ 2026




ಗಾಂಧಿ ದರ್ಶನ

Downloaded From:www.kpscvaani.com




ಬೆಳಗಾವಿ ಅಧಿವೇಶನ – (1924)



ಯಶವಂತಪುರ ರೈಲ್ವೆ ನಿಲ್ದಾಣದಲ್ಲಿ ಗಾಂಧೀಜಿ ಪ್ರಾರ್ಥನಾ ಸಭೆ ನಡೆಸುತ್ತಿರುವುದು. 20–4–1927

Downloaded From:www.kpscvaani.com



ವಾರ್ಷಿಕ ಚಂದಾ ರೂ.25/-

ವಾರ್ತಾ ಜನಪದ

ಸಂಪುಟ-10 • ಸಂಚಿಕೆ-01 • ಅಕ್ಟೋಬರ್ 2026

06 ಗಾಂಧಿಗಾಗಿ ಸಕಲ ವೈಭೋಗವನೂ ತೊರೆದ ಬ್ರಿಟಿಷ್ ಸೇನಾಧಿಕಾರಿ ಮಗಳು ಮೆಡಲಿನ್ ಸ್ಲೇಡ್ : ಇದು ಮೀರಾ ಕಥನ
• ಮಂಜುನಾಥ್ ಚಾಂದ್

11 ನಾಗಾವಿಯಲ್ಲಿ ಸಾಬರಮತಿ ಆಶ್ರಮದ ಪ್ರತಿರೂಪ: ಗಾಂಧಿ ಬದುಕಿಗೊಂದು ಬೆಳಕಿಂಡಿ
• ಡಾ. ವರಪ್ರಸಾದ್ ರಾವ್

14 ಮಂಗಳೂರಿಗೆ ಗಾಂಧಿ ಭೇಟಿಯ ನೆನಪು
• ವೇಮಗಲ್ ಸೋಮಶೇಖರ್

16 ವಾಸ್ತವಿಕತೆಯಲ್ಲಿ ಗಾಂಧಿ ಕಣ್ಣಿದ ದೇಶ
• ಅರವಿಂದ ಚೊಕ್ಕಾಡಿ

21 ಗಾಂಧೀಜಿ ಮತ್ತು ನೈತಿಕತೆ
• ಎನ್. ಆರ್. ವಿಶುಕುಮಾರ್

25 ಗಾಂಧಿ ವಿಚಾರಗಳ ಕ್ರಿಯಾರೂಪ ಕೊಪ್ಪಳದ ಗಾಂಧಿ ಬಳಗ - ಗಾಂಧಿ ಚಿಂತನೆಯ ಬೀಜಗಳ ನಿರಂತರ ಬಿತ್ತನೆ
• ಮಂಜುನಾಥ ಡಿ.ಹೊಳ್ಕನ

29 ಕರ್ನಾಟಕದ ಮಣ್ಣಿನಲ್ಲಿ ಮತ್ತೆ ಮೊಳೆದ ಗಾಂಧಿ ಚಿಂತನೆ ಶತಮಾನೋತ್ಸವದ ಸಂಕಲ್ಪ
• ಜಡಿಯಪ್ಪ ಗೆದ್ದಗಟ್ಟ

34 ಎಡಮಿದುಳು-ಬಲಮಿದುಳು ಎರಡರ ಮೇಲೂ ನಿಯಂತ್ರಣ ಸಾಧಿಸಿದ್ದ ಗಾಂಧಿ
• ವೆಂಕಟೇಶ ಪ್ರಸಾದ್ ಬಿ.ಎಸ್.

39 ಖಾದಿಯ ನೂಲಿನಲ್ಲಿ ಸ್ವಾವಲಂಬನೆಯ ಕನಸು ನೇಯ್ದ ಪುಟ್ಟ ಹಳ್ಳಿ ಬದನವಾಳು
• ಎಂ. ತ್ಯಾಗರಾಜು

40 ಕರ್ನಾಟಕದ ಮಣ್ಣಿನಲ್ಲಿ ಗಾಂಧೀಜಿಯವರ ಹೆಜ್ಜೆ ಗುರುತು ಸ್ವಾತಂತ್ರ್ಯ, ಸಾಮಾಜಿಕ ಮತ್ತು ಸಮಾನತೆಯ ಪಯಣ
• ಮಹೇಶ್ ವಿ ಮುಡಿಗುಂಡ



42 ಮೂರು ಶತಮಾನಗಳ ಇತಿಹಾಸದ ಸಾಣಿಕಟ್ಟಾ ಕಂದು ಉಪ್ಪು
• ಬಿ.ಶಿವಕುಮಾರ್

44 ಮಾಜಿ ಮುಖ್ಯಮಂತ್ರಿ ದಿ.ರಾಮಕೃಷ್ಣ ಹೆಗಡೆ ಜನ್ಮಶತಮಾನೋತ್ಸವ ವರ್ಷಾಚರಣೆ
• ವೀರನಾರಾಯಣ

49 ವಿಶ್ವವಿಖ್ಯಾತ ಮೈಸೂರು ದಸರಾ
• ಬನ್ನೂರು ಕೆ. ರಾಜು

55 ಮೈಸೂರು ಗಜಪಯಣ : ದಸರಾ ವೈಭವಕ್ಕೆ ಮುನ್ನುಡಿ
• ವಿನೋದ್ ಚಂದ್ರ

58 ಸಹಜಾಭಿನಯದ ಶಿಖರಕ್ಕೆ ಸಂದ ಗೌರವ: ಅನಂತ್ ನಾಗ್‌ಗೆ 'ದಾದಾಸಾಹೇಬ್ ಫಾಲ್ಕೆ' ಗರಿ
• ಡಾ. ಎಲ್. ಪಿ. ಗಿರೀಶ್

60 ಕುದುರೆಮುಖದ ಬೆಟ್ಟಗಳಲ್ಲಿ ಅರಳಿದ ನೀಲಿ ಸೊಬಗು
• ಎಂ. ಎಸ್. ಚೈತ್ರ

62 ಮನಸ್ಸು ಕದಡಿ ಮುದುಡಿದರೆ ಮದ್ದುಂಟು
• ಟಿ. ಕೆ. ಪರೀಶ್

66 ಪದಬಂಧ - 83
• ವಿದ್ಯಾ ವಿ. ಹಾಲಭಾವಿ

ಪ್ರಧಾನ ಸಂಪಾದಕರು
ಎಂ. ಎನ್. ಅನುಚೇತ್, ಐ.ಪಿ.ಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಪಲ್ಲವಿ ಹೊನ್ನಾಪುರ (ಹ.ಪ್ರ)
ಜಂಟಿ ನಿರ್ದೇಶಕರು

ಶಫಿ ಸಾದುದ್ದೀನ್
ಉಪ ನಿರ್ದೇಶಕರು

ಸಂಪಾದಕರು
ಆರ್. ರಾಜು
ಹಿರಿಯ ಸಹಾಯಕ ನಿರ್ದೇಶಕರು

ಪ್ರಕಾಶಕರು
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು - 560 001
Ph : 080 22028023
email : janapada2008@gmail.com
https://dipr.karnataka.gov.in

ಮುದ್ರಕರು
ರಾಜಹಂಸ್ ಎಂಟರ್‌ಪ್ರೈಸಸ್
ನಂ.134, 4ನೇ ಮುಖ್ಯ ರಸ್ತೆ, ಕೈಗಾರಿಕಾನಗರ, ರಾಜಾಜಿನಗರ, ಬೆಂಗಳೂರು-560044.
ದೂರವಾಣಿ: 080-23357070

ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From:www.kpscvaani.com

ನಿಮ್ಮ ಅನಿಸಿಕೆ

ಪರಂಪರೆಯ ಬುನಾದಿ – ಅಭಿವೃದ್ಧಿಯ ಒಳನೋಟ

ಆಗಸ್ಟ್ 15ರ ಸ್ವಾತಂತ್ರ್ಯೋತ್ಸವ ದಿನಾಚರಣೆ ಎಂದು ನಾಡಿನ ಜನತೆಯನ್ನು ಉದ್ದೇಶಿಸಿ ಮಾತನಾಡಿ, ಕರ್ನಾಟಕದ ಸಮೃದ್ಧ ಪರಂಪರೆಯನ್ನು ಸ್ಮರಿಸಿದ್ದಾರೆ. ಜೊತೆಗೆ, ರಾಜ್ಯದ ಜನತೆಯ ಉತ್ತಮ ಬದುಕಿಗಾಗಿ ತಾವು ಹೊಂದಿರುವ ಅಭಿವೃದ್ಧಿಯ ಒಳನೋಟಗಳನ್ನು ಹಂಚಿಕೊಂಡಿದ್ದಾರೆ. ಕೃಷಿ, ಶಿಕ್ಷಣ, ಮೂಲಸೌಕರ್ಯ, ಕೈಗಾರಿಕಾ ಬೆಳವಣಿಗೆ, ಉದ್ಯೋಗ ಸೃಷ್ಟಿ, ಆರೋಗ್ಯ ಕ್ಷೇತ್ರದ ಸುಧಾರಣೆ ಇತ್ಯಾದಿಗಳ ಬಗ್ಗೆ ಒತ್ತು ನೀಡಲಾಗುವುದು ಎಂಬ ಅವರ ಮಾತುಗಳು ಸದೃಢ ಕರ್ನಾಟಕ ನಿರ್ಮಾಣದ ಬಗ್ಗೆ ಭರವಸೆ ಮೂಡಿಸಿವೆ.

ತಮ್ಮ ದೃಷ್ಟಿಕೋನಕ್ಕೆ ತಕ್ಕಂತೆ ಆಡಳಿತ ಯಂತ್ರದ ಸ್ಪಂದನಶೀಲತೆಯೊಂದಿಗೆ ಕರ್ನಾಟಕದ ಪ್ರಗತಿಯ ರಥವನ್ನು ಅವರು ಯಶಸ್ವಿಯಾಗಿ ಮುನ್ನಡೆಸಲಿ; ರಾಜ್ಯವು ಭಾರತ ದೇಶಕ್ಕೇ ಮಾದರಿಯಾಗಿ ಮುಂದುವರಿಯಲಿ ಎಂಬುದೇ ಹಿತಚಿಂತಕರೆಲ್ಲರ ಸದಾಶಯವಾಗಿದೆ.

– ದಯಾಸಿಂಧು, ಅರಸೀಕೆರೆ
ಹಾಸನ ಜಿಲ್ಲೆ

* * *

ಹೂವಿನಲ್ಲಿ ಅರಳಿದ ಗಂಗ ಸಾಮ್ರಾಜ್ಯ– ಉತ್ತಮ ಪ್ರಯತ್ನ

ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ 220ನೇ ಫಲಪುಷ್ಪ ಪ್ರದರ್ಶನದ ಭಾಗವಾಗಿ ಗಂಗ ಸಾಮ್ರಾಜ್ಯದ ಆಳ್ವಿಕೆಯ ಸುವರ್ಣ ಯುಗವನ್ನು ಯುವ ಪೀಳಿಗೆಗೆ ತಲುಪಿಸಲು ನಡೆದಿರುವ ಪ್ರಯತ್ನ ಶ್ಲಾಘನೀಯ.

ತಲಕಾಡಿನ ಗಂಗರ ಸಾಂಸ್ಕೃತಿಕ, ಐತಿಹಾಸಿಕ ಹಾಗೂ ಕಲಾತ್ಮಕ ಕೊಡುಗೆಗಳನ್ನು ಹೂವುಗಳ ಮೂಲಕ ಮನಮೋಹಕವಾಗಿ ಅನಾವರಣಗೊಳಿಸಿರುವುದು ಗಮನಾರ್ಹ.

ಇಂತಹ ಪ್ರಯತ್ನಗಳು ನೋಡುಗರಿಗೆ ಒಂದೆಡೆ ಇತಿಹಾಸದ ಅರಿವು ಮೂಡಿಸುತ್ತಲೇ, ಮತ್ತೊಂದೆಡೆ ಪ್ರಕೃತಿಯ ಹಣ್ಣು, ಹೂವು, ಗಿಡ, ಬಳ್ಳಿ ಒಟ್ಟಾರೆ ಪರಿಸರದ ಬಗ್ಗೆ ಪ್ರೀತಿ ಮೂಡಿಸಲು ಸಹಕಾರಿಯಾಗುತ್ತವೆ. ಈ ಎಲ್ಲ ವಿವರಗಳೊಂದಿಗೆ 'ಲಾಲ್ ಬಾಗ್ ನಲ್ಲಿ ಗಂಗಸಾಮರಾಜ್ಯದ ವೈಭವ' ಲೇಖನ ಸಚಿತ್ರ ವಿವರಗಳೊಂದಿಗೆ ಮಾಹಿತಿ ಪೂರ್ಣವಾಗಿದೆ.

– ತಾರೇಶ ಹೂಗಾರ, ಹಿರಿಯೂರು.

* * *

ಹಳ್ಳಿ ಹುಡುಗಿಯ ಸ್ಫೂರ್ತಿದಾಯಕ ಸಾಧನೆ

ಬದುಕಿನಲ್ಲಿ ಏರಿಳಿತಗಳು ಸರ್ವೇಸಾಮಾನ್ಯ. ಆದರೆ, ಮನೋದೃಢತೆ ಇದ್ದರೆ ಎಂತಹ ಸಾಧನೆ ಮಾಡಬಹುದೆಂಬುದನ್ನು 'ಕರ್ನಾಟಕದ ಕಂಚುಗಾರಕೊಪ್ಪಲಿನ ಸಾಧಕಿಗೊಲಿದ ಕಂಚು' ಲೇಖನದಲ್ಲಿ ಕಾಣಬಹುದಾಗಿದೆ.

ಹಳ್ಳಿಯ ಪರಿಸರದಲ್ಲಿ ಬೆಳೆದ ಕೆಎಸ್ ಶಿಲ್ಪಾ ಅವರು ಗ್ಲಾಸ್ಗೋದಲ್ಲಿ ನಡೆದ ಕಾಮನ್ ವೆಲ್ತ್ ಕ್ರೀಡಾಕೂಟದ ಪ್ಯಾರಾ ವಿಭಾಗದಲ್ಲಿ ಕಂಚಿನ ಪದಕ ಜಯಿಸಿ ಭಾರತ ಹಾಗೂ ಕರ್ನಾಟಕದ ಕೀರ್ತಿಪತಾಕೆಯನ್ನು ಹಾರಿಸಿರುವುದು ನಮಗೆಲ್ಲರಿಗೂ ಸ್ಫೂರ್ತಿದಾಯಕವಾಗಿದೆ.

ಶಿಲ್ಪಾ ಅವರ ಮುಂದಿನ ಸಾಧನೆಗಳು ಮತ್ತಷ್ಟು ಉಜ್ವಲವಾಗಿರಲಿ ಎಂಬುದು ನಮ್ಮೆಲ್ಲರ ಆಶಯವಾಗಿದೆ.

ಕಾಂತಪ್ರಭಾ, ಬೆಳಗಾವಿ

* * *



ವಿದ್ಯಾರ್ಥಿಗಳಿಗೆ ಸದವಕಾಶ

ವಿದ್ಯಾರ್ಥಿಗಳು ಉತ್ತಮ ಕನಸು ಹೊಂದಿದ್ದರೆ ದೇಶವೇ ಹೆಮ್ಮೆಪಡುವ ಸಾಧನೆ ಮಾಡಬಹುದು ಎಂಬುದನ್ನು 'ಕಕ್ಷೆಗೇರಿದ ಸೈಕಲ್ ರೂಟ್ ಕನಸು' ಲೇಖನ ಮನಗಾಣಿಸುತ್ತದೆ. ಭಾರತದ ಬಾಹ್ಯಾಕಾಶ ಕ್ಷೇತ್ರವು ಇಸ್ರೋದ ಮಾರ್ಗದರ್ಶನದಲ್ಲಿ ಹೊಸ ಅಧ್ಯಾಯಗಳನ್ನು ಬರೆಯಲು ಸಜ್ಜಾಗುತ್ತಿದ್ದು, ಇದರಲ್ಲಿ ಇಂದಿನ ಯುವ ಜನಾಂಗಕ್ಕೆ ಎಷ್ಟೆಲ್ಲಾ ಅವಕಾಶಗಳಿವೆ ಎಂಬುದನ್ನು ತಿಳಿದರೆ ಆಶ್ಚರ್ಯವಾಗುತ್ತದೆ. ಇಂದು ಅವಕಾಶಗಳಿಗೆ ಆಕಾಶವೇ ಮಿತಿಯಾಗಿದೆ. ಇದನ್ನು ಬಳಸಿಕೊಂಡು ನಾಡಿಗೆ ಹೆಮ್ಮೆ ತರುವ ಕಾರ್ಯದಲ್ಲಿ ತೊಡಗಲು ಯುವ ಪೀಳಿಗೆ ಮನಸ್ಸು ಮಾಡಬೇಕು. ನಕಾರಾತ್ಮಕ ಯೋಚನೆಗಳನ್ನು ದೂರವಿಟ್ಟು ಕಣ್ಣೆದುರಿಗಿರುವ ಅವಕಾಶಗಳನ್ನು ಬಳಸಿಕೊಂಡರೆ ಬಲಿಷ್ಠ ದೇಶದ ನಿರ್ಮಾಣಕ್ಕೆ ಮಹತ್ವದ ಕೊಡುಗೆ ನೀಡುವಲ್ಲಿ ಪಾಲ್ಗೊಳ್ಳಬಹುದು ಎಂಬುದು ಲೇಖನದಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ.

– ಸಂಗಪ್ಪ, ಕಲಬುರಗಿ

* * *

ಅಡವಿ ಉತ್ಪನ್ನ: ಸುಸ್ಥಿರ ಜೀವನೋಪಾಯಕ್ಕೆ ಮಾದರಿ

ಚಾಮರಾಜನಗರ ಜಿಲ್ಲೆಯಲ್ಲಿರುವ ರಾಜ್ಯದ ಮೊತ್ತಮೊದಲ ಅಡವಿ ಉತ್ಪನ್ನ ಸಂಸ್ಥೆಯು ಮಾದರಿ ಸಂಸ್ಥೆಯಾಗಿ ಬೆಳೆದಿರುವುದು ಖುಷಿಯ ಸಂಗತಿಯಾಗಿದೆ. ಬುಡಕಟ್ಟು ಸಮುದಾಯಕ್ಕೆ ಸೇರಿದ ಸೋಲಿಗ ಜನಾಂಗದವರೇ ಕಟ್ಟಿ ಬೆಳೆಸಿದ ಸಂಸ್ಥೆ ಇದಾಗಿದೆ. ಇದು ಸ್ಥಳೀಯ ಪರಿಸರದಲ್ಲೇ ಸುಸ್ಥಿರ ಜೀವನೋಪಾಯವನ್ನು ಯಾವ ರೀತಿ ಕಂಡುಕೊಳ್ಳಬಹುದು ಎಂಬುದನ್ನು ತೋರಿಸುತ್ತದೆ. ಪರಿಸರವನ್ನು ಕಾಪಾಡಿಕೊಂಡೇ ಬದುಕು ಕಟ್ಟಿಕೊಳ್ಳುವ ವಿಧಾನ ಇದಾಗಿದೆ. ಸರ್ಕಾರವು ಲ್ಯಾಮ್ಸ್ ಸೊಸೈಟಿ ಮೂಲಕ ಅನುದಾನ ನೀಡಿದರೂ ಇನ್ನೂ ಅಗತ್ಯವಿರುವ ವೈಜ್ಞಾನಿಕ ಯಂತ್ರೋಪಕರಣಗಳಿಗೆ ಸಹಾಯಧನ ನೀಡಿದರೆ ಸ್ಥಳೀಯರಾಗಿ ಉದ್ಯೋಗ ನೀಡಲು ಸಾಧ್ಯವಾಗುತ್ತದೆ. ಆದಿವಾಸಿಗಳು ಮತ್ತು ಬುಡಕಟ್ಟು ಸಮುದಾಯಗಳನ್ನು ಔದ್ಯೋಗಿಕವಾಗಿ, ಶೈಕ್ಷಣಿಕವಾಗಿ ಮುಂದೆತರಲು ಸಹಾಯಕವಾಗಲಿದೆ.

– ಪ್ರದೀಪ, ಚೆನ್ನಗಿರಿ

'ವಾರ್ತಾ ಜನಪದ' ಮಾಸಿಕ ಈಗ www.kanaja.inನಲ್ಲಿ ಲಭ್ಯ

ವಾರ್ತಾ ಜನಪದ ಮಾಸಿಕಕ್ಕೆ ವಾರ್ಷಿಕ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಪಾವತಿಸಲು ಕಡ್ಡಾಯವಾಗಿ ಸೇವಾಸಿಂಧುವಿನ https://sevasindhu.karnataka.gov.in ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

Downloaded From:www.kpscvaani.com



ಸಂಪಾದಕೀಯ...

ಪ್ರಿಯ ಓದುಗ ಮಿತ್ರರೆ,

ಭಾರತದ ಸ್ವಾತಂತ್ರ್ಯವು ಕೋಟ್ಯಂತರ ಜನರ ಹೋರಾಟ ಹಾಗೂ ತ್ಯಾಗದ ಫಲ. 'ಹನಿ ಹನಿ ಗೂಡಿದರೆ ಹಳ್ಳ' ಎಂಬಂತೆ ಇದರಲ್ಲಿ ಪ್ರತಿಯೊಬ್ಬರ ಕೊಡುಗೆಗೂ ಅಪಾರ ಮೌಲ್ಯವಿದೆ. ಆದರೆ, ಹೀಗೆ ಕೋಟ್ಯಂತರ ಜನರ ಭಾವನೆಗಳನ್ನು ಒಗ್ಗೂಡಿಸಿ ಸರಿಯಾದ ದಿಕ್ಕಿನಲ್ಲಿ ಮುನ್ನಡೆಸಲು ನಾಯಕತ್ವದ ಅಗತ್ಯವಿರುತ್ತದೆ. ದೇಶದ ಸ್ವಾತಂತ್ರ್ಯ ಆಂದೋಲನದ ವೇಳೆ ಅಂತಹ ನಾಯಕತ್ವವನ್ನು ಒದಗಿಸಿ ಜನಸಮೂಹಕ್ಕೆ ಸೂಕ್ತ ಮಾರ್ಗದರ್ಶನ ನೀಡಿದವರು ಮೋಹನದಾಸ್ ಕರಮ್ ಚಂದ್ ಗಾಂಧಿ ಅವರು. ಗಾಂಧಿ ಅವರು ಯಾವ ಸನ್ನಿವೇಶಗಳ ಹಿನ್ನೆಲೆಯಲ್ಲಿ ಎಂತಹ ನಿಲುವುಗಳನ್ನು ತೆಗೆದುಕೊಂಡರು, ಅವರು ಉಪವಾಸ ಸತ್ಯಾಗ್ರಹ, ಅಹಿಂಸೆಗಳನ್ನು ಪ್ರತಿಪಾದಿಸಿದ್ದು ಏಕೆ, ದೇಶದ ಸಮಗ್ರ ಅಭಿವೃದ್ಧಿಯ ಕುರಿತು ಅವರು ಹೊಂದಿದ್ದ ಒಳನೋಟಗಳೇನು ಎಂಬುದನ್ನು ಅರಿಯುವುದು ಅನೇಕ ಕಾರಣಗಳಿಂದ ಮುಖ್ಯವಾಗುತ್ತದೆ. ಗಾಂಧಿ ಅವರನ್ನು ಅರ್ಥೈಸಿಕೊಳ್ಳುವ ಪ್ರಯತ್ನ ಸಮಾಜದಲ್ಲಿ ಆರೋಗ್ಯಕರ ಚರ್ಚೆ ಹಾಗೂ ಸಂವಾದಗಳಿಗೆ ಎಡೆಮಾಡಿಕೊಡುತ್ತದೆ.

ಗಾಂಧಿ ಅವರು ದೇಶದ ಸ್ವಾತಂತ್ರ್ಯದ ಜತೆಜತೆಗೇ ಜನರ ದಿನನಿತ್ಯದ ಬದುಕಿನ ಸಂಗತಿಗಳಿಗೂ ಅಷ್ಟೇ ಪ್ರಾಮುಖ್ಯತೆ ನೀಡುತ್ತಿದ್ದರು. ಹೀಗಾಗಿಯೇ, ಮದ್ಯ ವ್ಯಸನ, ಅನಿಷ್ಟ ಆಚರಣೆಗಳು, ಸ್ವಚ್ಛತೆಯ ಕೊರತೆ, ಭೇದ–ಭಾವ ಪ್ರವೃತ್ತಿ ಇವುಗಳು ತಂದೊಡ್ಡುವ ಅಧಃಪತನವನ್ನು ಮನಗಂಡಿದ್ದರು; ನೈತಿಕ ಮೌಲ್ಯಗಳ ಕುಸಿತದಿಂದ ಏನೆಲ್ಲಾ ಅನಾಹುತಗಳು ಸಂಭವಿಸುತ್ತವೆ ಎಂಬುದನ್ನು ಅಂದಾಜಿಸಬಲ್ಲವರಾಗಿದ್ದರು.

ಅಕ್ಟೋಬರ್ 2ರಂದು ಗಾಂಧಿ ಜಯಂತಿಯನ್ನು ಇಡೀ ನಾಡು ಆಚರಿಸುತ್ತಿರುವ ಸಂದರ್ಭ ಇದಾಗಿದೆ. ಈ ಹಿನ್ನೆಲೆಯಲ್ಲಿ ಗಾಂಧಿ ಅವರ ಬದುಕಿನ ಯಾನದ ವಿವಿಧ ಆಯಾಮಗಳ ಕುರಿತು ಬೆಳಕು ಚೆಲ್ಲುವ ಉದ್ದೇಶದಿಂದ ಈ ಸಂಚಿಕೆಯನ್ನು ರೂಪಿಸಲಾಗಿದೆ. ಗಾಂಧಿ–ಮೀರಾ ಬೆಹೆನ್ ಅವರ ನಡುವಿನ ತಂದೆ ಮಗಳಂತಹ ಭಾವನಾತ್ಮಕ ಸಂಬಂಧ, ಗಾಂಧಿ ಅವರು ಮೂಡಿಸಿದ ಜನಜಾಗೃತಿಯ ಹರಹು, ಸಾಮಾಜಿಕ ಸ್ವಾಸ್ಥ್ಯಕ್ಕಾಗಿ ಅವರ ತುಡಿತ, ಭಾವನೆ–ವೈಚಾರಿಕತೆ ನಡುವೆ ಸಮತೋಲನ ಸಾಧಿಸಲು ಅವರು ಪಟ್ಟ ಶ್ರಮ, ಸಮಾಜದ ವಿವಿಧ ಸ್ತರಗಳ ಜನರನ್ನು ಅವರು ಒಗ್ಗೂಡಿಸಿದ ಬಗೆ ಹೀಗೆ ಹಲವಾರು ಸಂಗತಿಗಳಿಗೆ ಸಂಬಂಧಿಸಿದಂತೆ ಎಲ್ಲರಲ್ಲೂ ಸುಳಿಯುವ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಇಂಗಿತ ಈ ಬರಹಗಳಲ್ಲಿವೆ.

ಆಡಳಿತ ನಡೆಸುವವರಿಗೆ ಗಾಂಧಿ ಅವರು ಪ್ರತಿಪಾದಿಸಿದ ವಿಚಾರ ಹಾಗೂ ಚಿಂತನೆಗಳು ಇವತ್ತಿಗೂ ಪ್ರಸ್ತುತವಾಗಿವೆ. ಸಾಮಾಜಿಕ ನ್ಯಾಯದಿಂದ ಹಿಡಿದು ಉದ್ಯೋಗ ಸೃಷ್ಟಿಯವರೆಗೆ, ಕರಕುಶಲ ಕಸುಬುಗಳಿಗೆ ಉತ್ತೇಜನದಿಂದ ಹಿಡಿದು ವಿದೇಶಿ ಹೂಡಿಕೆಗಳವರೆಗೆ, ಗ್ರಾಮಗಳ ಅಭಿವೃದ್ಧಿಯಿಂದ ಹಿಡಿದು ಸ್ಮಾರ್ಟ್ ಸಿಟಿಗಳ ನಿರ್ಮಾಣದವರೆಗೆ, ಸುಸ್ಥಿರ ಜೀವನೋಪಾಯಗಳಿಂದ ಹಿಡಿದು ಇಡೀ ಪ್ರಪಂಚಕ್ಕೇ ಸವಾಲಾಗಿರುವ ಜಾಗತಿಕ ಹವಾಮಾನ ವೈಪರೀತ್ಯದಂತಹ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವವರೆಗೆ ಎಲ್ಲ ಹಂತಗಳಲ್ಲೂ ಗಾಂಧಿ ಅವರ ವಿಷಯ ಮಂಡನೆಗಳ ಪ್ರಸ್ತುತತೆ ವ್ಯಾಪಿಸುತ್ತದೆ. ಯಾವುದೇ ವ್ಯಕ್ತಿಯು ವಿಶಾಲ ಸಮುದಾಯ ಪ್ರಜ್ಞೆಯ ಭಾಗವಾಗುವುದರ ಹಿಂದೆ ಆಸಕ್ತಿದಾಯಕ ಹಾಗೂ ಕುತೂಹಲಕರವಾದ ಅನೇಕ ಅಂಶಗಳಿರುತ್ತವೆ. ಆದ್ದರಿಂದ, ಅಂಥವರ ಕುರಿತು ಸೂಕ್ತ ಅಧ್ಯಯನ ಹಾಗೂ ಅನುಸಂಧಾನದ ಮೂಲಕ ಅವಲೋಕಿಸುವುದು ಅಗತ್ಯವಿರುತ್ತದೆ.

1924ರಲ್ಲಿ ಮಹಾತ್ಮಾ ಗಾಂಧಿಯವರ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ನಡೆದ ಐತಿಹಾಸಿಕ ಕಾಂಗ್ರೆಸ್ ಅಧಿವೇಶನಕ್ಕೆ 100 ವರ್ಷಗಳು ಪೂರೈಸಿದ ನೆನಪಿಗಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ 'ಗಾಂಧಿ ಭಾರತ' ಶತಮಾನೋತ್ಸವ ಸಂದರ್ಭದಲ್ಲಿ ಗಾಂಧೀಜಿಯವರು ಕರ್ನಾಟಕದಲ್ಲಿ ಭೇಟಿ ನೀಡಿದ್ದ ಪ್ರಮುಖ 87 ಸ್ಥಳಗಳಲ್ಲಿ ಗಾಂಧಿ ಸ್ಮಾರಕ ಸ್ತಂಭಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿತ್ತು. ಗಾಂಧೀಜಿಯವರು ರಾಜ್ಯಕ್ಕೆ ಮೊದಲ ಬಾರಿಗೆ ಆಗಮಿಸಿದಾಗ ಭೇಟಿ ನೀಡಿದ್ದ ಬೆಂಗಳೂರಿನ ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ಮೊದಲ ಸ್ಮಾರಕ ಸ್ತಂಭವನ್ನು ಮಾನ್ಯ ಮುಖ್ಯಮಂತ್ರಿಯವರು ಅನಾವರಣಗೊಳಿಸುವರು. ಮಹಾತ್ಮರ ವಿಚಾರಗಳು ಮತ್ತು ಅವರ ಹೆಜ್ಜೆಯ ಗುರುತುಗಳನ್ನು ಮುಂದಿನ ಪೀಳಿಗೆಗೆ ಜೀವಂತವಾಗಿಡುವ ಪ್ರಯತ್ನ ಇದಾಗಿದೆ.

ಎಂ. ಎನ್. ಅನುಚೇತ್, ಐಪಿಎಸ್
ಪ್ರಧಾನ ಸಂಪಾದಕರು

ಪ್ರಧಾನ ಸಂಪಾದಕರು, ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001. email : janapada2008@gmail.com

Downloaded From:www.kpscvaani.com



ಏಲ್ಲಿನೋವ್‌ನಲ್ಲಿ ಒಂದು ಅಪರೂಪದ ಸಮಾಗಮ. ಮಹಾತ್ಮಾ ಗಾಂಧಿ, ನೋಬೆಲ್ ಪ್ರಶಸ್ತಿ ವಿಜೇತ ರೊಮೇನ್ ರೋಲ್ಯಾಂಡ್ ಮತ್ತು ಮೀರಾ ಬೆಹೆನ್

ಗಾಂಧಿಗಾಗಿ ಸಕಲ ವೈಭೋಗವನೂ ತೊರೆದ ಬ್ರಿಟಿಷ್ ಸೇನಾಧಿಕಾರಿ ಮಗಳು ಮೆಡಲಿನ್ ಸ್ಲೇಡ್

ಇದು ಮೀರಾ ಕಥನ

ಮಂಜುನಾಥ್ ಚಾಂದ್

"ಈಚೆಗಷ್ಟೇ ನಾನೊಂದು ಕೃತಿಯನ್ನು ಬರೆದು ಮುಗಿಸಿದೆ. ಅದೀಗ ಅಚ್ಚಿನ ಮನೆಯಲ್ಲಿದೆ. ಆ ಕೃತಿಯ ಹೆಸರು –ಮಹಾತ್ಮಾ ಗಾಂಧಿ"

ಸ್ವಿಝರ್ಲೆಂಡ್–ಫ್ರಾನ್ಸ್ ಗಡಿಪ್ರದೇಶವಾದ ರೋನ್ ಕಣಿವೆಯ ವಿಲ್ಲಿನ್ಯೂ ಎಂಬಲ್ಲಿರುವ ಪುಟ್ಟ ವಿಲ್ಲಾದಲ್ಲಿ ತಮ್ಮನ್ನು ಭೇಟಿಯಾಗಲೆಂದೇ ಇಂಗ್ಲೆಂಡ್‌ನಿಂದ ಬಂದ ಮೆಡಲಿನ್ ಸ್ಲೇಡ್ ಎಂಬ ಯುವತಿ ಮುಂದೆ ಹೀಗೆ ಮಾತನಾಡುತ್ತಿದ್ದವರು ರೊಮೇನ್ ರೋಲ್ಯಾಂಡ್. ಫ್ರೆಂಚ್ ಲೇಖಕ, ನಾಟಕಕಾರ, ನೋಬೆಲ್ ಪ್ರಶಸ್ತಿ ವಿಜೇತ ರೋಲ್ಯಾಂಡ್ ಅವರು ಬಿಥೋವನ್ ಸಂಗೀತದ ಅಪ್ಪಟ ಪ್ರೇಮಿ. ಅದಕ್ಕೆಂದೇ ಅವರನ್ನು ಭೇಟಿಯಾಗಲು ಬಂದಾಕೆ ಮೆಡಲಿನ್. ತಮ್ಮ ಮಾತಿಗೆ ಏನೂ ಅರಿಯದವಳಂತೆ, ಯಾವ ಆಸಕ್ತಿಯೂ ಇಲ್ಲದವಳಂತೆ ಪಿಳಿಪಿಳಿ ನೋಡುತ್ತಿದ್ದ ಆಕೆಯನ್ನು ಕಂಡ ಅವರು ಮತ್ತೆ ಮಾತು ಮುಂದುವರಿಸಿದರು;

"ನೀನು ಮಹಾತ್ಮಾ ಗಾಂಧಿ ಅವರ ಬಗ್ಗೆ ಕೇಳಿಯೇ ಇಲ್ಲವೇ?"

"ಇಲ್ಲ!" ನಿರ್ಲಿಪ್ತವಾಗಿ ನುಡಿದಳಾಕೆ.

"ಅವರು ಇನ್ನೊಬ್ಬ ಏಸು ಕ್ರಿಸ್ತ!"

ರೋಲ್ಯಾಂಡ್ ಅವರ ಆ ಮಾತು ಆಕೆಯ ಅಂತರಂಗವನ್ನು ತಾಕಿತಾದರೂ ಆ ಬಗ್ಗೆ ಮಾತು ಮುಂದುವರಿಯಲಿಲ್ಲ. ಅಲ್ಲಿಂದ ಮುಂದೆ

Downloaded From:www.kpscvaani.com

ತಿಂಗಳುಗಳ ಬಳಿಕ ಮೆಡಲಿನ್ ಪ್ಯಾರಿಸ್ಗೆ ಪ್ರಯಾಣ ಮಾಡುತ್ತಾರೆ. ಮರುದಿನ ಬೆಳಿಗ್ಗೆಯೇ ಆಕೆ ತಂಗಿದ್ದ ಹೋಟೆಲ್ ಪಕ್ಕದಲ್ಲಿಯೇ ಇದ್ದ ಪುಸ್ತಕದ ಅಂಗಡಿಗೆ ತೆರಳುತ್ತಾರೆ. ಅಲ್ಲಿ ರೋಲ್ಯಾಂಡ್ ಬರೆದ Mahatma Gandhi: The Man Who Became One with the Universal Being ಕೃತಿಯನ್ನು ಒಪ್ಪ ಓರಣವಾಗಿ ಜೋಡಿಸಿ ಇಡಲಾಗಿತ್ತು. ಕೇಸರಿ ಬಣ್ಣದ ಹೊದಿಕೆಯ ಆ ಕೃತಿಯನ್ನು ಕೊಂಡು ಹೋಟೇಲ್ ರೂಮಿಗೆ ಹೋದವರೇ ಓದಲು ಶುರುವಿಟ್ಟುಕೊಂಡರು. ಇಷ್ಟೂ ವರ್ಷಗಳಿಂದ ಇದಕ್ಕಾಗಿಯೇ ಕಾಯುತ್ತಿದ್ದೇನೆ ಎನ್ನುವ ರೀತಿಯಲ್ಲಿ ಅದರ ಓದಿನಲ್ಲಿ ಸಂಪೂರ್ಣ ತಲ್ಲೀನರಾಗಿ ಹೋದರು. ಊಟದ ಹೊತ್ತಿನಲ್ಲೂ ಪುಸ್ತಕದಿಂದ ಕಣ್ಣು ಕೀಳಲಿಲ್ಲ. ರಾತ್ರಿ ವೇಳೆಗಾಗಲೇ ಇಡೀ ಪುಸ್ತಕವನ್ನು ಓದಿ ನಿಬ್ಬೆರಗಾಗಿ ಕುಳಿತುಬಿಟ್ಟರು.

'ಮಹಾತ್ಮಾ ಗಾಂಧಿ ನಮ್ಮ ಕಾಲದ ಇನ್ನೊಬ್ಬ ಏಸು ಕ್ರಿಸ್ತ' ಎಂಬ ರೋಲ್ಯಾಂಡ್ ಅವರ ಮಾತು ಎಷ್ಟು ಸತ್ಯವಲ್ಲವೇ ಎಂದು ಆಕೆಗೆ ಅನಿಸಿಬಿಟ್ಟಿತು. The Man Who Became One with the Universal Being (ವಿಶ್ವಚೈತನ್ಯದೊಂದಿಗೆ ಒಂದಾದ ಮನುಷ್ಯ) ಎಂಬ ಟ್ಯಾಗ್ಲೈನ್ ಕೂಡ ಅದಕ್ಕೆ ಲಗತ್ತಾಗಿತ್ತು. ಇಷ್ಟೂ ದಿನ ಇಂತಹ ಚೈತನ್ಯದ ಬಗ್ಗೆ ತಿಳಿಯದೇ ತಪ್ಪು ಮಾಡಿದೆ ಎಂದು ಆಕೆ ಪರಿತಪಿಸಿದರು. ಅಂದೇ ಆ ಕ್ಷಣದಲ್ಲೇ ಭಾರತಕ್ಕೆ ಹೊರಟುಬಿಡಬೇಕು, ಆ ಮಹಾತ್ಮನನ್ನು ಭೇಟಿಯಾಗಬೇಕು, ನನ್ನ ಮುಂದಿನ ಬದುಕಿರುವುದೇ ಅಲ್ಲಿ ಎಂಬ ತೀರ್ಮಾನಕ್ಕೆ ಬಂದುಬಿಡುತ್ತಾರೆ. ಆ ಮಹಾತ್ಮನನ್ನು ಕಣ್ಣು ತುಂಬಿಕೊಳ್ಳುವುದಾದರೂ ಯಾವಾಗ ಎಂಬ ತಹತಹ ಶುರುವಾಗುತ್ತದೆ. ತಮ್ಮ ಪ್ಯಾರಿಸ್ ಪ್ರವಾಸವನ್ನು ಮೊಟಕುಗೊಳಿಸಿ ತರಾತುರಿಯಲ್ಲಿ ಇಂಗ್ಲೆಂಡ್ಗೆ ಬಂದುಬಿಡುತ್ತಾರೆ. ಬಂದವರೇ ಪಿ&ಓ ಕಂಪನಿಯ ಹಡಗಿನಲ್ಲಿ ಟಿಕೆಟ್ ಕೂಡ ಬುಕ್ ಮಾಡುತ್ತಾರೆ.

ಹಾಗೆ ಟಿಕೆಟ್ ಬುಕ್ ಮಾಡಿ ಮನೆಗೆ ಬಂದಾಕೆಯ ಮನಸ್ಸು ಬದಲಾಗುತ್ತದೆ. ತೀರಾ ಆತುರದ ನಿರ್ಧಾರ ಕೈಗೊಳ್ಳುತ್ತಿದ್ದೇನೆ ಎಂಬ ಭಾವನೆ ಮೂಡುತ್ತದೆ. ತಾನೀಗ ಹೊರಟಿರುವುದು ಹೋರಾಟದ ಭೂಮಿಗೆ, ಒಮ್ಮೆ ಹೊರಟರೆ ಮರಳಿ ಬರುವಂತಿಲ್ಲ. ಭಾರತದ ಜೀವನದ ಬಗ್ಗೆ ಏನೇನೂ ಅರಿಯದೇ ಏಕಾಏಕಿ ಅಲ್ಲಿಗೆ ಹೋಗುವುದು ತರವಲ್ಲ ಎಂದುಕೊಂಡು ಮರುದಿನ ಮತ್ತೆ ಆ ಶಿಪ್ ಆಫೀಸಿಗೆ ತೆರಳಿ ಪ್ರಯಾಣವನ್ನು ಹನ್ನೆರಡು ತಿಂಗಳು ಮುಂದಕ್ಕೆ ಹಾಕುತ್ತಾರೆ.

ಮುಂದಿನ ಹನ್ನೆರಡು ತಿಂಗಳೂ ಕಠಿಣ ಪರಿಶ್ರಮಕ್ಕೆ ತಮ್ಮನ್ನು ಒಡ್ಡಿಕೊಳ್ಳುತ್ತಾರೆ. ಸಬರಮತಿ ಆಶ್ರಮದ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಳ್ಳುತ್ತಾರೆ. ಮತ್ತೆ ಫ್ರಾನ್ಸ್ಗೆ ತೆರಳಿ ಅಲ್ಲಿನ ಗದ್ದೆಗಳಲ್ಲಿ ನಾಟಿ ಮಾಡುವುದನ್ನು ಕಲಿಯುತ್ತಾರೆ, ಮಾಂಸಾಹಾರ ತ್ಯಜಿಸುತ್ತಾರೆ, ನೇಯ್ಗೆ ಕಲಿಯುತ್ತಾರೆ, ನೆಲದ ಮೇಲೇ ಮಲಗುವುದು, ಚಕ್ಕಳಮಕ್ಕಳ ಹಾಕಿ ಕುಳಿತುಕೊಳ್ಳುವುದನ್ನು ಅಭ್ಯಾಸ ಮಾಡ್ತಾರೆ. ಬ್ರಿಟಿಷ್ ಲೈಬ್ರರಿಗೆ ಹೋಗಿ ಗಾಂಧೀಜಿಯವರೇ ಸಂಪಾದಿಸಿ ಪ್ರಕಟಿಸುತ್ತಿದ್ದ 'ಯಂಗ್ ಇಂಡಿಯಾ' ಪತ್ರಿಕೆಗೆ ಚಂದಾದಾರರಾಗುತ್ತಾರೆ, ಮಹಾಭಾರತ, ಉಪನಿಷದ್, ಋಗ್ವೇದದ ಪುಸ್ತಕಗಳನ್ನು ಕೊಂಡು ಓದುತ್ತಾರೆ. ಬ್ರಿಟಿಷ್ ಸೇನಾಧಿಕಾರಿ ಅಡ್ಮಿರಲ್ ಎಡ್ಮಂಡ್ ಸ್ಲೇಡ್ ಅವರ ಮಗಳಾದ ಮೆಡಲಿನ್ ಸ್ಲೇಡ್ ಅಲ್ಲಿಯ ತನಕವೂ ವೈಭವದ ಬದುಕನ್ನು ನಡೆಸಿದವರು. ಈಗವರು ತಾವು ಖರೀದಿಸಿದ ಎಲ್ಲ ಐಷಾರಾಮಿ ವಸ್ತುಗಳನ್ನು ತ್ಯಜಿಸುತ್ತಾರೆ. ಖಾದಿ ಬಟ್ಟೆ ಧರಿಸುತ್ತಾರೆ. ಹಗಲಿರುಳೂ ಭಾರತದ ಬಗ್ಗೆಯೇ ಚಿಂತಿಸುತ್ತಾರೆ. ಮಹಾತ್ಮನ ಬಗೆಗೆ ಬರೆದ ಒಂದೇ ಒಂದು ಪುಟ್ಟ ಕೃತಿ ಆಕೆಯ ಬದುಕನ್ನೇ ಬದಲಿಸಿಬಿಡುತ್ತದೆ.

ಹೀಗೆ ಬದುಕಿನ ಪರಿವರ್ತನೆಯ ಕಡೆಗೆ ಹೆಜ್ಜೆ ಹಾಕುತ್ತಿರುವ ಹೊತ್ತಿನಲ್ಲೇ ಭಾರತದಲ್ಲಿ ಗಾಂಧೀಜಿ ಹಿಂದೂ–ಮುಸ್ಲಿಂ ಏಕತೆಗಾಗಿ ಉಪವಾಸ ಸತ್ಯಾಗ್ರಹ



ಇಂಗ್ಲೆಂಡ್ಗೆ ತೆರಳುವ ಮಾರ್ಗದಲ್ಲಿ ಹಡಗಿನಲ್ಲಿ ಮಾತುಕತೆಯಲ್ಲಿ ತಲ್ಲೀನರಾಗಿರುವ ಮಹಾತ್ಮಾ ಗಾಂಧಿ ಮತ್ತು ಮೀರಾ ಬೆಹೆನ್

Downloaded From:www.kpscvaani.com

ಆರಂಭಿಸಿದ ಸುದ್ದಿ ಬರುತ್ತದೆ. ಪ್ರತಿ ದಿನವೂ ಬ್ರಿಟಿಷ್ ಪತ್ರಿಕೆಗಳಲ್ಲಿ ಬರುತ್ತಿದ್ದ ಸತ್ಯಾಗ್ರಹದ ಸುದ್ದಿಗಳನ್ನು ಆತಂಕದಿಂದಲೇ ಓದುತ್ತಾರೆ. ಕೆಲ ದಿನಗಳ ಬಳಿಕ ಗಾಂಧೀಜಿ ಈ ಕಠಿಣ ಉಪವಾಸದಿಂದ ಬದುಕಿ ಉಳಿಯುವುದೇ ಕಷ್ಟ ಎಂಬ ಸುದ್ದಿ ಪ್ರಕಟವಾಗಿ ದುಗುಡ ಆವರಿಸಿಕೊಳ್ಳುತ್ತದೆ. ಗಾಂಧಿ ಬದುಕಿ ಉಳಿಯಲಿ ಎಂದು ಅನವರತ ಪ್ರಾರ್ಥಿಸುತ್ತಾರೆ. 21 ದಿನಗಳ ಉಪವಾಸ ಕೊನೆಗೂ ಸುಖಾಂತ್ಯವಾಗುತ್ತದೆ. ಆಗ ಮೆಡಲಿನ್‌ಗೆ ಆದ ಖುಷಿಗೆ ಅಪಾರ.

ತಕ್ಷಣ ಗಾಂಧೀಜಿಗೆ ಒಂದು ಪತ್ರ ಬರೆದು ಭಾರತಕ್ಕೆ ಬರುವ ಇಂಗಿತ ವ್ಯಕ್ತಪಡಿಸುತ್ತಾರೆ. ತನ್ನ ತಾತ ಕೊಟ್ಟಿದ್ದ ವಜ್ರದ ಪದಕವನ್ನು ಮಾರಾಟ ಮಾಡಿ ಅದರಿಂದ ಬಂದ ಇಪ್ಪತ್ತು ಪೌಂಡ್ ಚೆಕ್‌ಅನ್ನು ಆ ಪತ್ರದ ಜೊತೆಗೇ ಕಳಿಸುತ್ತಾರೆ. ಗಾಂಧೀಜಿ ಆ ಪತ್ರಕ್ಕೆ ಉತ್ತರ ಬರೆದು, ಭಾರತಕ್ಕೆ ಬರುವುದಕ್ಕೆ ಯಾವುದೇ ಅಭ್ಯಂತರವಿಲ್ಲ, ಆದರೆ ಆಶ್ರಮದ ಬದುಕು ಸುಲಭವಲ್ಲ, ಅದು ಕಠಿಣಾತಿಕಠಿಣ. ಇನ್ನೊಮ್ಮೆ ಯೋಚನೆ ಮಾಡು, ಇನ್ನೊಂದು ವರ್ಷ ಯೋಜನೆಯನ್ನು ಮುಂದಕ್ಕೆ ಹಾಕು. ಅಷ್ಟಾಗಿಯೂ ನಿರ್ಧಾರದಲ್ಲಿ ಬದಲಾವಣೆ ಆಗದೇ ಇದ್ದರೆ ಹೊರಟು ಬಂದುಬಿಡು ಅನ್ನುತ್ತಾರೆ. ಮೆಡಲಿನ್ ನಿರ್ಧಾರದಲ್ಲಿ ಕೊಂಚವೂ ಬದಲಾವಣೆ ಆಗುವುದಿಲ್ಲ.

ಇನ್ನೂ ಒಂದಷ್ಟು ತಿಂಗಳು ಮತ್ತಷ್ಟು ಕಠಿಣ ಜೀವನಕ್ಕೆ ತಮ್ಮನ್ನು ಒಡ್ಡಿಕೊಳ್ಳುವ ಆಕೆ ಅಂತಿಮವಾಗಿ ಭಾರತಕ್ಕೆ ಹೊರಟಿದ್ದು 1925ರ ಆಗಸ್ಟ್ ತಿಂಗಳಲ್ಲಿ. ಸಬರಮತಿ ಆಶ್ರಮವನ್ನು ತಲುಪಿದ್ದು ಅಕ್ಟೋಬರ್ ತಿಂಗಳಿನಲ್ಲಿ. ಅಂದರೆ ಸರಿಯಾಗಿ ನೂರಾ ಒಂದು ವರ್ಷಗಳ ಹಿಂದೆ. ಹಾಗೆ ಅಂದು ಆಶ್ರಮದೊಳಗೆ ನಡೆದು ಬಂದ ಮೆಡಲಿನ್ ಸ್ಲೇಡ್ ಅವರನ್ನು ಸ್ವಾಗತಿಸಿದ ಮಹಾತ್ಮಾ 'ಇಂದಿನಿಂದ ನೀನು ನನ್ನ ಮಗಳೇ ಆಗುವೆ' ಎಂದು ಹೇಳುತ್ತಾರೆ ಮತ್ತು ಗಾಂಧಿಗಾಗಿಯೇ ದೇಶ ತೊರೆದು ಬಂದ ಆಕೆಗೆ ಮೀರಾ ಬೆಹನ್ ಎಂದು ಹೆಸರಿಡುತ್ತಾರೆ.

ಇಂಗ್ಲೆಂಡಿನ ವೈಭವೋಪೇತ ಬದುಕು ತೊರೆದು ಬಂದ ಮೀರಾ ಅಂದು ಧರಿಸಿದ್ದು ಅಚ್ಚ ಬಿಳುಪಿನ ಖಾದಿಯನ್ನು. ಆಯ್ದುಕೊಂಡಿದ್ದು ಸರಳಾತಿಸರಳ ಜೀವನವನ್ನು. ಗಾಂಧಿ ಬೇಡ ಬೇಡವೆಂದರೂ ಮುಂಡನ ಮಾಡಿಸಿಕೊಂಡು ಬ್ರಹ್ಮಚರ್ಯದ ಮೊರೆ ಹೋಗುತ್ತಾರೆ. ಆಶ್ರಮವೆಂಬ ಪ್ರಯೋಗ ಶಾಲೆಯಲ್ಲಿ ತಮ್ಮನ್ನು ಪೂರ್ತಿ ಅರ್ಪಿಸಿಕೊಳ್ಳುತ್ತಾರೆ. ಗಾಂಧಿ ನಡೆದ ಹಾದಿಯಲ್ಲೇ ನಡೆಯುತ್ತಾರೆ. ಒಂದಲ್ಲ ಮೂರು ಬಾರಿ ಜೈಲಿಗೆ ಹೋಗುತ್ತಾರೆ. ಸ್ವಾತಂತ್ರ್ಯ ಹೋರಾಟದ ಅನೇಕ ತಳಮಳಗಳಿಗೆ ಮುಖಾಮುಖಿಯಾಗುತ್ತಾರೆ. ಕಾಲರಾ ಹಿಡಿದ ಊರಿನಲ್ಲಿ ಜನರ ಶುಶ್ರೂಷೆಗಾಗಿ ಹಗಲಿರುಳು ಶ್ರಮಿಸುತ್ತಾರೆ, ಅತ್ತ ಇಂಗ್ಲೆಂಡ್‌ನಲ್ಲಿ ಅಪ್ಪ-ಅಮ್ಮ ಇಬ್ಬರ ದೇಹಾಂತ್ಯವಾದರೂ ಮನಸ್ಸು ಕಲ್ಲು ಮಾಡಿಕೊಂಡು ಇಲ್ಲಿಯೇ ಇದ್ದುಬಿಡುತ್ತಾರೆ. ಸಬರಮತಿ ಆಶ್ರಮವನ್ನು ವಿಸರ್ಜನೆ ಮಾಡಿದ ಬಳಿಕ ಯಾವುದಾದರೂ ಹಳ್ಳಿಯಲ್ಲಿ ಹೋಗಿ ಇದ್ದುಬಿಡಬೇಕು ಎಂದು ಗಾಂಧಿ ಬಯಸಿದಾಗ ಸೇಗಾಂವ್ ಎಂಬ ಹಳ್ಳಿಗೆ ಏಕಾಂಗಿಯಾಗಿ ತೆರಳಿ, ಪ್ರತಿಕೂಲ ವಾತಾವರಣದ ನಡುವೆಯೂ ಬಾಪುಗಾಗಿ ತಾವೇ ಸ್ವತಃ ಕುಟೀರಗಳನ್ನು ಕಟ್ಟಿದ ಗಟ್ಟಿಗಿತ್ತಿ ಈ ಮೀರಾ. ಅದು ಮುಂದೆ ಸೇವಾಗ್ರಾಮ ಆಶ್ರಮವಾಗಿ ಬಹಳ ಪ್ರಸಿದ್ಧಿಯನ್ನು ಪಡೆಯುತ್ತದೆ. ಹೀಗೆ ಮೀರಾ ಎನ್ನುವ ಚುರುಗುಟ್ಟುವ ಬಿಸಿಲಿನಂತಹ ಹೆಣ್ಣುಮಗಳು ತಾನು ಭಾರತದ ಮಣ್ಣಿನ ಭಾಗವೇ ಎಂಬಂತೆ ಬದುಕುತ್ತಾರೆ. ಯಾವ ಸಾಮ್ರಾಜ್ಯ ಈ ನಾಡನ್ನು ವಶಪಡಿಸಿಕೊಳ್ಳಬೇಕು ಎಂದು ಹೊರಟಿತ್ತೋ ಅದೇ ನಾಡಿನ ಸೇನಾಧಿಕಾರಿಯ ಮಗಳು ಜಿದ್ದಿಗೆ ಬಿದ್ದವರಂತೆ ಹೋರಾಟ ನಡೆಸುವುದಕ್ಕೆ ನಾವಾದರೂ ಏನೆಂದು ವ್ಯಾಖ್ಯಾನಿಸಲು ಸಾಧ್ಯ ಹೇಳಿ? ಆಕೆ ಮಹಾತ್ಮನ ಮಗಳೇ ಆಗಿ ಅವರೊಂದಿಗೆ ಇಪ್ಪತ್ತೂರು



1931ರಲ್ಲಿ ಎರಡನೇ ದುಂಡು ಮೇಜಿನ ಸಭೆಗಾಗಿ ಇಂಗ್ಲೆಂಡ್‌ಗೆ ಭೇಟಿ ನೀಡಿದ ಸಂದರ್ಭದಲ್ಲಿ ಡಾರ್ವೆನ್‌ನಲ್ಲಿ ಅಲ್ಲಿನ ನಿವಾಸಿಗಳ ಜೊತೆ ಮಹಾತ್ಮಾ ಗಾಂಧಿ ಮತ್ತು ಮೀರಾ ಬೆಹೆನ್

Downloaded From:www.kpscvaani.com

ವರ್ಷಗಳನ್ನು ಕಳೆಯುವುದಿದೆಯಲ್ಲ, ಅದು ನಿಜಕ್ಕೂ ಯೋಗಾಯೋಗ, ಪುಣ್ಯಾತಿಪುಣ್ಯ.

ನಾಲ್ಕು ಮಂದಿ ಗಂಡು ಮಕ್ಕಳನ್ನು ಹೊಂದಿದ್ದ ಗಾಂಧೀಜಿಗೆ ಮಗಳಿರಲಿಲ್ಲ. ಅದನ್ನು ತುಂಬುವ ಕೆಲಸವನ್ನು ಪರಿಪೂರ್ಣವಾಗಿ ಮಾಡಿದವರು ಮೀರಾ. ಎಷ್ಟೋ ಬಾರಿ ತಮ್ಮ ಮನಸ್ಸಿನ ಮಾತುಗಳನ್ನು ಅವರು ತಮ್ಮ ಮಾನಸ ಪುತ್ರಿಯ ಜೊತೆ ಹೇಳಿಕೊಂಡಿದ್ದು ಕಾಣಿಸುತ್ತದೆ. 23 ವರ್ಷಗಳ ಅವಧಿಯಲ್ಲಿ ಅವರು ಮಗಳು ಮೀರಾಗೆ ಬರೆದ ಪತ್ರಗಳ ಸಂಖ್ಯೆಯೇ 650ಕ್ಕೂ ಅಧಿಕ. ಅವೆಲ್ಲವನ್ನೂ ಸಂಗ್ರಹಿಸಿ ಮೀರಾ ಬೆಹನ್ ಅವರು 'ಬಾಪೂಸ್ ಲೆಟರ್ ಟು ಮೀರಾ' ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ಆ ಪತ್ರಗಳನ್ನು ಓದುತ್ತಿದ್ದರೆ ಅಪ್ಪ–ಮಗಳ ಸೇತುಬಂಧ ಯಾವ ಮುಚ್ಚುಮರೆ ಇಲ್ಲದೆ ಎಷ್ಟು ಶುದ್ಧಾತಿಶುದ್ಧವಾಗಿದೆ ಎಂಬುದು ನಮಗೆ ಅರ್ಥವಾಗುತ್ತ ಹೋಗುತ್ತದೆ.

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿ ಗಾಂಧಿ ಹತ್ಯೆಯ ಬಳಿಕವೂ ಮೀರಾ ಸುಮಾರು ಹನ್ನೊಂದು ವರ್ಷಗಳ ಭಾರತದಲ್ಲೇ ಇರುತ್ತಾರೆ. ಆ ಅಷ್ಟೂ ವರ್ಷಗಳಲ್ಲಿ ಅವರೆ ನಡೆಸಿದ ಸಾಹಸವನ್ನು ವರ್ಣಿಸಲು ನಮಗೆ ಪದಗಳೇ ಸಾಲವು. ಹಿಮಾಲಯದ ತಪ್ಪಲಿನ ರೂರ್ಕಿ–ಹರಿದ್ವಾರದ ಸನಿಹದ ಮೂಲದಾಸಪುರ ಎಂಬಲ್ಲಿ ಹತ್ತು ಎಕರೆ ವಿಸ್ತಾರದ ಜಾಗದಲ್ಲಿ 'ಕಿಸಾನ್ ಆಶ್ರಮ'ವನ್ನು ಕಟ್ಟಿ ಬಹಳಕಾಲ ನಡೆಸಿದರು. ನೂರಾರು ಜಾನುವಾರುಗಳನ್ನು ಸಾಕಿದರು, ಮಹಿಳೆಯರಿಗೆ ನೂಲುವ–ನೇಯ್ಗೆಯ ಕೆಲಸಗಳನ್ನು ನೀಡಿದರು, ಹೊಸ ವಿನ್ಯಾಸದ ಬಟ್ಟೆಗಳನ್ನು ತಯಾರಿಸುವ ಕೆಲಸಗಳಲ್ಲಿ ತೊಡಗಿಸಿಕೊಂಡು ಅನೇಕ ಪ್ರಯೋಗಗಳನ್ನು ನಡೆಸಿದರು.

ಅಲ್ಲಿಂದ ಮುಂದೆ ಕಿಸಾನ್ ಆಶ್ರಮ ಇನ್ನಷ್ಟು ದೊಡ್ಡದಾಗಿ ಬೆಳೆಯುತ್ತಿದ್ದಂತೆ ಅದನ್ನು ಗ್ರಾಮೀಣಾಭಿವೃದ್ಧಿ ಇಲಾಖೆಗೆ ಒಪ್ಪಿಸಿ ಕುದುರೆ ಏರಿ ಹೊರಟುಬಿಡುತ್ತಾರೆ. ಹಾಗೆ ಹೊರಟ ಮೀರಾ ನೆಲೆ ನಿಲ್ಲುವುದು ಹೃಷಿಕೇಶಕ್ಕೆ ಸಮೀಪದ ವೀರಭದ್ರ ಎಂಬ ತಾಣದಲ್ಲಿ. ಅಲ್ಲಿ ಆಕೆ ಕಟ್ಟಿದ ಆಶ್ರಮದ ಹೆಸರು ಪಶುಲೋಕ. ಅದರ ವಿಸ್ತಾರವಾದರೂ ಎಷ್ಟು ಅಂತೀರಿ? ಮೂರು ಸಾವಿರ ಎಕರೆ ಪ್ರದೇಶ. ಆ ಅಷ್ಟೂ ಪ್ರದೇಶವನ್ನು ಮೀರಾ ಸರ್ವೇ ಮಾಡಿದ್ದಾದರೂ ಹೇಗೆ? ಅರಣ್ಯ ಇಲಾಖೆಯ ಆನೆಯನ್ನು ಏರಿ ಉದ್ದಾನುದ್ದಕ್ಕೆ ಆಳೆತ್ತರಕ್ಕೂ ಮೀರಿ ಬೆಳೆದಿದ್ದ ಪಂಪಾಸ್ ಹುಲ್ಲುಗಾವಲಿನಿಂದ ಆಚೆಗಿರುವ ಪ್ರದೇಶದ ವೀಕ್ಷಣೆ ಮಾಡುತ್ತಾರೆ. ಅದನ್ನು ಕಂಡು ಅಧಿಕಾರಿಗಳೇ ದಂಗಾಗಿ ಹೋಗುತ್ತಾರೆ. ಮುಂದೆ ಕೆಲವು ವರ್ಷಗಳ ಕಾಲ ಆ ಆಶ್ರಮದಲ್ಲಿ ಪಶುಸಂಗೋಪನೆಯ ಕೆಲಸಗಳನ್ನು ಶ್ರದ್ಧೆಯಿಂದ ಕೈಗೊಳ್ಳುವ ಅವರು ಭಾರತದ ಅಧಿಕಾರಶಾಹಿಗಳ ಕಾರ್ಯವೈಖರಿಗೆ ರೋಸಿ ಅದನ್ನೂ ನಿಲ್ಲಿಸಿ 'ಪಶುಲೋಕ ಸೇವಾ ಮಂಡಳ' ಎಂಬ ಇನ್ನೊಂದು ಸಂಸ್ಥೆಯನ್ನು ಸ್ಥಾಪಿಸುತ್ತಾರೆ. ಗ್ರಾಮೋದ್ಯೋಗಗಳನ್ನು ಒದಗಿಸುವುದು ಅದರ ಉದ್ದೇಶ. ಅದರ ಉದ್ಘಾಟನೆಗೆ ಆ ಕಾಲದಲ್ಲಿ ಮೊದಲ ರಾಷ್ಟ್ರಪತಿ ರಾಜೇಂದ್ರ ಪ್ರಸಾದ್ ಅವರೇ ಆಗಮಿಸಿದ್ದರು.

ಅಲ್ಲಿಯೂ ಅವರಿಗೆ ಭ್ರಮನಿರಶನವಾಗುತ್ತದೆ. ಮೂರು

89 ವರ್ಷಗಳ ತುಂಬು ಜೀವನ ನಡೆಸಿ

1959ರಲ್ಲಿ ಭಾರತವನ್ನು ತೊರೆದ ಮೀರಾ ಕೆಲಕಾಲ ಇಂಗ್ಲೆಂಡ್‌ನಲ್ಲಿ ತಂಗಿದ್ದರು. ಮುಂದಿನ ವರ್ಷವೇ ಲುಡ್ವಿಗ್ ವ್ಯಾನ್ ಬಿಥೋವನ್ ಅವರ ಜನ್ಮಭೂಮಿ ಆಸ್ಟ್ರಿಯಾಗೆ ತೆರಳಿದರು. ವಿಯೆನ್ನಾ ಕಾಡಿನ ವ್ಯಾಪ್ತಿಯಲ್ಲಿಯೇ ಬರುವ ಬಡೆನ್, ಹಿಂಟಬ್ರ್ಯೂಲ್ ಮತ್ತು ಕ್ರಾಕಿಂಗ್ ಎಂಬ ಪುಟ್ಟ ಹಳ್ಳಿಗಳಲ್ಲಿ ಪುಟ್ಟ ಕಾಟೇಜ್‌ಗಳಲ್ಲಿ ಸುಮಾರು 22 ವರ್ಷಗಳ ಕಾಲ ಸಂತನಂತೆ ಸರಳ ಜೀವನ ನಡೆಸಿದರು.

ತಮ್ಮ ಇಳಿ ವಯಸ್ಸಿನಲ್ಲಿ ಬಿಥೋವನ್ ಸಂಗೀತಕ್ಕೆ ಸಂಪೂರ್ಣ ಅರ್ಪಿಸಿಕೊಂಡಿದ್ದ ಅವರು ಸದಾ ಆ ಸಂಗೀತವನ್ನು ಗುನುಗುನಿಸುತ್ತಿದ್ದರು. ಕಾಡಿನ ನಡುವೆ ನಿರುಮ್ಮಳವಾಗಿ ವಿಹರಿಸುತ್ತಿದ್ದರು ಮತ್ತು ಉಳಿದ ಸಮಯ ಓದಿನಲ್ಲಿ ಮಗ್ನರಾಗಿ ಬಿಡುತ್ತಿದ್ದರು.

ಅಂದಿನ ಪ್ರಧಾನಿ ಇಂದಿರಾ ಗಾಂಧಿ ಅವರಿಗೆ ಮೀರಾ ಬಗ್ಗೆ ಅಪಾರವಾದ ಗೌರವ. ಆಕೆ ವಿಯೆನ್ನಾದಲ್ಲಿ ವಾಸಿಸುತ್ತಿದ್ದರೂ ಸದಾ ಅವರ ಆರೈಕೆ ಮೇಲೆ ಗಮನ ಹರಿಸುವಂತೆ ಆ ದೇಶದಲ್ಲಿದ್ದ ಭಾರತೀಯ ರಾಯಭಾರ ಕಚೇರಿಗೆ ಇಂದಿರಾ ಸೂಚನೆ ನೀಡಿದ್ದರು. ಮೀರಾ ಯಾವುದೇ ಕ್ಷಣದಲ್ಲಿ ಏನೇ ಕೇಳಿದರೂ ಅವರಿಗದನ್ನು ತಕ್ಷಣ ಒದಗಿಸಬೇಕು ಎಂಬುದು ಇಂದಿರಾ ಕಟ್ಟಪ್ಪಣೆಯಾಗಿತ್ತು. ಅದರ ಫಲವಾಗಿ ಅಷ್ಟೂ ವರ್ಷಗಳ ಕಾಲ ಪ್ರತಿ ದಿನ ನಾಲ್ವರು ಸ್ನೇಹಿತರು ಮೀರಾ ಅವರನ್ನು ಭೇಟಿ ಮಾಡಿ ಅವರ ಆರೋಗ್ಯ ವಿಚಾರಿಸುತ್ತಿದ್ದರು.

ಭಾರತ ಸರ್ಕಾರವು 1981ರಲ್ಲಿ ಮೀರಾ ಅವರಿಗೆ ದೇಶದ ಎರಡನೇ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಪದ್ಮ ವಿಭೂಷಣ' ನೀಡಿ ಗೌರವಿಸಿತ್ತು. 1982ರಲ್ಲಿ ಮೀರಾ ಬೆಹೆನ್ ಹೆಸರಿನಲ್ಲಿ ಅಂಚೆ ಚೀಟಿಯನ್ನೂ ಬಿಡುಗಡೆ ಮಾಡಲಾಗಿತ್ತು.

ತಮ್ಮ ಕಣ್ಣ ಮುಂದೇ ಇದ್ದ ಎಲ್ಲ ವೈಭೋಗವನ್ನೂ ತೊರೆದು, ಖಾದಿ ಬಟ್ಟೆಯನ್ನು ತಲೆ ತುಂಬಾ ಹೊದ್ದುಕೊಂಡು 23 ವರ್ಷಗಳ ಕಾಲ ಗಾಂಧಿ ಎಂಬ ಮಹಾತ್ಮನೊಂದಿಗೆ ಭಾರತದ ಉದ್ದಗಲಕ್ಕೂ ಅಡ್ಡಾಡಿದ ಮೀರಾ ಬದುಕಿನ ಪ್ರತಿ ಕ್ಷಣವನ್ನೂ ಅನುಭವಿಸಿದರು, ತಮ್ಮ ಜೀವನದ ಸಾರ್ಥಕ್ಯವನ್ನು ಕಂಡುಕೊಂಡರು. 89 ವರ್ಷಗಳ (1987) ಸುದೀರ್ಘ 'ಸಂತ ಜೀವನ ನಡೆಸಿದ ಮೀರಾ ನಮ್ಮ ಮನಸ್ಸುಗಳಲ್ಲಿ ಸದಾ ಅಮರರು.

Downloaded From:www.kpscvaani.com



ಭಾರತಕ್ಕೆ ತೆರಳಿದ ಆರು ವರ್ಷಗಳ ಬಳಿಕ ಇಂಗ್ಲೆಂಡ್‌ಗೆ ಭೇಟಿ ನೀಡಿದ ಮೀರಾ ಅಲ್ಲಿನ ನಿವಾಸಿಗಳ ಜೊತೆ

ನಿರ್ಜನ ರಸ್ತೆಯಲ್ಲಿ ಕುದುರೆ ಏರಿ

"ನಿನ್ನ ರಾತ್ರಿ ಸಾಹಸಗಳನ್ನು ಕೇಳಿದರೆ ನಿಜಕ್ಕೂ ಭಯವಾಗುತ್ತದೆ," 1936ರ ಏಪ್ರಿಲ್ 16ರಂದು ಗಾಂಧೀಜಿ ಮೀರಾಗೆ ಬರೆದ ಪತ್ರದಲ್ಲಿ ಹೀಗೆ ಆತಂಕ ವ್ಯಕ್ತಪಡಿಸಿದ್ದರು.

ಆಣ ಸೇವಾಗ್ರಾಮದ ಒಂದು ಪುಟ್ಟ ಕುಟೀರದಲ್ಲಿ ಒಂಟಿಯಾಗಿಯೇ ವಾಸಿಸುತ್ತಿದ್ದ ಮೀರಾ ಬೆಹೆನ್ ಅವರು ತಮ್ಮ ಆಶ್ರಮದಿಂದ ವಾರ್ದಾಗೆ ಪ್ರಯಾಣ ಮಾಡಲು ಬಳಸುತ್ತಿದ್ದುದು ಸಜಿಲಾ ಎಂಬ ಕುದುರೆಯನ್ನು. ಆಗೆಲ್ಲ ಸಂಚಾರಕ್ಕೆ ಯಾವ ವಾಹನ ವ್ಯವಸ್ಥೆಯೂ ಇರುತ್ತಿರಲಿಲ್ಲ. ಈ ರಸ್ತೆಯಲ್ಲಿ ಯಾವತ್ತೂ ದರೋಡೆ, ಸುಲಿಗೆ, ಕೊಲೆ ವ್ಯಾಪಕವಾಗಿ ನಡೆಯುತ್ತಿತ್ತು. ಬಾಲ್ಯದಿಂದಲೂ ಕುದುರೆ ಸವಾರಿಯ ಮೋಹಕ್ಕೆ ಬಿದ್ದಿದ್ದ ಮೀರಾ ಈ ರಸ್ತೆಯಲ್ಲಿ ನಿರ್ಭೀತಿಯಿಂದ ಓಡಾಡುತ್ತಿದ್ದರು. ಅದೂ ಹಗಲಿನಲ್ಲಿ ಅಲ್ಲ, ರಾತ್ರಿಯ ವೇಳೆ. 'ಅದು ವಿಪರೀತ ಬಿಸಿಲಿನ ದಿನಗಳು. ಹಾಗಾಗಿ ಕತ್ತಲು ಕವಿದ ಬಳಿಕ ವಾರ್ದಾದಿಂದ ಸೇವಾಗ್ರಾಮಕ್ಕೆ ಮರಳುತ್ತಿದ್ದೆ. ನಿರ್ಜನ ರಸ್ತೆಯಲ್ಲಿ ಕುದುರೆ ಏರಿ ಮಾಡುವ ಸವಾರಿಗೆ ಮಿಗಿಲಾದುದು ಯಾವುದೂ ಇರಲಿಲ್ಲ, ಎಂದು ಮೀರಾ ತಮ್ಮ ಆತ್ಮಕಥನದಲ್ಲಿ (ಮಹಾತ್ಮನ ಮಗಳು–ಅನುವಾದ: ಮಂಜುನಾಥ್ ಚಾಂದ್–ಪುಟ 203) ಬರೆದುಕೊಂಡಿದ್ದಾರೆ. ಹಾಗೆಲ್ಲ ಮಾಡದಿರು ಎಂದು ಬಾಪು ಮಗಳಿಗೆ ಸಲಹೆ ಮಾಡಿದ ಬಳಿಕ ಮೀರಾ ಅದನ್ನು ಕೈಬಿಟ್ಟಿದ್ದರು.

ಸಾವಿರ ಎಕರೆಯಷ್ಟಿದ್ದ ಪಶುಲೋಕ ಅನೇಕರಿಗೆ ಆಸೆ ಹುಟ್ಟಿಸುವಂತೆ ಮಾಡುತ್ತದೆ. ಅವರು ಅದನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವ ಸಂಚು ಹೂಡುತ್ತಾರೆ. ಈ ಸೂಕ್ಷ್ಮವನ್ನು ಅರಿತ ಮೀರಾ ಅಷ್ಟೂ ಜಾಗವನ್ನು ಸರ್ಕಾರದ ಸುಪರ್ದಿಗೆ ಒಪ್ಪಿಸಿ ಮತ್ತೆ ತಮ್ಮ ಕುದುರೆಯನ್ನೇರಿ ಇಬ್ಬರು ಸಹಾಯಕರೊಂದಿಗೆ ಹಿಮಾಲಯದ ಒಳಗಿನ ಆಳವಾದ ಕಣಿವೆಯಲ್ಲಿ ಸಾವಿರಾರು ಕಿ.ಮೀ. ಪಯಣಿಸುತ್ತಾರೆ. ನೆಮ್ಮದಿಯ ತಾಣಕ್ಕಾಗಿ ತಿಂಗಳುಗಳ ಕಾಲ ಅಂಡಲೆಯುತ್ತಾರೆ. ಕೊನೆಗೆ ಭಿಲಂಗಾನ ಎಂಬಲ್ಲಿ ತಂಗಿ ಅಲ್ಲೊಂದು ಆಶ್ರಮ ಕಟ್ಟುತ್ತಾರೆ. ಅದರ ಹೆಸರೇ 'ಗೋಪಾಲಾಶ್ರಮ.' ಹಾಗಿದ್ದಾಗಲೇ ಅವರಿಗೆ ಕಾಶ್ಮೀರ ಕಣಿವೆಯ ಕಡೆಯಿಂದ ಇನ್ನೊಂದು ಆಹ್ವಾನ ಬರುತ್ತದೆ. ಅದೂ ಕೂಡ ಜಾನುವಾರು ಅಭಿವೃದ್ಧಿ. ಅದಕ್ಕಾಗಿ ಅವರು ಸಿಂದ್ ಕಣಿವೆಯಿಂದ ಗಂಗಾಬಾಲ್ ಬಳಿ ಪುಟ್ಟ ಕಣಿವೆ ಆಯ್ಕೆ ಮಾಡಿ ಅಲ್ಲಿ 'ಗೋಬಲ' ಎಂಬ ಆಶ್ರಮವನ್ನು ಕಟ್ಟುತ್ತಾರೆ. ಅಲ್ಲಿಗೆ ಇಂಗ್ಲೆಂಡ್‌ನಿಂದ ಡೆಕ್ಸ್‌ಟರ್ ತಳಿಯ ಹಸುಗಳನ್ನು ತಂದು ಸಾಕುತ್ತಾರೆ.

ಹೀಗೆ ಮೀರಾ ಬೆಹನ್ ಸಾಹಸಗಾಥೆಗಳು ಒಂದೆರಡಲ್ಲ. ಅವರು ಬರೆದ 'ದಿ ಸ್ಪಿರಿಟ್ಸ್ ಪಿಲ್ಗ್ರಿಮೇಜ್' ಎಂಬ ಆತ್ಮಕಥನದಲ್ಲಿ ಇವೆಲ್ಲವನ್ನೂ ನವಿರಾಗಿ ಹೇಳಿಕೊಂಡಿದ್ದಾರೆ. ನಾವು ಇಷ್ಟೂ ವರ್ಷಗಳ ಕಾಲ ಕಂಡ ಗಾಂಧಿಗೂ ಈ ಹೆಣ್ಣುಮಗಳ ಕಣ್ಣಲ್ಲಿ ಕಾಣುವ ಗಾಂಧಿ ಎಷ್ಟು ಭಿನ್ನ ಎನ್ನುವುದು ಈ ಪುಸ್ತಕವನ್ನು ಓದಿದರೆ ಅರ್ಥವಾಗುತ್ತದೆ. ಎಷ್ಟೋ ಸಂದರ್ಭಗಳಲ್ಲಿ ನಮ್ಮ ಕಣ್ಣುಗಳು ಇಲ್ಲಿನ ಅಧ್ಯಾಯಗಳು ತೇವಗೊಳಿಸದೇ ಇದ್ದರೆ ಕೇಳಿ. ಕೊನೆಗೆ ಎಲ್ಲ ಘಟಾನುಘಟಿ ಹೋರಾಟಗಾರರ ಜೊತೆ ಆಗಾ ಖಾನ್ ಜೈಲು ಸೇರುವ ಮೀರಾ, ತ್ಯಾಗಮಯೀ ಮಹದೇವ್ ದೇಸಾಯಿ, ಮಹಾತಾಯಿ ಕಸ್ತೂರ್ಬಾ ಅವರ ಸಾವನ್ನು ಕೂಡ ತೀರಾ ಸನಿಹದಿಂದ ನೋಡುತ್ತಾರೆ.

ತಮ್ಮ 33ನೇ ತುಂಬು ಯೌವನದ ಹೊತ್ತಿನಲ್ಲಿ ಭಾರತದ ಮಣ್ಣಿನಲ್ಲಿ ಕಾಲಿಡುವ ಮೀರಾ ಭರೋಬ್ಬರಿ ಮುವತ್ತನಾಲ್ಕು ವರ್ಷಗಳ ಇಲ್ಲಿಯೇ ಕಳೆಯುತ್ತಾರೆ. ಆಕೆಯ ಕಣ್ಣುಗಳಲ್ಲಿ ತುಂಬಿ ತುಳುಕುತ್ತಿದ್ದುದು ಬರೀ ಗಾಂಧಿ ಆದರ್ಶ ಮಾತ್ರ. ಅವರು ಕೈಗೊಂಡ ಎಲ್ಲ ಕೈಂಕರ್ಯಗಳಲ್ಲಿಯೂ ಅದು ನಿಚ್ಚಳವಾಗಿ ಕಾಣುತ್ತದೆ. ಅಷ್ಟು ಗಾಂಧಿ ಕಡುಮೋಹಿಯಾಗಿದ್ದರು ಮೀರಾ ಬೆಹೆನ್. ಆದರೆ ಅದೆಷ್ಟೋ ಮಂದಿಗೆ ಆಕೆಯ ಬಗ್ಗೆ ತಿಳಿದೇ ಇಲ್ಲ. ■

Downloaded From:www.kpscvaani.com



ನಾಗಾವಿಯಲ್ಲಿ ಸಾಬರಮತಿ ಆಶ್ರಮದ ಪ್ರತಿರೂಪ
ಗಾಂಧಿ ಬದುಕಿಗೊಂದು ಬೆಳಕಿಂಡಿ

ಡಾ. ವರಪ್ರಸಾದ್ ರಾವ್

ಮುದ್ರಣ ಕಾಶಿಯೆಂದೇ ಹೆಸರಾದ ಗದಗ ಜಿಲ್ಲೆಯು ಕರ್ನಾಟಕದ ಸಾಹಿತ್ಯ, ಸಂಸ್ಕೃತಿ, ವಾಸ್ತುಶಿಲ್ಪ ಪರಂಪರೆಯಲ್ಲಿ ತನ್ನದೇ ವಿಶಿಷ್ಟ ಹೆಗ್ಗುರುತು ಹೊಂದಿದೆ. ಜಿಲ್ಲೆಯ ನಾಗಾವಿ ಗ್ರಾಮದ ಹೊರವಲಯದ ನೈಸರ್ಗಿಕ ಗುಡ್ಡದ ಮೇಲೆ ನಿರ್ಮಾಣಗೊಂಡಿರುವ ಸಾಬರಮತೀ ಆಶ್ರಮದ ಪ್ರತಿರೂಪವ ಈಗ ಇದಕ್ಕೆ ಮತ್ತೊಂದು ಸೇರ್ಪಡೆಯಾಗಿದೆ. ಮಹಾತ್ಮ ಗಾಂಧೀಜಿಯವರ ಜೀವನ, ಚಿಂತನೆ, ತತ್ವ– ಸಿದ್ಧಾಂತ ಹಾಗೂ ಆದರ್ಶಗಳನ್ನು ಇಂದಿನ ಪೀಳಿಗೆಗೆ ಪರಿಚಯಿಸುವ ಉದ್ದೇಶದಿಂದ ತಲೆಯೆತ್ತಿರುವ ಗುಜರಾತ್ನ ಅಹಮದಾಬಾದ್‌ನಲ್ಲಿರುವ ಮೂಲ ಸಾಬರಮತೀ ಆಶ್ರಮವನ್ನು ಹೋಲುವ ಈ ಆಶ್ರಮ ಇದೀಗ ಶೈಕ್ಷಣಿಕ ಚಟುವಟಿಕೆಗಳ ಜತೆಗೆ ಪ್ರವಾಸಿ ತಾಣವಾಗಿ ಗಮನ ಸೆಳೆಯುತ್ತಿದೆ.

ಕಪ್ಪತಗುಡ್ಡ ಎಂದೇ ಕರೆಯಲ್ಪಡುವ ನಾಗಾವಿ ಗುಡ್ಡದ ನಯನ ಮನೋಹರ ಪರಿಸರದಲ್ಲಿ ಬೋಳು ಬೆಟ್ಟಗಳ ಮೇಲಿನ ಪವನ ವಿದ್ಯುತ್ ಯಂತ್ರಗಳು ಹಾಗೂ ಕುರುಚಲು ಗಿಡಗಳ ನಡುವೆ ನೆಲೆಗೊಂಡಿರುವ ಈ ಆಶ್ರಮವು ಪ್ರಶಾಂತ ವಾತಾವರಣದಲ್ಲಿ ಧ್ಯಾನಸ್ಥವಾಗಿರುವಂತೆ ಭಾಸವಾಗುತ್ತದೆ. ಅದರಲ್ಲೂ, ಗಾಂಧೀಜಿ ಅವರ ಚಿಂತನೆಗಳನ್ನು ಅರಿಯಲು ಬಯಸುವವರಿಗೆ ವಿಶಿಷ್ಟ ಅನುಭವ ನೀಡುತ್ತಿದೆ.

ಶತಮಾನದ ಸ್ಮಾರಕ

ಮಹಾತ್ಮ ಗಾಂಧೀಜಿಯವರು 1920ರ ನವೆಂಬರ್ 11ರಂದು ಗದಗ ನಗರಕ್ಕೆ ಭೇಟಿ ನೀಡಿದ್ದರು. ಈ ಭೇಟಿಯ ಶತಮಾನದ ನೆನಪಿನಲ್ಲಿ ಗದಗದ ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವು ನಾಗಾವಿ ಅವರಣದಲ್ಲಿ ಸಾಬರಮತೀ ಆಶ್ರಮದ ಪ್ರತಿರೂಪವನ್ನು ನಿರ್ಮಿಸಿದೆ. ಗಾಂಧೀಜಿಯವರ ಸಮಗ್ರ ಜೀವನ ಮತ್ತು ಅವರ ಗ್ರಾಮ ಸ್ವರಾಜ್ಯದ ಪರಿಕಲ್ಪನೆಯನ್ನು ಯುವಪೀಳಿಗೆಗೆ ಪರಿಚಯಿಸುವ ಪ್ರಯತ್ನ ಇದರ ಹಿಂದಿದೆ.

Downloaded From:www.kpscvaani.com



ಗುಜರಾತ್‌ನಲ್ಲಿ ಪ್ಲೇಗ್ ಸಾಂಕ್ರಾಮಿಕದ ಸಂದರ್ಭದಲ್ಲಿ ಗಾಂಧೀಜಿ ಕೋಚರಬ್ ಆಶ್ರಮವನ್ನು ತೊರೆಯಲು ನಿರ್ಧರಿಸಿದ್ದರು. ಬಳಿಕ 1917ರಲ್ಲಿ ಅಹಮದಾಬಾದ್‌ನ ಸಾಬರಮತೀ ನದಿಯ ದಡದಲ್ಲಿ ಸಾಬರಮತೀ ಆಶ್ರಮ ಸ್ಥಾಪಿಸಲು ಕಾರಣಕರ್ತರಾದರು. ಸ್ವಾತಂತ್ರ್ಯ ಚಳವಳಿಯ ಹಲವು ಪ್ರಮುಖ ಘಟ್ಟಗಳಿಗೆ ಆಶ್ರಮ ಸಾಕ್ಷಿಯಾದ ಈ ಆಶ್ರಯವು ಗಾಂಧೀಜಿಯವರ ಜೀವನದ ಅವಿಭಾಜ್ಯ ಭಾಗವಾಗಿತ್ತು. ಮೂಲ ಸಾಬರಮತೀ ಆಶ್ರಮದಲ್ಲಿರುವ ವಸ್ತುಸಂಗ್ರಹಾಲಯ ಮತ್ತು ಗಾಂಧಿ ಸ್ಮಾರಕವು ದೇಶ–ವಿದೇಶಗಳಿಂದ ಪ್ರವಾಸಿಗರನ್ನು ಹಾಗೂ ಆಸಕ್ತರನ್ನು ಹೆಚ್ಚಿನ ಸಂಖ್ಯೆಯಲ್ಲಿ ಸೆಳೆಯುತ್ತಿದೆ.

ಕರ್ನಾಟಕದಲ್ಲೇ ಅಂತಹುದೇ ಅನುಭವ ಲಭ್ಯವಾಗಿಸಬೇಕೆಂಬುದನ್ನು ಗಮನದಲ್ಲಿರಿಸಿಕೊಂಡು ನಾಗಾವಿಯಲ್ಲಿ ಈ ಪ್ರತಿರೂಪವನ್ನು ನಿರ್ಮಿಸಲಾಗಿದೆ. ಹಿಂದಿನ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ್ ಅವರ ಪರಿಕಲ್ಪನೆ ಹಾಗೂ ಗ್ರಾಮೀಣಾಭಿವೃದ್ಧಿ ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಅವರ ಮುತುವರ್ಜಿಯಿಂದ ಈ ಆಶ್ರಮ ನಿರ್ಮಾಣ ಸಾಕಾರಗೊಂಡಿದೆ.

3,800 ಚದರ ಅಡಿ ವಿಸ್ತೀರ್ಣ

ಗದಗ ತಾಲ್ಲೂಕಿನ ನಾಗಾವಿ ಗ್ರಾಮದ ಗುಡ್ಡದ ಬಳಿಯ ವಿಶ್ವವಿದ್ಯಾಲಯದ ಆವರಣದಲ್ಲಿ ಸುಮಾರು ರೂ 72 ಲಕ್ಷ ವೆಚ್ಚದಲ್ಲಿ ಈ ಆಶ್ರಮ ನಿರ್ಮಾಣಗೊಂಡಿದೆ. ಮೂಲ ಸಾಬರಮತೀ ಆಶ್ರಮವು 3,8000 ಚದರ ಅಡಿ ವಿಸ್ತೀರ್ಣದಲ್ಲಿದ್ದು, ನಾಗಾವಿಯಲ್ಲಿರುವ ಪ್ರತಿರೂಪ ಆಶ್ರಮವೇ ಅಷ್ಟೇ ವಿಸ್ತೀರ್ಣ ಹೊಂದಿದೆ.

ಮೂಲ ಆಶ್ರಮದ ಮಾದರಿಯಲ್ಲೇ ನಿರ್ಮಾಣಗೊಂಡಿಗಿರುವ ಕಟ್ಟಡದ ಪ್ರವೇಶದ್ವಾರದಲ್ಲಿರುವ ಗಾಂಧೀಜಿ ಪ್ರತಿಮೆ, ಪುರಾತನ ಮಾದರಿಯ ಕಂದೀಲು ಹಾಗೂ ಬಾಗಿಲುಗಳು ಗಮನ ಸೆಳೆಯುವಂತಿವೆ.ಮೂಲ ಆಶ್ರಮದಯಲ್ಲಿರುವ ಮಾದರಿಯಲ್ಲಿಯೇ ಪ್ರಾರ್ಥನಾ ಮಂದಿರ, ಧ್ಯಾನ ಮಂದಿರ, ಗ್ರಂಥಾಲಯ, ನಯೀ ತಾಲೀಮ್ ಮಂದಿರ, ಕಸ್ತೂರಬಾ ಮಂದಿರ ಹಾಗೂ ಅಡುಗೆ ಕೊಠಡಿಗಳು ಇಲ್ಲಿದ್ದು, ಗಾಂಧೀಜಿಯವರ ಆದರ್ಶ ಮತ್ತು ಮೌಲ್ಯಗಳನ್ನು ಪ್ರತಿಬಿಂಬಿಸುತ್ತವೆ.

ಗಾಂಧಿ ಬದುಕಿನ 100ಕ್ಕೂ ಹೆಚ್ಚು ಛಾಯಾಚಿತ್ರಗಳು

ಆಶ್ರಮದಲ್ಲಿ ಮಹಾತ್ಮ ಗಾಂಧಿಯವರ ಜೀವನ, ಸ್ವಾತಂತ್ರ್ಯ ಹೋರಾಟ, ಚಳವಳಿಗಳು, ಉಪ್ಪಿನ ಸತ್ಯಾಗ್ರಹ ಸೇರಿದಂತೆ ಅವರ ಬದುಕಿನ ಪ್ರಮುಖ ಘಟನೆಗಳನ್ನು ಬಿಂಬಿಸುವ 100ಕ್ಕೂ ಹೆಚ್ಚು ಛಾಯಾಚಿತ್ರಗಳು ಗಮನಸೆಳೆಯುತ್ತವೆ. ಅವರ ಜೀವನ ಸಾಧನೆಗಳು, ನೇತೃತ್ವದಲ್ಲಿ ನಡೆದ ಐತಿಹಾಸಿಕ ಘಟನೆಗಳು ಹಾಗೂ ವಿವಿಧ ಹೋರಾಟಗಳ ಕುರಿತು ಸವಿವರ ಮಾಹಿತಿಯನ್ನು ಇದು ಒಳಗೊಂಡಿದೆ.

ಗಾಂಧಿ ಪ್ರತಿಪಾದಿಸಿದ ಏಳು ಸಾಮಾಜಿಕ ಪಾತಕಗಳು, ಏಕಾದಶ ವ್ರತಗಳು ಹಾಗೂ 18 ರಚನಾತ್ಮಕ ಕಾರ್ಯಕ್ರಮಗಳ ಕುರಿತ



Downloaded From:www.kpscvaani.com

ಮಾಹಿತಿಯನ್ನೂ ನೀಡಲಾಗಿದೆ. ಇನ್ನು, ಇಲ್ಲಿನ ಗ್ರಂಥಾಲಯದಲ್ಲಿ ಗಾಂಧೀಜಿಯವರ ಬದುಕು ಮತ್ತು ಚಿಂತನೆಗೆ ಸಂಬಂಧಿಸಿ 500ಕ್ಕೂ ಹೆಚ್ಚು ಕೃತಿಗಳಿವೆ. ಗಾಂಧೀಜಿ ಅವರು ಮಾಡಿದ್ದ ಭಾಷಣಗಳು, ಭಜನೆಗಳು ಹಾಗೂ ಜೀವನಾಧಾರಿತ ಘಟನೆಗಳನ್ನು ಸಂಯೋಜನೆಗೊಳಿಸಿ ಆಡಿಯೊ-ವಿಡಿಯೊ ಪ್ರದರ್ಶನಕ್ಕೂ ವ್ಯವಸ್ಥೆ ಮಾಡಲಾಗಿದೆ. "ಈ ಎಲ್ಲ ವ್ಯವಸ್ಥೆಗಳಿಂದಾಗಿ ಇದು ಮೂಲ ಸಾಬರಮತೀ ಆಶ್ರಮದ ಪ್ರತಿರೂಪ ಕಟ್ಟಡ ಮಾತ್ರವಷ್ಟೇ ಅಲ್ಲ; ಬದಲಾಗಿ ಒಂದು ಜೀವಂತ ಆದರ್ಶ ಕೇಂದ್ರ." ಎನ್ನುತ್ತಾರೆ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಡಾ. ಸುರೇಶ ವಿ. ನಾಡಗೌಡರವರು.

ನಯೀ ತಾಲೀಮ್‌ನಿಂದ ಗಾಂಧಿ ಚಿಂತನೆಯವರೆಗೆ

ವಿಶ್ವವಿದ್ಯಾಲಯದ ಭಾಗವಾಗಿರುವ ಈ ಆಶ್ರಮದಲ್ಲಿ ಗಾಂಧೀಜಿಯವರು ಶಿಕ್ಷಣದ ಕುರಿತು ಪ್ರತಿಪಾದಿಸಿದ್ದ ನಯೀ ತಾಲೀಮ್ ಪರಿಕಲ್ಪನೆಯನ್ನು ಪರಿಚಯಿಸುವ ಮಂದಿರವೂ ಇದೆ. ಮೂರು ಮಂಗಗಳ ಪ್ರತಿರೂಪವು 'ಕೆಟ್ಟದ್ದನ್ನು ಕೇಳಬೇಡ, ಕೆಟ್ಟದ್ದನ್ನು ನೋಡಬೇಡ, ಕೆಟ್ಟದ್ದನ್ನು ಆಡಬೇಡ' ಎಂಬ ಸಂದೇಶ ಸಾರಿದರೆ, ಗಾಂಧೀಜಿಯವರು ಬಳಸುತ್ತಿದ್ದ ಚರಕದ ಪ್ರತಿರೂಪ ಅವರ ಬದುಕಿನ ಸರಳತೆಯನ್ನು ನೆನಪಿಸುತ್ತದೆ.

"ಗಾಂಧೀಜಿ ಬದುಕಿನ ಪ್ರಮುಖ ಘಟನಾವಳಿಗಳನ್ನು ಆಧರಿಸಿದ 100 ವಿಶೇಷ ಛಾಯಾಚಿತ್ರಗಳು, ಅವರ ಮೌಲ್ಯಾಧಾರಿತ ವಿಚಾರಗಳು, ಭಾಷಣಗಳು ಹಾಗೂ ಭಜನೆಗಳನ್ನು ಸಂಯೋಜನೆಗೊಳಿಸಿ ಅವರ ಜೀವನವನ್ನು ಪರಿಚಯಿಸುವ ವ್ಯವಸ್ಥೆ ಮಾಡಲಾಗಿದೆ" ಎಂದು ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ಅಮರೇಶ ಯತಗಲ್ ವಿವರಿಸುತ್ತಾರೆ.

ವಿಶ್ವವಿದ್ಯಾಲಯದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಭಜನೆಗಳು ಸೇರಿದಂತೆ ಇಲ್ಲಿ ನಡೆಯುವ ಹಲವು ಚಟುವಟಿಕೆಗಳು ಆಶ್ರಮದ ಸುಂದರ ಪರಿಸರದ ಅನುಭೂತಿಯನ್ನು ಮತ್ತೊಂದು ಹಂತಕ್ಕೆ ಕೊಂಡೊಯ್ಯುತ್ತವೆ.

ಸಾರ್ವಜನಿಕರ ವೀಕ್ಷಣೆಗೆ ಮುಕ್ತ

ಸಾರ್ವಜನಿಕರ ವೀಕ್ಷಣೆಗೆ ಮುಕ್ತವಾಗಿರುವ ಈ ಆಶ್ರಮಕ್ಕೆ ಸ್ಥಳೀಯರು ಹಾಗೂ ಪ್ರವಾಸಿಗರು ಭೇಟಿ ನೀಡಿ ಗಾಂಧೀಜಿಯವರ ಚಿಂತನೆಗಳ ಪರಿಚಯ ಪಡೆಯುತ್ತಿದ್ದಾರೆ. ಗದಗಿಗೆ ಭೇಟಿ ನೀಡುವ ಪ್ರವಾಸಿಗರು ಬೆಳಿಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ಹಾಗೂ ಮಧ್ಯಾಹ್ನ 2ರಿಂದ ಸಂಜೆ 5ರವರೆಗೆ ಆಶ್ರಮವನ್ನು ವೀಕ್ಷಿಸಬಹುದಾಗಿದೆ.ಪ್ರತಿ ತಿಂಗಳ 11ರಂದು ಸಂಜೆ 5ರಿಂದ 6ರವರೆಗೆ 'ಗಾಂಧಿ ಚಿಂತನ-ಮಂಥನ' ಕಾರ್ಯಕ್ರಮವನ್ನೂ ನಡೆಸಲಾಗುತ್ತದೆ. 2016ರಲ್ಲಿ ಆರಂಭಗೊಂಡ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯಕ್ಕೆ ರಾಜ್ಯದ ವಿವಿಧ ಭಾಗಗಳಿಂದ ಮಾತ್ರವಲ್ಲದೆ ದೇಶದ ಈಶಾನ್ಯ ಭಾಗ ಸೇರಿದಂತೆ ಹೊರರಾಜ್ಯಗಳಿಂದಲೂ ವಿದ್ಯಾರ್ಥಿಗಳು ಅಧ್ಯಯನಕ್ಕಾಗಿ ಬರುತ್ತಿರುವುದು ಉಲ್ಲೇಖಿಸಬೇಕಾದ ಮತ್ತೊಂದು ಅಂಶವಾಗಿದೆ.


ವಾರಾಂತ್ಯ ಭೇಟಿಗೆ ಸೂಕ್ತ ತಾಣ

ನಾಡಿನ ವಿವಿಧೆಡೆ ಗಾಂಧಿ ಭವನಗಳು ಮತ್ತು ಗಾಂಧಿ ಅಧ್ಯಯನ ಕೇಂದ್ರಗಳಿದ್ದರೂ, ಸಾಬರಮತೀ ಆಶ್ರಮದ ಪ್ರತಿರೂಪವು ಅಪರೂಪ. ಮೈಸೂರು ವಿಶ್ವವಿದ್ಯಾಲಯದ ಆವರಣದ ಬಳಿಕ ನಾಗಾವಿಯ ಆ ಆಶ್ರಮವು ಅಂತಹ ಎರಡನೇ ಪ್ರತಿರೂಪವಾಗಿದೆ. ಈ ಆಶ್ರಮವು ಗಾಂಧೀಜಿಯವರ ತತ್ವ-ಸಿದ್ಧಾಂತ ಮತ್ತು ಆದರ್ಶಗಳನ್ನು ಹೊಸ ಪೀಳಿಗೆಯವರಿಗೆ ಪರಿಚಯಿಸುವ ಕೇಂದ್ರವಾಗಿ ರೂಪುಗೊಂಡಿದೆ. ವಾರಾಂತ್ಯದ ಪ್ರವಾಸಕ್ಕೂ ಇದು ಸೂಕ್ತ ತಾಣವಾಗಿದ್ದು, ಎಲ್ಲ ವಯೋಮಾನದವರನ್ನೂ ಆಕರ್ಷಿಸುವಂತಿದೆ.

ಇಲ್ಲಿಗೆ ಭೇಟಿ ನೀಡುವವರು ಗಾಂಧೀಜಿಯವರ ಜೀವನ ಮತ್ತು ಚಿಂತನೆಗಳನ್ನು ಅರಿಯುವ ಜತೆಗೆ ನಾಗಾವಿ ಗುಡ್ಡದ ನೈಸರ್ಗಿಕ ಸೌಂದರ್ಯವನ್ನೂ ಕಣ್ತುಂಬಿಕೊಳ್ಳಬಹುದು. ಪ್ರಶಾಂತ ಪರಿಸರದಲ್ಲಿ ಕುಳಿತು ಸಹಭೋಜನ ಸವಿಯುವ ಅವಕಾಶವೂ ಇದ್ದು ವಿಶಿಷ್ಟ ತಾಣವಾಗಿ ಹೆಸರಾಗುತ್ತಿದೆ.



Downloaded From:www.kpscvaani.com



ಮಂಗಳೂರಿಗೆ ಗಾಂಧಿ ಭೇಟಿಯ ನೆನಪು

ವೇಮಗಲ್ ಸೋಮಶೇಖರ್

ಹರಿಜನರ ಏಳ್ಗೆಗಾಗಿ ನಿಧಿ ಸಂಗ್ರಹಿಸಲು 1933ರ ನವಂಬರ್ 7ರಂದು ವಾರ್ಧಾದಿಂದ ತಮ್ಮ ಅನುಯಾಯಿಗಳೊಂದಿಗೆ ಪ್ರವಾಸ ಪ್ರಾರಂಭಿಸಿದ ಮಹಾತ್ಮ ಗಾಂಧೀಜಿ 1934ರ ಫೆಬ್ರವರಿ 24ರ ಶನಿವಾರ ಬೆಳಿಗ್ಗೆ ಮಡಿಕೇರಿಯಿಂದ ಹೊರಟು ಪುತ್ತೂರು, ಉಪ್ಪಿನಂಗಡಿ, ಬಂಟ್ವಾಳ ಮೂಲಕ ರಾತ್ರಿ ಮಂಗಳೂರು ತಲುಪಿದರು.


ಮರುದಿನ, ಅಂದರೆ, ಫೆ.25ರ ಬೆಳಗ್ಗೆ ನಡೆದ ಮೊತ್ತಮೊದಲು ಮಂಗಳೂರಿನ ಜ್ಞಾನೋದಯ ಸಮಾಜದವರಿಂದ ಹರಿಜನ ನಿಧಿ ಮತ್ತು ಭಿನ್ನವತ್ತಳೆ ಸಮರ್ಪಣೆ ಕಾರ್ಯಕ್ರಮ ನಡೆಯಿತು. ಭಿನ್ನವತ್ತಳೆಯಲ್ಲಿ "ಈ ಸಮಾಜ ಮೀನುಗಾರರಲ್ಲಿ ಮಿತಪಾನ ಜಾಗೃತಿಯ ಬಗ್ಗೆ ಅರಿವು ಮೂಡಿಸಲು ಚಳವಳಿಯನ್ನು

Downloaded From:www.kpscvaani.com

ಹಮ್ಮಿಕೊಂಡಿದೆ. ಇವರು ಪಶ್ಚಿಮ ತೀರದ ಉದ್ದಕ್ಕೂ ಇದ್ದಾರೆ. ಈ ಸಮಾಜದ ಮೇಲೆ ಮದ್ಯಪಾನವು ಬಹಳ ಕೆಡಕು ಮಾಡಿದೆ. ಉಪ್ಪಿನ ತೆರಿಗೆ ಎಲ್ಲರಿಗಿಂತ ತಮಗೆ ಹೆಚ್ಚು ಭಾರವಾಗಿ ಪರಿಣಮಿಸಿದೆ; ಏಕೆಂದರೆ, ಮೀನುಗಾರಿಕೆಗೆ ಉಪ್ಪು ಅತ್ಯಗತ್ಯ" ಎಂದು ಹೇಳಲಾಗಿತ್ತು. ಅದಕ್ಕೆ ಉತ್ತರವಾಗಿ ಗಾಂಧೀಜಿ ಅವರು "ಕುಡಿತದ ದುಶ್ಚಟವನ್ನು ಹೋಗಲಾಡಿಸಲು ನಿಮ್ಮ ಪ್ರಯತ್ನ ಪ್ರಶಂಸನೀಯ. ಆ ಚಟವನ್ನು ಬಿಡುವುದು ಬಹಳ ಕಷ್ಟ ಎಂಬುದು ನನಗೆ ಗೊತ್ತು, ನಿಮ್ಮ ಪ್ರಯತ್ನವನ್ನು ಬಿಡಬೇಡಿ. ಸಂಪೂರ್ಣ ಸಫಲತೆ ಸಿಗಲಿಲ್ಲ ಎಂದು ನಿರಾಶರಾಗಬೇಡಿ. ಒಂದು ಸಲಹೆ ಕೊಡುತ್ತೇನೆ; ಕುಡಿಯಬೇಡಿ ಎಂದು ಪ್ರಚಾರ ಮಾಡಿದರೆ ಸಾಲದು. ಎಷ್ಟೋ ಸಲ ಏನೂ ಕೆಲಸವಿಲ್ಲದ್ದರಿಂದ ಜನ ಕುಡಿಯುತ್ತಾರೆ. ಆದ್ದರಿಂದ, ಅವರಿಗೆ ಉದ್ಯೋಗ ಸಿಗುವಂತೆ ಏನಾದರೂ ಮಾಡಿ. ಇದರಲ್ಲಿ ಸಫಲವಾಗಿರುವ ಇತರರನ್ನು ಅನುಕರಿಸಿ" ಎಂದಿದ್ದರು.

ಮೀನುಗಾರರಿಗೆ ಉಪ್ಪು ಎಷ್ಟು ಅಗತ್ಯ ಎಂಬುದನ್ನು ನಾನು ಬಲ್ಲೆ. ಎಂದಾದರೂ ಒಂದು ದಿನ ಈ ಉಪ್ಪಿನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಲ್ಲೆವು ಎಂಬ ಧೈರ್ಯ ನನಗಿದೆ. ನನಗೆ ಈ ಬಗ್ಗೆ ನಿರಾಸೆ ಇಲ್ಲ. ಇದು ಒಂದು ಕನಿಕರದ ವಿಷಯ. ಯಾವ ವಿಷಯವಾಗಲೀ ಅದಕ್ಕೆ ಪ್ರಾಮಾಣಿಕವಾಗಿ ಪ್ರಯತ್ನಿಸಿದರೆ ಸಫಲತೆ ಸಿಗಲೇಬೇಕು" ಎಂಬ ಮಾತುಗಳನ್ನೂ ಆಡಿದ್ದರು.

ನಂತರ ಹತ್ತುಸಾವಿರಕ್ಕೂ ಮೀರಿದ ಜನಸ್ತೋಮದ ನಡೆದ ಸಾರ್ವಜನಿಕ ಸಭೆಯಲ್ಲಿ ಮಂಗಳೂರಿನ ಮಹಿಳೆಯರು ಹರಿಜನ ನಿಧಿಗೆ ಶೇಖರಿಸಿದ್ದ 235 ರೂಪಾಯಿಗಳನ್ನು ಸಮರ್ಪಿಸಿ ಭಿನ್ನವತ್ತಳೆಯನ್ನು ಅರ್ಪಿಸಿದರು. ಅಲ್ಲಿನ ಮಹಿಳೆಯರ ಚಳವಳಿಯ ಜೀವಾಳವಾದ ಶ್ರೀಮತಿ ಆನಂದೀಬಾಯಿ ಅವರು ಅದನ್ನು ಓದಿದರು. ನೆರೆದ ಜನರನ್ನು ಉದ್ದೇಶಿಸಿ ಮಾತನಾಡಿದ ಗಾಂಧಿ, ಹರಿಜನ ಸೇವೆಗೆ ಮಹಿಳೆಯರು ಮುಂದೆ ಬರಬೇಕೆಂದೂ, ಹರಿಜನ ನಿಧಿಗೆ ನೀವು ನೀಡಿದ ಹಣ ಸಾಲದೆಂದೂ ಅಭಿಪ್ರಾಯಪಟ್ಟರು. ಆಗ, ತಕ್ಷಣವೇ ಹೆಂಗಳೆಯರು ಗಾಂಧೀಜಿಯವರಿದ್ದ ವೇದಿಕೆಗೆ ಆಗಮಿಸಿ ತಮ್ಮ ಒಡವೆ ಮತ್ತು ಹಣವನ್ನು ಧಾರಾಳವಾಗಿ ನೀಡಿದರು. ಈ ಕಾಣಿಕೆಗಳಿಂದಾಗಿ, ಗಾಂಧಿಯವರ ಜೊತೆಯಲ್ಲಿಯೇ ಇದ್ದ ಠಕ್ಕರಬಾಪಾ ಅವರ ದೊಡ್ಡ ಜೇಬುಗಳೂ ಸಹ ಒಡವೆಗಳಿಂದ ತುಂಬಿಹೋಗಿ ಹಿಡಿಸದೇ ಹೋದವು. ಸಭೆಯಲ್ಲಿಯೇ ಆ ಒಡವೆಗಳನ್ನು ಗಾಂಧೀಜಿ ಹರಾಜು ಹಾಕಿದರು. ನಂತರ ಕೆನರಾ ಪ್ರೌಢಶಾಲೆಯಲ್ಲಿ ಶ್ರೀ ವಿಠಲಭಾಯಿ ಪಟೇಲ (ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಅಣ್ಣ) ಅವರ ಭಾವಚಿತ್ರವನ್ನು ಅನಾವರಣಗೊಳಿಸಿದರು.





ನಂತರ ಶ್ರೀ ಕುದ್ಮುಲ್ ರಂಗರಾವ್ ಅವರು 1897ರಲ್ಲಿ ಸ್ಥಾಪಿಸಿದ್ದ ದಲಿತ ವರ್ಗದ ಸೇವಾ ಸಮಾಜಕ್ಕೆ (Depressed Classes Mission) ತೆರಳಿದರು. ಈ ಸೇವಾ ಸಮಾಜ ಒಂದು ಹೈಯರ್ ಎಲಿಮೆಂಟರಿ ಶಾಲೆಯನ್ನು, ಎರಡು ಲೋಯರ್ ಎಲಿಮೆಂಟರಿ ಶಾಲೆಗಳನ್ನು ಹಾಗೂ ಒಂದು ವಯಸ್ಕರ ಶಿಕ್ಷಣ ಕೇಂದ್ರವನ್ನು ನಡೆಸುತ್ತಿತ್ತು. ವಿದ್ಯಾರ್ಥಿಗಳು ಕನ್ನಡದಲ್ಲಿ ಸ್ವಾಗತ ಗೀತೆ ಹಾಡಿದರು. ಶಾಲೆಯ ತೋಟದಲ್ಲಿ ಹುಡುಗರು ಬೆಳೆದ ತರಕಾರಿಗಳನ್ನು ಹಾಗೂ ಅವರು ಮಾಡಿದ ಕೈಕೆಲಸಗಳನ್ನು ಗಾಂಧೀಜಿ ಪರಿಶೀಲಿಸಿದರು. ಶಾಲೆಯ ಸಂಸ್ಥಾಪಕರಾದ ದಿವಂಗತ ಶ್ರೀ ಕುದ್ಮುಲ್ ರಂಗರಾಯರ (1859–1928) ಭಾವಚಿತ್ರವನ್ನು ನೋಡಿ ಗಾಂಧೀಜಿ ಸಂತೋಷಪಟ್ಟು ಮಕ್ಕಳಿಗೆ ಬಹುಮಾನ ವಿತರಿಸಿದರು.

ತದನಂತರ, ಅಲ್ಲಿನ ಮೊಗವೀರ ಸಮಾಜಕ್ಕೆ ಭೇಟಿ ಕೊಟ್ಟರು. ಅಲ್ಲಿ ಜೋಗಮ್ಮ ಎಂಬ ಮೊಗವೀರ ತರುಣಿ ಗಾಂಧೀಜಿಗೆ ಒಂದು ಬೆಳ್ಳಿಯ ರಾಟಿಯನ್ನು ಕಾಣಿಕೆಯಾಗಿ ಅರ್ಪಿಸಿದಳು. ದ.ಕ.ಜಿಲ್ಲೆಯ ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಕಾರ್ನಾಡ ಸದಾಶಿವರಾಯರ (1881–1936) ಮೇಲಿನ ಮೊಕದ್ದಮೆ ಆ ತಿಂಗಳಲ್ಲೇ ವಿಚಾರಣೆ ನಡೆಯಬೇಕಾಗಿತ್ತು. ಅವರು ಅಗರ್ಭ ಶ್ರೀಮಂತರಾದರೂ ಗಾಂಧಿಯವರ ಸತ್ಯಾಗ್ರಹ ಚಳವಳಿಗಾಗಿ ಎಲ್ಲವನ್ನೂ ಧಾರೆ ಎರೆದಿದ್ದರು.

ಸದಾಶಿವರಾಯರ ಸಮರ್ಪಣೆಯನ್ನು ಮೆಚ್ಚಿದ ಗಾಂಧೀಜಿ, ಅವರ ತಾಯಿಯವರನ್ನೂ ಕಂಡು ಅಭಿನಂದಿಸಿದರು. ನಂತರ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಅವರ ಮಗ ಮತ್ತು ಅವರ ತಾಯಿ ಮೂವರೂ ಗಾಂಧಿಯವರನ್ನು ಭೇಟಿಯಾದರು. ಅಂದು ಬೆಳಗ್ಗೆಯಿಂದ ಮಧ್ಯಾಹ್ನದವರೆಗೂ ಮಂಗಳೂರಿನಲ್ಲಿ ನಡೆದ ಕಾರ್ಯಕ್ರಮಗಳ ನಂತರ ಗಾಂಧೀಜಿ ಪರಿವಾರದವರೆಲ್ಲರೂ ಕುಂದಾಪುರದತ್ತ ಕಾರಿನಲ್ಲಿ ಪ್ರಯಾಣ ಬೆಳೆಸಿದರು.

Downloaded From:www.kpscvaani.com



ವಾಸ್ತವಿಕತೆಯಲ್ಲಿ ಗಾಂಧಿ ಕಟ್ಟಿದ ದೇಶ

ಅರವಿಂದ ಚೊಕ್ಕಾಡಿ

ಮಹಾತ್ಮಾ ಗಾಂಧಿಯವರ ಕುರಿತ ತತ್ವಗಳು ಮತ್ತು ಗಾಂಧಿ ಚಿಂತನೆಗಳ ಚರ್ಚೆಗಳಲ್ಲಿ ಹಲವು ಚಿಂತಕರ ವಿಚಾರಗಳು ಚರ್ಚೆಗೆ ಬರುತ್ತವೆ. ಅವು ಪರಸ್ಪರ ತುಲನೆಗಳಿಗೂ ಒಳಗಾಗುತ್ತವೆ. ಆದರೆ ಇಂತಹ ತುಲನೆಗಳಲ್ಲಿ ಮೌನವಾಗಿರುವ ಒಂದು ಸ್ಥಳವಿದೆ. ಚಿಂತನೆಗಳೊಂದಿಗೆ ಚಿಂತನೆಗಳು, ತತ್ವಗಳೊಂದಿಗೆ ತತ್ವಗಳು ತುಲನೆಗೆ ಒಳಗಾಗುವುದು ಸರಿಯೇ ಆಗಿದೆ. ಆದರೆ ಗಾಂಧಿ ಚಿಂತನೆಗಳು ಉಳಿದ ಬಹುತೇಕ ಚಿಂತನೆಗಳಿಗಿಂತ ಭಿನ್ನ. ಏಕೆಂದರೆ ಗಾಂಧಿ ಚಿಂತನೆಗಳು ಕೇವಲ ಚಿಂತನೆಗಳಾಗಿ ಉಳಿಯಲಿಲ್ಲ. ಅವು ಕ್ರಿಯೆಯೂ ಆಗಿ ಬದಲಾದವು. ಯಾವುದೇ ಚಿಂತನೆಗಳನ್ನು ಚಿಂತನೆಗಳಾಗಿ ಹೇಳಲು ಇರುವ ಸವಾಲುಗಳು ಕಡಿಮೆ. ವಾಸ್ತವದಲ್ಲಿ ಅನುಷ್ಠಾನಕ್ಕೇ ತೊಡಗಿದಾಗ ಸವಾಲುಗಳು ಹೆಜ್ಜೆ ಹೆಜ್ಜೆಗೂ ತಡೆಯುತ್ತವೆ. "ಬ್ರಿಟಿಷರ ವಿರುದ್ಧ ಗಾಂಧಿಯವರ ಅಹಿಂಸಾತ್ಮಕ ಹೋರಾಟದ ಬದಲು ಸಶಸ್ತ್ರ ಕ್ರಾಂತಿ ನಡೆಸಿದ್ದರೆ ಬೇಗ ಸ್ವಾತಂತ್ರ್ಯ ಸಿಗುತ್ತಿತ್ತು. ಅಹಿಂಸಾತ್ಮಕ ಹೋರಾಟ ನಿಷ್ಪಯೋಜಕ" ಎಂಬ ವಾದ ಸರಣಿ ಪ್ರಸ್ತುತ ದಿನಗಳಲ್ಲಿ ಬಹುವಾಗಿ ಚಲಾವಣೆಯಲ್ಲಿದೆ. ಇದನ್ನು ವ್ಯಂಗ್ಯವಾಗಿ,"ಚರಕದಿಂದ ಸ್ವಾತಂತ್ರ್ಯ

Downloaded From:www.kpscvaani.com

ಬರುವುದಿಲ್ಲ; ನೂಲು ಬರುತ್ತದೆ ಅಷ್ಟೆ" ಎಂದೂ ಹೇಳಲಾಗುತ್ತದೆ. ಆದರೆ ಇದನ್ನು ಐತಿಹಾಸಿಕ ಪರಿಶೀಲನೆಗೊಳಪಡಿಸಿದಾಗ ಕಾಣಿಸುವ ಸತ್ಯಗಳು ಬೇರೆ.

ಸಂಭವಿಸದೆ ಇರುವುದನ್ನು ಊಹಾತ್ಮಕವಾಗಿ ಹೇಳುವುದು ಸಮಂಜಸವಲ್ಲ. ಆದರೆ ಇತಿಹಾಸದ ಅನುಭವಗಳಿಂದ ಅರ್ಥ ಮಾಡಿಕೊಳ್ಳುವುದಕ್ಕೆ ಮಹತ್ವ ಇದ್ದೇ ಇದೆ. ಈ ನಿಟ್ಟಿನಲ್ಲಿ ಹಿಂಸಾತ್ಮಕ ಹೋರಾಟದಿಂದ ಬ್ರಿಟಿಷರನ್ನು ಮಣಿಸಬಹುದಾಗಿದ್ದ ಸಾಧ್ಯತೆ ಎಷ್ಟು ಎಂದು ಗೊತ್ತಾಗಬೇಕಾದರೆ ಬ್ರಿಟಿಷರ ಯುದ್ಧ ಇತಿಹಾಸವನ್ನು ನೋಡಬೇಕು.

ಕೈಗಾರಿಕಾ ಕ್ರಾಂತಿಯ ನಂತರ ಬ್ರಿಟನ್ ಯಾವ ರೀತಿ ಸೈನಿಕ ಸನ್ನದ್ಧತೆಯನ್ನು ಹೊಂದಿತ್ತು ಎಂದರೆ ಬ್ರಿಟಿಷ್ ಸೈನ್ಯ ಭಾಗವಹಿಸಿದ್ದ ಯುದ್ಧಗಳಲ್ಲಿ ಅದು ಸೋತದ್ದೇ ಇಲ್ಲ. ಫ್ರಾನ್ಸ್ ಮತ್ತು ಬ್ರಿಟನ್ ನಡುವೆ ನಡೆದ ಸಪ್ತವಾರ್ಷಿಕ ಯುದ್ಧ (1754–1763)ದಲ್ಲಿ ಬ್ರಿಟಿಷರೇ ಗೆದ್ದರು. 1854–56 ರಲ್ಲಿ ರಶ್ಯಾದೊಂದಿಗೆ ಬ್ರಿಟನ್, ಫ್ರಾನ್ಸ್, ಆಟೋಮನ್ ಸಾಮ್ರಾಜ್ಯ, ಸಾರ್ಡೀನಿಯ, ಪೀಡ್ಮಾಂಟ್‌ಗಳು ಡ್ಯೂಕ್ ಆಫ್ ವೆಲ್ಲಿಂಗ್ಟನ್ ನಾಯಕತ್ವದಲ್ಲಿ ನಡೆಸಿದ ಕ್ರಿಮಿಯಾ ಯುದ್ಧದಲ್ಲಿಯೂ ವೆಲ್ಲಿಂಗ್ಟನ್ ಸೇನೆಯೇ ಗೆದ್ದಿತು. 1899–1902 ರ ಬಾಯೆರ್ ಕದನ, 1842 ರಲ್ಲಿ ಚೀನಾದಲ್ಲಿ ನಡೆದ ಓಪಿಯಮ್ ಕದನದಲ್ಲೂ ಬ್ರಿಟಿಷರೆ ಗೆದ್ದರು. 1815ರ ವಾಟರ್‌ಲೂ ಕದನದಲ್ಲಿ ನೆಪೋಲಿಯನ್ ಬೋನೋಪಾರ್ಟೆಯನ್ನೂ ಬ್ರಿಟಿಷರು ಸೋಲಿಸಿದರು. 20 ನೆಯ ಶತಮಾನದ ಎರಡು ಜಾಗತಿಕ ಯುದ್ಧಗಳಲ್ಲೂ ಬ್ರಿಟಿಷರು ಇದ್ದ ಕಡೆಯೇ ಅಂತಿಮ ಗೆಲುವು ಆಗಿತ್ತು. 1775–1783 ರ ಅಮೆರಿಕ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬ್ರಿಟಿಷರು ಸೋತದ್ದು ಹೌದು; ಆದರೆ, ಅಲ್ಲಿ ಬ್ರಿಟಿಷರನ್ನು ಎದುರಿಸಿದ್ದು ಅಮೆರಿಕವನ್ನೆ ತಾಯ್ನಾಡಾಗಿ ಪರಿಗಣಿಸಿ ನೆಲೆಸಿದ ಬ್ರಿಟಿಷರೇ ಆಗಿದ್ದರು ಹೊರತು ಅಮೆರಿಕದ ಮೂಲ ನಿವಾಸಿಗಳಾದ ರೆಡ್ ಇಂಡಿಯನ್ಸ್‌ಗೆ ಸೋತದ್ದಲ್ಲ.

ಐರ್ಲ್ಯಾಂಡ್ ಯುದ್ಧಗಳ ತರುವಾಯ ಐರ್ಲ್ಯಾಂಡ್ ಅನ್ನು ವಿಭಜಿಸುವುದನ್ನೆಲ್ಲ ಮಾಡಿ ಡೊಮಿನಿಯನ್ ಸ್ಟೇಟಸ್ ಕೊಟ್ಟು ಬ್ರಿಟಿಷರು ಐರ್ಲ್ಯಾಂಡ್ ಅನ್ನು ಬಿಟ್ಟು ಕೊಟ್ಟಿದ್ದರು. ಆದರೆ ಐರ್ಲ್ಯಾಂಡಿನ ವಿಚಾರದಲ್ಲಿ ನೂರು ವರ್ಷಗಳಿಂದ 'ಹೋಂ ರೂಲ್' ಬೇಡಿಕೆಯ ಚಳವಳಿ ನಡೆದಿತ್ತು. ಹೋರಾಟದ ಹಿಂದೆ ತಾತ್ವಿಕ ಮತ್ತು ವೈಚಾರಿಕ ಸಂಗತಿಗಳಿದ್ದವು. ಹಾಗೆ ನೋಡಿದರೆ, ಭಾರತ ಬ್ರಿಟಿಷರ ಅಧೀನದಲ್ಲಿದ್ದಾಗಲೂ ವೈಚಾರಿಕ ಪ್ರಶ್ನೆಗಳಿಗೆ ಸಾಪೇಕ್ಷವಾಗಿ ಬ್ರಿಟಿಷರು ಸ್ಪಂದಿಸಿದ್ದರು. ಈಸ್ಟ್ ಇಂಡಿಯಾ ಕಂಪನಿ ಭಾರತದಲ್ಲಿ ಹಾಕುತ್ತಿರುವ ತೆರಿಗೆಯ ಅತಿರೇಕವನ್ನು ನೋಡಿ ಕನಲಿದ ಎಡ್ಮಂಡ್ ಬರ್ಕ್ ಬ್ರಿಟಿಷ್ ಸಂಸತ್‌ನಲ್ಲಿ, "ಈಸ್ಟ್ ಇಂಡಿಯಾ ಕಂಪನಿಯಿಂದ ಬ್ರಿಟಿಷ್ ಸರ್ಕಾರ ಪಡೆಯುತ್ತಿರುವುದು ಕ್ರಿಮಿನಲ್ ತೆರಿಗೆ" ಎಂದು ಸರ್ಕಾರದ ಗಮನ ಸೆಳೆದ ನಂತರ ಈಸ್ಟ್ ಇಂಡಿಯಾ ಕಂಪನಿಯನ್ನು ನಿಯಂತ್ರಿಸುವ 1773 ರ ರೆಗ್ಯುಲೇಟಿಂಗ್ ಕಾಯ್ದೆ ಜಾರಿಗೆ ಬಂದಿತ್ತು. ಗಾಂಧೀಜಿ ಹುಟ್ಟುವ ಮೊದಲೇ ಭಾರತದಲ್ಲಿ ನಡೆದ ಸಾವಿರಾರು ಸಶಸ್ತ್ರ ಹೋರಾಟಗಳನ್ನು ಬ್ರಿಟಿಷರು ದಮನಿಸಿದ್ದರು. ಸಾಗರದ ಮೇಲೆ ಪರಮಾಧಿಕಾರವನ್ನು ಸ್ಥಾಪಿಸುವುದಕ್ಕಾಗಿಯೇ ಪೋರ್ಚುಗೀಸರ ಫ್ರಾನ್ಸಿಸ್ಕೊ ಡಿ ಅಲ್ಮೆಡಾ 'ಬ್ಲೂ ವಾಟರ್ ಪಾಲಿಸಿ' ಯನ್ನು 1505 ಜಾರಿಗೆ ತಂದಿದ್ದು, ನಂತರದ ಸುಮಾರು ನೂರು ವರ್ಷಗಳ ಕಾಲ ಪೋರ್ಚುಗೀಸರದ್ದೇ ಪರಮಾಧಿಕಾರವಿತ್ತು. ಅಂತಹ ಪೋರ್ಚುಗೀಸರ ಸಾಗರ ಪರಮಾಧಿಕಾರವನ್ನೂ ಬ್ರಿಟಿಷರು ಲೆಕ್ಕಿಸಲಿಲ್ಲ. ಛತ್ರಪತಿ ಶಿವಾಜಿ ಮಹಾರಾಜರ ನೌಕಾದಳ ಪೋರ್ಚುಗೀಸರು ಮತ್ತು ಬ್ರಿಟಿಷರನ್ನು



Downloaded From:www.kpscvaani.com

ಕೆಲವು ಪ್ರಕರಣಗಳಲ್ಲಿ ಕರಾವಳಿ ತೀರದಲ್ಲಿ ತಡೆದದ್ದು ಇದೆ. ಆದರೆ ಮಟ್ಟ ಹಾಕಲು ಆಗಲಿಲ್ಲ. 1760 ರ ಸುಮಾರಿಗೆ ಮರಾಠರ ನೌಕಾ ದಳವನ್ನು ಬ್ರಿಟಿಷರು ಸಂಪೂರ್ಣವಾಗಿ ನಾಶಪಡಿಸಿದರು. ರಾಜೇಂದ್ರ ಚೋಳ (971–1044)ನ ತರುವಾಯ ಸಶಕ್ತ ನೌಕಾ ದಳದ ಮಹತ್ವವನ್ನು ಶಿವಾಜಿ (1630–80) ಅರಿತಿದ್ದರು. ಆದರೆ ರಾಜೇಂದ್ರ ಚೋಳನ ನೌಕಾದಳಕ್ಕೆ ಸಮುದ್ರವನ್ನು ದಾಟಿ ಹೋಗಿ ಯುದ್ಧ ಮಾಡುವ ಸಾಮರ್ಥ್ಯವಿತ್ತು. ನಂತರದ 600 ವರ್ಷಗಳಲ್ಲಿ ಯುರೋಪ್‌ನಲ್ಲಿ ತಂತ್ರಜ್ಞಾನದ ಕ್ರಾಂತಿ ನಡೆದಿತ್ತು. ಆದ್ದರಿಂದ ಸಮುದ್ರವನ್ನು ದಾಟಿ ಯುರೋಪಿಯನ್ನರನ್ನು ಎದುರಿಸಬಲ್ಲಷ್ಟು ಸಶಕ್ತ ಹಡಗುಗಳನ್ನು ನಿರ್ಮಿಸಲು ಶಿವಾಜಿಗಾಗಲಿ, ನಂತರದ ಮರಾಠರಿಗಾಗಲಿ ಸಾಧ್ಯವಾಗಿರಲಿಲ್ಲ. ಸಾವಿರಾರು ಸಶಸ್ತ್ರ ಹೋರಾಟಗಳಲ್ಲಿ ಭಾರತೀಯರು ಬ್ರಿಟಿಷರಿಗೆ ಸೋತಿದ್ದಾಗ, ಎಲ್ಲರೂ ಒಗ್ಗಟ್ಟಾಗಿ ಸೇರಿದ್ದರೆ ಬ್ರಿಟಿಷರನ್ನು ಸೋಲಿಸಬಹುದಿತ್ತು ಎಂದು ಊಹಾತ್ಮಕ ತರ್ಕವನ್ನು ಮಾಡಬಹುದು. ಆದರೆ ಭೂಮಿಯ ಮೇಲೆ ಬ್ರಿಟಿಷರನ್ನು ಸೋಲಿಸಿದರೂ ಬ್ರಿಟಿಷರ ನೌಕಾದಳವನ್ನು ಎದುರಿಸಬಲ್ಲ ನೌಕಾದಳ ಭಾರತದ ಎಲ್ಲ ರಾಜರು ಸೇರಿದಾಗಲೂ ಇತ್ತು ಎನ್ನಲು ಯಾವ ಸಾಕ್ಷಿಯೂ ಸಿಗುವುದಿಲ್ಲ. ಅಂದರೆ ಸಶಸ್ತ್ರ ಯುದ್ಧದ ಮೂಲಕ ಬ್ರಿಟಿಷರನ್ನು ಬ್ರಿಟನ್ ತನಕ ಹಿಮ್ಮೆಟ್ಟಿಸಲು ಭಾರತದಲ್ಲಿ ವ್ಯವಸ್ಥೆಗಳೇ ಇರಲಿಲ್ಲ. ಅಂದರೆ ಬ್ರಿಟನ್ನಿನ ಸೈನಿಕ ಶಕ್ತಿಯ ಇತಿಹಾಸದ ಅರಿವಿದ್ದವರು ಅಹಿಂಸಾತ್ಮಕ ಹೋರಾಟದ ಹೊರತು ಬೇರೆ ಏನನ್ನೂ ಮಾಡಲು ಸಾಧ್ಯವಿರಲಿಲ್ಲ. ಇಲ್ಲಿ ಸುಭಾಷ್‌ಚಂದ್ರ ಭೋಸರು ಸ್ಮರಣಾರ್ಹರು. ಅವರು ಬ್ರಿಟಿಷ್ ವಿರೋಧಿ ಯುರೋಪಿಯನ್ನರೊಂದಿಗೆ ಸೇರಿ ಯುದ್ಧದ ಮೂಲಕ ಬ್ರಿಟಿಷರನ್ನು ಹಿಮ್ಮೆಟ್ಟಿಸುವ ಯೋಜನೆಯನ್ನೆ ರೂಪಿಸಿದ್ದರು. ಒಂದೊಮ್ಮೆ 2 ನೆಯ ಜಾಗತಿಕ ಯುದ್ಧದಲ್ಲಿ ಜರ್ಮನಿ ಮತ್ತು ಜಪಾನ್‌ಗಳು ಮೇಲುಗೈ ಪಡೆದಿದ್ದರೆ ಅದು ಸಾಧ್ಯವಾಗಬಹುದಾಗಿತ್ತು. ಆದರೆ ಆಗಲೂ ಬ್ರಿಟಿಷರೇ ಮೇಲುಗೈ ಪಡೆದಿದ್ದರು.

ಅಹಿಂಸಾತ್ಮಕ ಹೋರಾಟದ ಎರಡನೆಯ ಅನಿವಾರ್ಯತೆ ಯಾರ ವಿರುದ್ಧ ಹೋರಾಟ ಎಂಬುದನ್ನು ಅವಲಂಬಿಸಿದೆ. ಭಾರತದಲ್ಲಿನ ಬ್ರಿಟಿಷ್ ಸೈನ್ಯದಲ್ಲಿದ್ದ ಸೈನಿಕರು, ಪೊಲೀಸರು ಭಾರತೀಯರೇ ಆಗಿದ್ದರು. ಬ್ರಿಟಿಷ್ ದಳಗಳಿಗೆ ಬ್ರಿಟಿಷರು ಭಾರತೀಯ ಸಿಬ್ಬಂದಿಯನ್ನು ನೇಮಿಸಿಕೊಂಡಿದ್ದರು. ಆಗ ಸ್ವಾತಂತ್ರ್ಯ ಹೋರಾಟಗಾರರು ಬಾಂಬ್ ದಾಳಿ ನಡೆಸಿದ್ದರೆ ಬಹುಮಟ್ಟಿಗೆ ಅವರು ಬ್ರಿಟಿಷ್ ಸೇನೆ ಮತ್ತು ಪೊಲೀಸ್ ಇಲಾಖೆಯಲ್ಲಿದ್ದ ಭಾರತೀಯರನ್ನೆ ಕೊಲ್ಲಬೇಕಾದ ಪರಿಸ್ಥಿತಿ ಬರುತ್ತಿತ್ತು. ಗಾಂಧಿಯವರ ಅಹಿಂಸಾತ್ಮಕ ಹೋರಾಟವು ಭಾರತೀಯರು ಭಾರತೀಯರನ್ನೆ ಕೊಲ್ಲುವುದನ್ನು ತಪ್ಪಿಸಿತ್ತು.

ಗಾಂಧಿಯವರ ಅಹಿಂಸೆ ಒಂದು ಹೋರಾಟದ ಅಸ್ತ್ರವಾಗಲು ಹೋರಾಟ ಯಾರ ವಿರುದ್ಧ ಎನ್ನುವ ಕುರಿತ ಗಾಂಧಿಯವರ ವೈಚಾರಿಕ ಸ್ಪಷ್ಟತೆಯೂ ಕಾರಣವಾಗಿತ್ತು. ಗಾಂಧಿಯವರ ಹೋರಾಟ ಬ್ರಿಟಿಷರ ವಿರುದ್ಧವಾಗಿರಲಿಲ್ಲ. ಬ್ರಿಟಿಷ್ ಸಾಮ್ರಾಜ್ಯಶಾಹಿತ್ವದ ವಿರುದ್ಧ ಮಾತ್ರವೇ ಆಗಿತ್ತು. ಬ್ರಿಟಿಷರು ಭಾರತೀಯರಾಗಿ ನೆಲೆಸಿ ಭಾರತೀಯ ಆಡಳಿತವನ್ನು ಸ್ವೀಕರಿಸುವುದಿದ್ದರೆ ಅದಕ್ಕೆ ಗಾಂಧಿಯವರ ವಿರೋಧ ಇರಲಿಲ್ಲ. ಈ ಧೋರಣೆಯಿಂದಾಗಿ ಬ್ರಿಟಿಷ್ ಪ್ರಭುತ್ವ ಮಾತ್ರ ವಿರೋಧಿಯ ಸ್ಥಾನಕ್ಕೆ ಬಂದಿತು. ಬ್ರಿಟಿಷ್ ಪೌರರು ವಿರೋಧಿಯ ಸ್ಥಾನದಲ್ಲಿರಲಿಲ್ಲ. ಸಾಕಷ್ಟು ಬ್ರಿಟಿಷ್ ಪೌರರು ಗಾಂಧಿಯವರ ಪರ ಇದ್ದರು. ಬ್ರಿಟಿಷ್ ಪೌರರಿಂದ ಬ್ರಿಟಿಷ್ ಸಾಮ್ರಾಜ್ಯಶಾಹಿ ಪ್ರಭುತ್ವವನ್ನು ಪ್ರತ್ಯೇಕಿಸಿದ್ದು ಅಹಿಂಸಾತ್ಮಕ ಹೋರಾಟ ಬ್ರಿಟಿಷ್ ಆಡಳಿತ ದುರ್ಬಲಗೊಳ್ಳಲು ಸಹಾಯಕವಾಯಿತು. ಹಲಗಲಿಯ ಬೇಡರ ದಂಗೆ, ಸಂತಾಲ ದಂಗೆಯಂತಹ ಯಾವುದೇ ಸಶಸ್ತ್ರ ಬಂಡಾಯಗಳಲ್ಲಿ ಬಂಡಾಯವನ್ನು ದಮನಿಸಿದ ನಂತರ ಬ್ರಿಟಿಷ್ ಸರ್ಕಾರ ಬಂಡಾಯಗಾರರ ಬೇಡಿಕೆಗಳನ್ನು ಈಡೇರಿಸಲಿಲ್ಲ. ಆದರೆ ಚಂಪಾರಣ್ ಸತ್ಯಾಗ್ರಹ, ಬರ್ಡೋಲಿ ಸತ್ಯಾಗ್ರಹಗಳಲ್ಲಿ ಸತ್ಯಾಗ್ರಹಿಗಳ ಬೇಡಿಕೆಗಳನ್ನು ಈಡೇರಿಸಲಾಗಿತ್ತು. ಇದು ಅಹಿಂಸಾತ್ಮಕ ಹೋರಾಟದ ಶಕ್ತಿ. ದಕ್ಷಿಣ ಆಫ್ರಿಕಾದಲ್ಲೂ ಗಾಂಧಿ ಬ್ರಿಟಿಷರ ವಿರುದ್ಧ ಅಹಿಂಸಾತ್ಮಕ ಹೋರಾಟವನ್ನು ಯಶಸ್ವಿಗೊಳಿಸಿದ್ದರು. ಉಪ್ಪಿನ ಸತ್ಯಾಗ್ರಹದ ನಂತರ ಗಾಂಧಿ–ಇರ್ವಿನ್ ಒಪ್ಪಂದವೇ ಆಗಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು.

ಗಾಂಧಿಯವರ ಸ್ವಾವಲಂಬನೆಯ ಪರಿಕಲ್ಪನೆ, ಚರಕ ಚಳವಳಿಯಂತಹವು ಬ್ರಿಟಿಷರನ್ನು ದುರ್ಬಲಗೊಳಿಸುವ ಸಮರ್ಥ ಆಯುಧಗಳೇ ಆಗಿದ್ದವು. ಮ್ಯಾಂಚೆಸ್ಟರ್‌ನ ಬಟ್ಟೆಗಳನ್ನು ತಂದು ಭಾರತದಲ್ಲಿ ಮಾರುವ ಜವಳಿ ಉದ್ಯಮವು ಬ್ರಿಟಿಷರಿಗೆ ಅಪಾರ ಲಾಭದಾಯಕ ಉದ್ಯಮವಾಗಿತ್ತು. ಚರಕ ಚಳವಳಿಯು ಬ್ರಿಟಿಷರ ಜವುಳಿ ವ್ಯಾಪಾರವನ್ನು ದುರ್ಬಲಗೊಳಿಸಿತ್ತು. ಗಾಂಧಿ ದುಂಡು ಮೇಜಿನ ಪರಿಷತ್ತಿಗೆ ಲಂಡನ್‌ಗೆ ಹೋಗಿದ್ದಾಗ ಈತ ತಮ್ಮ ಉದ್ಯೋಗವನ್ನು ತೆಗೆದವನು ಎಂದು ಮ್ಯಾಂಚೆಸ್ಟರ್‌ನ ಬಟ್ಟೆ ಗಿರಣಿಗಳ ನೌಕರರಾಗಿದ್ದವರು ಗಾಂಧಿಯವರ ವಿರುದ್ಧ ಪ್ರತಿಭಟನೆಗಳನ್ನು ಮಾಡಿದ್ದರು. ತೆರಿಗೆ ನಿರಾಕರಣಾ ಚಳವಳಿ ಬ್ರಿಟಿಷರ ಬೊಕ್ಕಸಕ್ಕೆ ಹಣ ಹೋಗದಂತೆ ತಡೆಯುವ ಕೆಲಸವನ್ನು ಮಾಡಿತು. ಕ್ವಿಟ್ ಇಂಡಿಯಾ ಚಳವಳಿಯ ನಂತರ ವೈಸರಾಯ್ ವವೆಲ್ ಬ್ರಿಟಿಷ್ ಸರ್ಕಾರಕ್ಕೆ ಬರೆದ ಪತ್ರದಲ್ಲಿ ಖಜಾನೆ ಬರಿದಾಗಿರುವುದರ ಪ್ರಸ್ತಾಪವನ್ನೂ ಮಾಡಿದ್ದರು. ಆದ್ದರಿಂದಲೇ ಗಾಂಧಿ ಒಬ್ಬ ಮಹಾನ್ ವಾಸ್ತವ ವಾದಿ. ಬ್ರಿಟಿಷರನ್ನು ಎದುರಿಸಲು ಅಹಿಂಸಾತ್ಮಕ ಹೋರಾಟದ ಹೊರತು ಅನ್ಯ ಮಾರ್ಗವಿಲ್ಲ ಎಂಬುದನ್ನು ಕಂಡುಕೊಂಡವರಾಗಿದ್ದರು. ಅಂತಹ ಹೋರಾಟಕ್ಕೆ ಧಾರ್ಮಿಕ ಮತ್ತು ಅಧ್ಯಾತ್ಮದ ತಳಹದಿಯನ್ನು ಒದಗಿಸಿದ್ದರಿಂದ ಅಹಿಂಸಾತ್ಮಕ ಸತ್ಯಾಗ್ರಹಕ್ಕೆ ಪರಂಪರೆಯ ಶಕ್ತಿ ಮತ್ತು ಉದಾತ್ತತೆಯ ಸ್ವರೂಪವೂ ಬಂದಿತ್ತು.

ದೇಶ ಪ್ರೇಮ ಎಲ್ಲರಿಗೂ ಇರುತ್ತದೆ. ಆದರೆ ಅವರವರ

Downloaded From:www.kpscvaani.com



ಜೀವದ ಮೇಲಿನ ಪ್ರೀತಿ ದೇಶ ಪ್ರೇಮಕ್ಕಿಂತಲೂ ದೊಡ್ಡದಾಗಿರುತ್ತದೆ. ರಾಜರುಗಳ ಕಾಲದಲ್ಲೇ ಬ್ರಿಟಿಷರ ವಿರುದ್ಧ ಸಾಕಷ್ಟು ಯುದ್ಧಗಳಾಗಿದ್ದವು. ಬ್ರಿಟಿಷರನ್ನು ಎದುರಿಸಿದವರಿಗೆಲ್ಲ ದೇಶದ ಎಲ್ಲ ಭಾಗದವರೂ ಒಟ್ಟಾಗಿ ಎದುರಿಸಿದರೆ ಮಾತ್ರ ಬ್ರಿಟಿಷರನ್ನು ಅಟ್ಟಬಹುದು ಎಂದು ಗೊತ್ತಿರಲಿಲ್ಲ ಎಂದು ಭಾವಿಸಬೇಕಾಗಿಲ್ಲ. ಹಾ ಅಲಂ, ಮೀರ್ ಖಾಸಿಂ, ಟಿಪ್ಪು ಸುಲ್ತಾನ್, ನವಾಬ್ ವಜೀದ್ ಅಲಿ ಷಾ, ನಾನಾ ಫಡ್ನವೀಸ್ ಮುಂತಾದ ರಾಜರುಗಳೆಲ್ಲ ಬ್ರಿಟಿಷರ ವಿರುದ್ಧ ಎಲ್ಲರನ್ನೂ ಸಂಘಟಿಸಲು ಹೊರಟವರೇ ಆಗಿದ್ದರು. ರಾಜರು ಮಾತ್ರ ಅಲ್ಲ;1834–37ರಲ್ಲಿ ರೈತರೇ ನಡೆಸಿದ ಕೊಡಗು ಮತ್ತು ಕರಾವಳಿ ಬಂಡಾಯದಲ್ಲಿ ಹುಲಿಕಡಿದ ನಂಜಯ್ಯ ಎಂಬ ಬಂಡಾಯಗಾರ ಹೂಜಿ (ಸಂಕೇತ) ತೆಗೆದುಕೊಂಡು ಲಾಹೋರ್‌ವರೆಗೂ ಹೋಗಿದ್ದರು. ಅಂದರೆ ಎಲ್ಲರೂ ಒಟ್ಟಾಗಿಯೇ ಬ್ರಿಟಿಷರನ್ನು ಎದುರಿಸಬೇಕು ಎನ್ನುವುದು ಎಲ್ಲ ಹೋರಾಟಗಾರರಿಗೂ ಗೊತ್ತಿತ್ತು. ಆದರೆ ಆ ಕಾಲಕ್ಕೆ ಹೋರಾಟ ಎಂದರೆ ಕೊಲ್ಲುವುದು ಅಥವಾ ಸಾಯುವುದು. ಮನುಷ್ಯನನ್ನು ಹೋರಾಟದಿಂದ ಹಿಂದಕ್ಕೆ ಎಳೆಯುವ ಪ್ರಬಲ ಶಕ್ತಿ ಎಂದರೆ ಸಾವಿನ ಭಯ. ಇದನ್ನು ನಿವಾರಿಸುವುದು ಹೇಗೆ ಎನ್ನುವುದು ಬ್ರಿಟಿಷ್ ವಿರೋಧಿಗಳಿಗೆ ಗೊತ್ತಿರಲಿಲ್ಲ, ಮತ್ತು ಅದಕ್ಕೆ ಆ ಕಾಲವೂ ಪಕ್ವವಾಗಿರಲಿಲ್ಲ. ಗಾಂಧೀಜಿಯವರ ಹೋರಾಟದ ಸ್ವರೂಪ ಮಾಡಿದ ಮಹತ್ಕಾರ್ಯವೆಂದರೆ ಮನುಷ್ಯನ ಸಾವಿನ ಭಯವನ್ನು ನಿವಾರಿಸಿದ್ದು. ಸತ್ಯಾಗ್ರಹ ಮಾಡುವಾಗ ಬಂಧಿತರಾದರೆ ಹೆಚ್ಚೆಂದರೆ ನಾಲ್ಕೈದು ವರ್ಷ ಜೈಲಾಗಬಹುದು; ಮರಣ ದಂಡನೆ ಅಂತೂ ಆಗುವುದಿಲ್ಲ ಎಂದು ಯಾವಾಗ ಖಾತ್ರಿಯಾಯಿತೊ ಆಗ ಜನ ಸ್ವಾತಂತ್ರ್ಯ ಹೋರಾಟಕ್ಕೆ ಪ್ರವಾಹದೋಪಾದಿಯಲ್ಲಿ ಬಂದರು. ಇಷ್ಟೇ ಅಲ್ಲದೆ ಸಶಸ್ತ್ರ ಹೋರಾಟಕ್ಕೆ ಮಹಿಳೆಯರನ್ನು ತೊಡಗಿಸುವುದು ಬಹಳ ಕಷ್ಟ. ಎಲ್ಲ ಮಹಿಳೆಯರೂ ಭಗತ್ ಸಿಂಗ್ ಅಥವಾ ಚಂದ್ರಶೇಖರ ಅಜಾದ್ ತಾಯಿಯ ಹಾಗೆಯೇ ಇರುವುದಿಲ್ಲ. ದೇಶಕ್ಕಾಗಿ ಮಗ ಸಾಯಲಿ ಎಂದು ಬಯಸುವ ತಾಯಿ ಸಿಗುವುದು ವಿರಳ. ಆದರೆ ಸಾವಿನ ಭಯದಿಂದ ಮುಕ್ತವಾಗಿದ್ದ ಗಾಂಧೀಜಿಯ ಹೋರಾಟ ಮಹಿಳೆಯರನ್ನು ತಲುಪಿತು. ಇಡೀ ಕುಟುಂಬ ತೊಡಗಿಕೊಳ್ಳಲು ಸಾಧ್ಯವಾಯಿತು. ಜೊತೆಗೆ ಒಂದು ಕುಟುಂಬದಲ್ಲಿ ಒಬ್ಬನೇ ಗಂಡು ಮಗ ಇದ್ದರೆ ಆತ ಸತ್ಯಾಗ್ರಹದಲ್ಲಿ ಭಾಗವಹಿಸತಕ್ಕದ್ದಲ್ಲ ಎನ್ನುವ ಗಾಂಧೀಜಿಯವರ ನಿಯಮದಿಂದಾಗಿ, ದೇಶದ ಕೆಲಸಕ್ಕಾಗಿ ಕುಟುಂಬ ತನ್ನ ಮಕ್ಕಳನ್ನು ಕಳೆದುಕೊಂಡು ದುರ್ಬಲಗೊಳ್ಳುವುದು ತಪ್ಪಿತು.

ಒಂದೇ ಉದ್ದೇಶದ ಹೋರಾಟಕ್ಕೆ ದೇಶದ ಎಲ್ಲ ಭಾಗಗಳಿಂದ ಜನರು ತೊಡಗಿಕೊಂಡಾಗ ಅನುಭವಗಳ ವಿನಿಮಯವಾಗುತ್ತವೆ, ಭಾವನೆಗಳ ಹೊಂದಾಣಿಕೆ ವಿರ್ಪಡುತ್ತದೆ, ಎಲ್ಲರ ನಡುವೆಯೂ ಸಾಮಾನ್ಯತೆಯನ್ನು ರೂಪಿಸುವ ಸಂಗತಿಗಳು ಪ್ರಕಟವಾಗುತ್ತವೆ. "ನಾವೆಲ್ಲರೂ ಒಂದೇ" ಎನ್ನುವ ಭಾವನೆ ಬೆಳೆಯಲು ಇಂತಹ ಅಂಶಗಳೇ ಆಧಾರವಾಗುತ್ತವೆ. ಬ್ರಿಟಿಷರು ಹೋದ ನಂತರ ಏನು ಮಾಡಬೇಕು ಎನ್ನುವ ಚಿಂತನೆಯೊಂದು ಸ್ವಾತಂತ್ರ್ಯ ಹೋರಾಟದ ಕಾಲದಲ್ಲೆ ಸ್ಪಷ್ಟವಾಗಿ ಕಾಣಿಸಿಕೊಂಡದ್ದು ಗಾಂಧೀಜಿಯವರ ಬಳಗದಿಂದಲೇ ಆಗಿದೆ. ಅಂದರೆ ಗಾಂಧಿ ಚಳವಳಿಯು ಬ್ರಿಟಿಷರನ್ನು ಹೊರ ಹಾಕುವುದಕ್ಕಿಂತ ಹೆಚ್ಚಾಗಿ ಭಾರತೀಯರನ್ನು ಒಗ್ಗೂಡಿಸಿದ ಹೋರಾಟವಾಗಿತ್ತು. ಕೇವಲ ಬ್ರಿಟಿಷ್ ವಿರೋಧಿ ಸತ್ಯಾಗ್ರಹ ಮಾತ್ರ ಆಗಿದ್ದರೆ ಗಾಂಧೀಜಿಯವರ ಒಗ್ಗೂಡಿಸುವಿಕೆಯ ಪ್ರಯತ್ನವೂ ಕೂಡ ಬ್ರಿಟಿಷರ ನೇರ ಅಧೀನದಲ್ಲಿದ್ದ 17 ಸಂಸ್ಥಾನಗಳಿಗೆ ಸೀಮಿತವಾಗುತ್ತಿತ್ತು. 565 ರಾಜರುಗಳ ಸಂಸ್ಥಾನದ ಜನರಿಗೆ ಬ್ರಿಟಿಷರನ್ನು ತೊಲಗಿಸಿ ಆಗಬೇಕಾದ ದೊಡ್ಡ ಅಗತ್ಯವೇನೂ ಇರಲಿಲ್ಲ. ಅವರಿಗೆ ಅವರದೇ ರಾಜರು ಇದ್ದರು. ರಾಜರುಗಳಿಗೆ ಬ್ರಿಟಿಷ್ ಸಾಮ್ರಾಟನಿಗೆ ಕೊಡಬೇಕಾದ್ದನ್ನು ಕೊಟ್ಟರೆ ವಿದೇಶಾಂಗ, ಮಿಲಿಟರಿಯಂಥ ವಿಚಾರಗಳ ಹೊರತಾಗಿ ಉಳಿದೆಲ್ಲ ವಿಷಯಗಳಲ್ಲಿ ಸಂಪೂರ್ಣ ಸ್ವಾತಂತ್ರ್ಯವೇ ಇತ್ತು. ರಾಜರುಗಳ ಒಳಾಡಳಿತದಲ್ಲಿ ಬ್ರಿಟಿಷರು ಯಾವ ಕಾನೂನೂ ಮಾಡುವಂತಿರಲಿಲ್ಲ. ರಾಜರುಗಳು ಬೇಕಾದ ಹಾಗೆ ಆಳಬಹುದಿತ್ತು. ಆವಾಗ ರಾಜರುಗಳ ಪ್ರಜೆಗಳೂ ಬ್ರಿಟಿಷರ ಅಧೀನದಲ್ಲಿದ್ದ

Downloaded From:www.kpscvaani.com

ಪ್ರಾಂತ್ಯಗಳ ಜನರೊಂದಿಗೆ ಸೇರಿಕೊಳ್ಳಬೇಕಾದರೆ ರಾಜರುಗಳ ಪ್ರಜೆಗಳಿಗೆ ಅಗತ್ಯವಾದ ಸಂಗತಿಗಳೂ ಬೇಕಾಗಿದ್ದವು. ಚರಕದಿಂದ ಬಟ್ಟೆ ತಯಾರಿಸಿಕೊಳ್ಳುವುದು, ಮದ್ಯ ಪಾನ ನಿಷೇಧ, ಅಸ್ಪೃಶ್ಯತಾ ನಿಷೇಧ, ದೇವಾಲಯಗಳಿಗೆ ಅಸ್ಪೃಶ್ಯರ ಪ್ರವೇಶ, ಗುಡಿ ಕೈಗಾರಿಕೆಯಂತಹ ವಿಚಾರಗಳು ಬ್ರಿಟಿಷರ ಅಧೀನದಲ್ಲಿದ್ದ ಪ್ರಜೆಗಳಿಗೂ, ರಾಜರುಗಳ ಅಧೀನದಲ್ಲಿದ್ದ ಪ್ರಜೆಗಳಿಗೂ ಸಮಾನವಾಗಿ ಅನ್ವಯವಾಗುವ ಸಂಗತಿಗಳಾಗಿದ್ದವು. ಗಾಂಧಿ ಚಿಂತನೆಗಳು ಮತ್ತು ಗಾಂಧಿ ತತ್ವದ ಹಾಗೂ ಹೋರಾಟದ ಮಾದರಿಗಳು ಬ್ರಿಟಿಷರನ್ನು ತೊಲಗಿಸುವಷ್ಟಕ್ಕೆ ಸೀಮಿತವಾಗದೆ ಭಾರತವನ್ನು ಕಟ್ಟುವ, ಭಾರತೀಯರ ಬದುಕನ್ನು ಹಸನುಗೊಳಿಸುವ ಹಲವು ರೂಪಗಳಲ್ಲಿ ಇದ್ದುದರಿಂದ ಎಲ್ಲರನ್ನೂ ಸಾಮಾನ್ಯವಾದ ಒಂದು ರಾಷ್ಟ್ರೀಯ ವೇದಿಕೆಯ ಪ್ರಜ್ಞೆಯಲ್ಲಿ ಸಂಘಟಿಸಲು ಸಾಧ್ಯವಾಯಿತು. ಇದರ ಪರಿಣಾಮವನ್ನು 1947ರಲ್ಲಿ ಭಾರತ ಸ್ವಾತಂತ್ರ್ಯ ಶಾಸನ ಅನುಷ್ಠಾನಕ್ಕೆ ಬಂದ ತಕ್ಷಣದಿಂದಲೇ ನಾವು ಕಾಣಬಹುದು. ನಿಜವಾಗಿ ಯಾವ ರಾಜರುಗಳಿಗೂ ಅವರ ಅಧಿಕಾರವನ್ನು ಭಾರತ ಸರ್ಕಾರಕ್ಕೆ ಕೊಟ್ಟು ತಾವು ಸಾಮಾನ್ಯ ಪೌರನಾಗಿ ಬಾಳುವುದು ಇಷ್ಟವಿರಲಿಲ್ಲ. ಇಷ್ಟವಾಗಲು ಸಾಧ್ಯವೂ ಇಲ್ಲ. ಭಾರತೀಯ ಒಕ್ಕೂಟಕ್ಕೆ ಸೇರಲು ಸಹಿ ಮಾಡಿದ ಮೊದಲ ಸಂಸ್ಥಾನವಾದ ಮೈಸೂರಿನ ಒಡೆಯರ್ ಸಂಸ್ಥಾನವೂ ಕೂಡ ಸ್ವ ಇಚ್ಛೆಯಿಂದ ಸೇರಿದ್ದಲ್ಲ. ನಿಜವಾಗಿ ಮೈಸೂರು ಸಂಸ್ಥಾನದ ಸ್ಥಾನ ಉಳಿದ ರಾಜರುಗಳಿಗಿಂತ ಕಡಿಮೆ ಮಟ್ಟದ್ದಾಗಿದ್ದು ಬ್ರಿಟಿಷರ ಅಧೀನತೆ ಜಾಸ್ತಿ ಇತ್ತು. ಏಕೆಂದರೆ ಉಳಿದ ರಾಜರುಗಳೆಲ್ಲ 1798 ರಲ್ಲಿ ವೆಲ್ಲೆಸ್ಲಿ ಜಾರಿಗೆ ತಂದ ಸಹಾಯಕ ಸೈನ್ಯ ಪದ್ಧತಿಗೆ ಒಳಪಟ್ಟವರು. ಅವರ ಒಳಾಡಳಿತದಲ್ಲಿ ಬ್ರಿಟಿಷರು ಮಧ್ಯ ಪ್ರವೇಶಿಸುವಂತಿರಲಿಲ್ಲ. ಮೈಸೂರು ಸಂಸ್ಥಾನ, ಒಡೆಯರ್ ಬ್ರಿಟಿಷರೊಂದಿಗೆ ಮಾಡಿಕೊಂಡ ಒಪ್ಪಂದದ ಪರಿಣಾಮ ಅಲ್ಲ. ಬದಲು ಬ್ರಿಟಿಷರು, ಮರಾಠರು, ನಿಜಾಮರು ಒಟ್ಟಾಗಿ ಟಿಪ್ಪೂ ಸುಲ್ತಾನ್ ಹತ್ಯೆ ಮಾಡಿದ ನಂತರ ತಾವು ಹಂಚಿಕೊಂಡು ಉಳಿದ ಭಾಗವನ್ನು ಒಡೆಯರ್‌ಗೆ ಕೊಡೋಣ ಎಂದು ನಿಶ್ಚಯಿಸಿ ಕೊಟ್ಟದ್ದಾಗಿತ್ತು. ಆದ್ದರಿಂದ ವಿಶೇಷ ಸಹಾಯಕ ಸೈನ್ಯ ಪದ್ಧತಿಗೆ ಒಳಪಟ್ಟ ಮೈಸೂರಿನ ಒಳಾಡಳಿತದಲ್ಲೂ ಮಧ್ಯ ಪ್ರವೇಶಿಸಿ ಒಡೆಯರ್ ಅನ್ನು ಅಧಿಕಾರದಿಂದ ಕೆಳಗಿಳಿಸುವ ಅಧಿಕಾರವೂ ಬ್ರಿಟಿಷರಿಗಿತ್ತು. ಮುಮ್ಮಡಿ ಕೃಷ್ಣರಾಜ ಒಡೆಯರ್ ಅನ್ನು ಬ್ರಿಟಿಷರು ಅಧಿಕಾರದಿಂದ ಇಳಿಸಿ ಕಮಿಷನರ್ ಆಳ್ವಿಕೆಯನ್ನು ಸುಮಾರು ಐವತ್ತು ವರ್ಷಗಳ ಕಾಲ ನಡೆಸಿ ಮತ್ತೆ ಸಂಸ್ಥಾನವನ್ನು ಒಡೆಯರ್‌ಗೆ ಹಿಂದಿರುಗಿಸಿದ್ದರು. ಇಷ್ಟಾದ ನಂತರವೂ ಜನರು 'ಮೈಸೂರು ಚಲೋ' ಚಳವಳಿ ನಡೆಸಿ ಭಾರತ ಒಕ್ಕೂಟಕ್ಕೆ ಸೇರಿಕೊಳ್ಳುವಂತೆ ಮಹಾರಾಜರ ಮೇಲೆ ಒತ್ತಡ ತಂದ ನಂತರವೇ ಮೈಸೂರು ರಾಜ್ಯಗಳ ವಿಲೀನೀಕರಣ ಒಪ್ಪಂದಕ್ಕೆ ಸಹಿ ಮಾಡಿತ್ತು. ಉಳಿದ ಎಲ್ಲ ರಾಜರುಗಳ ಸಂಸ್ಥಾನಗಳಲ್ಲೂ ಜನರು ಒತ್ತಡ ತಂದದ್ದರ ಪರಿಣಾಮವಾಗಿ ರಾಜರುಗಳು ತಮ್ಮ ಸಂಸ್ಥಾನಗಳನ್ನು ಭಾರತೀಯ ಒಕ್ಕೂಟಕ್ಕೆ ಸೇರಿಸಿದ್ದರು ಹೊರತು ಸ್ವ ಇಚ್ಛೆಯಿಂದ ಅಧಿಕಾರ ಕಳೆದುಕೊಳ್ಳಲು ಮುಂದಾದದ್ದಾಗಿರಲಿಲ್ಲ. ಜನರು ಈ ರೀತಿ ಒಂದು ಒಕ್ಕೂಟದ ಆಶ್ರಯಕ್ಕೆ ಬರಲು ಕಾರಣವಾದದ್ದು ಮಹಾತ್ಮಾ ಗಾಂಧಿಯವರ ಚಳವಳಿಗಳು ರೂಪಿಸಿದ ಏಕ ಸೂತ್ರವಾಗಿತ್ತು. ಆದ್ದರಿಂದ ಇಂದಿನ ಭಾರತವನ್ನು ಕಟ್ಟಿದವರು ಮಹಾತ್ಮಾ ಗಾಂಧಿಯೇ ಆಗಿದ್ದಾರೆ. ಗೋವಾದಂತಹ ಪ್ರದೇಶ ರಾಜರುಗಳಿಗಿಂತಲೂ ಭಿನ್ನವಾಗಿತ್ತು. ಆ ಕಾಲಕ್ಕೆ ಗೋವಾ ಸ್ವತಂತ್ರ ರಾಷ್ಟ್ರ; ಈಗ ಪಾಕಿಸ್ಥಾನ,ಬಾಂಗ್ಲಾ ದೇಶಗಳೆಲ್ಲ ಇದ್ದ ಹಾಗೆ. ಭಾರತ ಸರ್ಕಾರ ಗೋವಾಕ್ಕೆ ಪ್ರವೇಶಿಸಬೇಕಾದರೆ ಯುದ್ಧ ಘೋಷಿಸಿಯೇ ಪ್ರವೇಶಿಸಬೇಕಾಗಿತ್ತು ಹೊರತು ಬೇರಾವುದೇ ಅಧಿಕಾರಗಳಿರಲಿಲ್ಲ. ಆದರೆ ಗೋವಾದ ಜನಗಳಿಗೂ ಗಾಂಧಿ ಬಳಗದ ಜನರಿಗೂ ಸಂಪರ್ಕ ಮತ್ತು ಪರಸ್ಪರ ತೊಡಗಿಕೊಳ್ಳುವಿಕೆಗಳಿದ್ದವು. ಗೋವಾ ವಿಮೋಚನಾ ಚಳವಳಿಯ ನಾಯಕ ತ್ರಿಸ್ತಾವೊ ಬ್ರಗಾನ್ಸ್ ದೆ ಕುನ್ಹ ಅವರು ಜವಾಹರ ಲಾಲ್ ನೆಹರೂ ಅವರೊಂದಿಗೆ ಒಡನಾಟ, ಅಸ್ಸಾಂಗೆ ರವಾನೆಯಾಗಿದ್ದ ಕುಣಬಿ ಜನರನ್ನು ಪತ್ತೆ ಮಾಡುವುದರಲ್ಲಿ ಪರಸ್ಪರ ಸಹಕಾರಗಳನ್ನೆಲ್ಲ ಹೊಂದಿದ್ದವರಾಗಿದ್ದರು. ಗೋವಾದಲ್ಲಿ ಸತ್ಯಾಗ್ರಹಿಗಳ ಸತ್ಯಾಗ್ರಹವನ್ನೆಲ್ಲ ಮಾಡಿ ನೆಲವನ್ನು ಹದಗೊಳಿಸಿದ ನಂತರ ಭಾರತ ಸರ್ಕಾರ ಗೋವಾಕ್ಕೆ ಸೈನ್ಯವನ್ನು ಕಳಿಸಿತು. ಅಲ್ಲಿಯೂ ಕೂಡ ಭಾರತೀಯ ಒಕ್ಕೂಟಕ್ಕೆ ಸೇರಬೇಕೆಂಬ ಪ್ರಜ್ಞೆಯನ್ನು ವ್ಯಾಪಕಗೊಳಿಸಿದ್ದವರು ಸತ್ಯಾಗ್ರಹಿಗಳೇ. ಪಾಂಡಿಚೇರಿಯಲ್ಲೂ ಫ್ರೆಂಚರಿಂದ ಸ್ವತಂತ್ರಗೊಂಡು ಭಾರತೀಯ ಒಕ್ಕೂಟಕ್ಕೆ ಸೇರಲು ಒತ್ತಡ ಸೃಷ್ಟಿಸಿದವರು ಸತ್ಯಾಗ್ರಹಿಗಳೇ ಆಗಿದ್ದರು.

ಇದರರ್ಥ ಭಾರತೀಯ ಸಮಗ್ರತೆಯನ್ನು ರೂಪಿಸುವ ಸಂಗತಿಗಳೇ ಗಾಂಧಿಗಿಂತ ಮೊದಲು ಇರಲಿಲ್ಲವೆಂದಲ್ಲ. ಸ್ವತಃ ಗಾಂಧೀಜಿಯೇ, "ಭಾರತದಲ್ಲಿ ಆಡಳಿತಾತ್ಮಕ ಏಕತೆಯನ್ನು ಬ್ರಿಟಿಷರು ರೂಪಿಸಿದ್ದು ಹೌದಾದರೂ ಧಾರ್ಮಿಕ ಕೇಂದ್ರಗಳು ಧಾರ್ಮಿಕ ಏಕತೆಯನ್ನು ಸಾವಿರಾರು ವರ್ಷಗಳ ಹಿಂದೆಯೇ ರೂಪಿಸಿದ್ದವು" ಎಂದು ಹೇಳಿದ್ದಾರೆ. ಅಶೋಕ ಮತ್ತು ಸಮುದ್ರ ಗುಪ್ತರು ಭಾರತವನ್ನು ಒಟ್ಟಾಗಿಸುವ ಕೆಲಸವನ್ನು ಮಾಡಿದ್ದರು. ಆದರೆ ಅಶೋಕ ಮೌರ್ಯ ಒಟ್ಟಾಗಿಸಿದ ಭಾರತ ದಶರಥ ಮೌರ್ಯನ ಕಾಲಕ್ಕೆ ಒಟ್ಟಾಗಿ ಉಳಿದಿರಲಿಲ್ಲ. ಸಮುದ್ರಗುಪ್ತ ಒಟ್ಟಾಗಿಸಿದ ಭಾರತವು ಕುಮಾರಗುಪ್ತನ ಕಾಲಕ್ಕೆ ಒಟ್ಟಾಗಿ ಉಳಿದಿರಲಿಲ್ಲ. ಏಕೆಂದರೆ ಆಗ ರೂಪಿಸಿದ ಏಕತೆಯನ್ನು ದೀರ್ಘ ಕಾಲಕ್ಕೆ ಉಳಿಸಬಲ್ಲ ಇಡೀ ಭಾರತಕ್ಕೆ ಅನ್ವಯವಾಗುವ ಶಾಸನಾತ್ಮಕ ಒಕ್ಕೂಟವನ್ನು ರೂಪಿಸಲು ಸಾಧ್ಯವಾಗಿರಲಿಲ್ಲ. ಆದರೆ ಗಾಂಧಿ ಕಟ್ಟಿದ ಭಾರತವನ್ನು ಒಟ್ಟಾಗಿಯೇ ಉಳಿಸಲು ಭಾರತ ಸಂವಿಧಾನ ಎನ್ನುವ ಸಾರ್ವತ್ರಿಕ ಅನ್ವಯದ ಶಾಸನವನ್ನು ರೂಪಿಸಲು ಸಾಧ್ಯವಾಗಿದೆ. ಆದ್ದರಿಂದ ಇಂದಿನ ಭಾರತ ಗಾಂಧಿ ಕಟ್ಟಿದ ದೇಶವಾಗಿದೆ. ■

Downloaded From:www.kpscvaani.com




ಗಾಂಧೀಜಿ ಮತ್ತು ನೈತಿಕತೆ

ಎನ್.ಆರ್.ವಿಶುಕುಮಾರ್

ಸಾಮಾನ್ಯವಾಗಿ ಗಾಂಧೀಜಿಯವರನ್ನು ಭಾರತ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಲ್ಲಿ ರಾಜಕೀಯ ನೋಟದಲ್ಲೇ ಹೆಚ್ಚಾಗಿ ಪರಿಭಾವಿಸುವುದು ರೂಢಿಯಲ್ಲಿದೆ. ಇಂದಿನ ಪೀಳಿಗೆಯವರಿಗೆ ಅವರು ಭಾರತ ಸ್ವಾತಂತ್ರ್ಯದ ರೂವಾರಿ ಎನ್ನುವುದಷ್ಟೆ ತಿಳಿದಿದೆ . ಆದರೆ ಮಹಾತ್ಮ ಗಾಂಧಿಯವರದ್ದು ಅದಕ್ಕಿಂತಲೂ ಅಗಾಧವಾದ ಜೀವನ ಸಾಧನೆಯಿದೆ. ಸ್ವಾತಂತ್ರ್ಯ ಹೋರಾಟದಿಂದ ಆಚೆಗೂ ಹಲವು ಕ್ಷೇತ್ರಗಳಲ್ಲಿ ಅವರು ಅನನ್ಯ ಕೊಡುಗೆ ನೀಡಿದ್ದಾರೆ . ಗಾಂಧೀಜಿಯವರ ಸಾಮಾಜಿಕ ಸುಧಾರಣೆ, ಜೀವನ ವಿಧಾನ, ಆಧ್ಯಾತ್ಮಿಕ ನೋಟ, ರಾಜಕೀಯ ನಿಲುವು, ಆರ್ಥಿಕ ಚಿಂತನೆ, ಮಹಿಳಾಪರ ಧೋರಣೆ ಇತ್ಯಾದಿ ವಿಷಯಗಳಲ್ಲಿ ಅವರ ಪ್ರಖರ ಚಿಂತನೆಗಳು ಅಮೂಲ್ಯವಾಗಿವೆ .

ಹತ್ತೊಂಬತ್ತನೆಯ ಶತಮಾನದಲ್ಲಿ 1869ರ ಅಕ್ಟೋಬರ್ 2ರಂದು ಜನಿಸಿದ ಗಾಂಧೀಜಿ ಇಪ್ಪತ್ತನೇ ಶತಮಾನದ ಜಗತ್ತಿನ ಮಹಾ ನಾಯಕರಾಗಿ ಇತಿಹಾಸದಲ್ಲಿ ಹೆಸರಾಗಿದ್ದಾರೆ. ಇಂದು ಇಪ್ಪತ್ತೊಂದನೇ

Downloaded From:www.kpscvaani.com



ಶತಮಾನದಲ್ಲಿ ಅವರು ಕೇವಲ ಭಾರತ ದೇಶದ ನಾಯಕರಾಗಿ ಉಳಿಯದೇ ವಿಶ್ವನಾಯಕರಾಗಿಮಾನ್ಯರಾಗಿದ್ದಾರೆ. ಅವರ ಅಹಿಂಸಾ ಮಾದರಿಯ ಚಳವಳಿ ಇಂದು ಇಡೀ ಜಗತ್ತಿಗೆ ಮಾದರಿಯಾಗಿದೆ. ಜಗತ್ತಿನ ಇಂದಿನ ಅನೇಕ ವಿದ್ಯಮಾನಗಳ ವಿರುದ್ಧ ನಡೆಯುತ್ತಿರುವ ಹೋರಾಟಗಳಲ್ಲಿ ಗಾಂಧೀಜಿಯವರ ಚಿಂತನೆಯ ಪ್ರತ್ಯಕ್ಷ ಮತ್ತು ಪರೋಕ್ಷವಾದ ಪ್ರಭಾವಗಳಿವೆ.

ಗಾಂಧೀಜಿಯವರ ಅಹಿಂಸಾ ಮಾದರಿಯ ಚಳವಳಿಯ ಯಶಸ್ಸು ಅವರ ನೈತಿಕ ನೆಲೆಗಟ್ಟಿನ ಮೇಲೆ ನಿಂತಿದೆ. ಎಂಥಾ ವಿಷಮ ಪರಿಸ್ಥಿಯಲ್ಲಿಯೂ ಅವರು ನೈತಿಕತೆಯ ನೆಲೆಗಟ್ಟಿನ ಚೌಕಟ್ಟಿನಿಂದ ಆಚೆ ಈಚೆಗೆ ಹೋಗುತ್ತಿರಲಿಲ್ಲ. ಅಹಿಂಸಾ ಚಳವಳಿಯ ಬಗ್ಗೆ ಯಾರದ್ದೇ ಎಷ್ಟೇ ಅಸಹನೆ, ಭಿನ್ನಾಭಿಪ್ರಾಯ ವಿರೋಧಗಳಿದ್ದರೂ ಸಹ ಅವರು ನೈತಿಕತೆಯ ನೆಲೆಗಟ್ಟಿನಲ್ಲೇ ತಮ್ಮ ವಾದ ಸರಣಿಯನ್ನು ಮಂಡಿಸುತ್ತಿದ್ದರು ಹಾಗೂ ಎದುರಾಳಿಗಳ ಮನಸ್ಸನ್ನು ಪರಿವರ್ತಿಸುತ್ತಿದ್ದರು.

ಅವರ ಜೀವನದ ಪ್ರಮುಖ ಘಟನೆಗಳನ್ನು ಅವಲೋಕಿಸಿದರೆ ಜೀವಪರವಾದ ಅವರ ನೈತಿಕತೆಯ ನೋಟ ನಮಗೆ ದಕ್ಕುತ್ತದೆ. ಬಾಲ್ಯ , ತಾರುಣ್ಯ , ದಾಂಪತ್ಯ , ದಕ್ಷಿಣ ಆಫ್ರಿಕಾ ಹೋರಾಟ , ಆಶ್ರಮಜೀವನ , ಸತ್ಯಾಗ್ರಹ , ಸ್ವಾತಂತ್ರ್ಯ ಹೋರಾಟ ಎಲ್ಲ ಹಂತಗಳಲ್ಲಿಯೂ ಗಾಂಧೀಜಿಯವರ ನೈತಿಕತೆ ಎದ್ದು ಕಾಣುತ್ತದೆ .

ಮೋಹನದಾಸ ಕರಮ ಚಂದ ಗಾಂಧಿ ಬಾಲಕನಾಗಿದ್ದಾಲೇ ತಮ್ಮ ತಾಯಿ ತಂದೆಯವರಿಂದ ನೈತಿಕತೆಯ ನೀತಿ ಪಾಠಗಳನ್ನು ತಮ್ಮ ಕಲಿತಿದ್ದರು. ಸತ್ಯ ಹರೀಶ್ಚಂದ್ರ ನಾಟಕ ನೋಡಿ ತಾನೆಂದೂ ಸುಳ್ಳು ಹೇಳಬಾರದು ಎನ್ನುವ ಸಂಕಲ್ಪವನ್ನು ತಾವಾಗಿಯೇ ತಮ್ಮ ಮನಸ್ಸಿನಲ್ಲಿಯೇ ಮಾಡಿಕೊಂಡಿದ್ದರು. ಶಾಲಾ ತನಿಖಾಧಿಕಾರಿಗಳು ಹೇಳಿ ಬರೆಸಿದ ಕೆಟಲ್ ಪದವನ್ನು ತಪ್ಪಾಗಿ ಬರೆದಿದ್ದನ್ನು ನೋಡಿದ ಅವರ ಶಾಲಾ ಮಾಸ್ಟರ್ ಪಕ್ಕದವನ ಸರಿ ಉತ್ತರ ನೋಡಿಕೊಂಡು ಬರೆಯುವಂತೆ ಸನ್ನೆಮಾಡಿ ಹೇಳಿದರೂ ಪಕ್ಕದವನ ಉತ್ತರವನ್ನು ನೋಡಿಕೊಂಡು ಬರೆಯದೇ ತಮ್ಮ ನೈತಿಕತೆಯನ್ನು ಉಳಿಸಿ ಕೊಂಡರು. ಪೋಷಕರಿಗೆ ಕಾಣದಂತೆ ಕದ್ದು ಬಿಡಿ ಸಿಗರೇಟು ಸೇದಿದ್ದನ್ನು, ಮಾಂಸ ಸೇವನೆ ಮಾಡಿದ್ದನ್ನು ಹಾಗೂ ತಮ್ಮ ಚಿನ್ನದ ಕಡಗದಿಂದ ಚಿನ್ನ ಕದ್ದು ಮಾರಾಟ ಮಾಡಿದ್ದನ್ನು ತಮ್ಮ ತಂದೆಯವರ ಮುಂದೆ ತಪ್ಪೊಪ್ಪಿಗೆ ಪತ್ರದ ಮೂಲಕ ಒಪ್ಪಿಕೊಂಡರು. ಬ್ಯಾರಿಸ್ಟರ್ ಪದವಿ ಪಡೆಯಲ್ ಇಂಗ್ಲೆಂಡ್ ಪ್ರವಾಸಕ್ಕೆ ಹೊರಟಾಗ ಮದ್ಯ, ಮಾಂಸ ಸೇವಿಸುವುದಿಲ್ಲ ಮಹಿಳೆಯರ ಸಹವಾಸ ಮಾಡುವುದಿಲ್ಲ ಎಂದು ತಮ್ಮ ತಾಯಿಯವರಿಗೆ ನೀಡಿದ್ದ ವಚನವನ್ನು ಹಾಗೆಯೆ ಪರಿಪಾಲಿಸಿಕೊಂಡು ಇಂಗ್ಲೆಂಡಿನಿಂದ ವಾಪಾಸ್ ಬಂದರು. ಹೀಗೆ ಗಾಂಧಿ ತಮ್ಮ ಜೀವನದ ಬಾಲ್ಯ ಮತ್ತು ತಾರುಣ್ಯದ ದಿನಗಳಲ್ಲಿಯೇ ನೈತಿಕತೆಯನ್ನು ಉಳಿಸಿಕೊಂಡು ಬಂದವರು.

ಗಾಂಧೀಜಿಯವರ ಹೋರಾಟದ ಬದುಕಿನ ಪ್ರಥಮ ಯಶಸ್ಸಿನ ಕಥೆ, ದಕ್ಷಿಣ ಆಫ್ರಿಕಾ ದೇಶದ ವರ್ಣಬೇಧ ನೀತಿಯ ವಿರುದ್ಧದ ಹೋರಾಟವನ್ನೇ ಗಮನಿಸಿ. ಇಡೀ ಮನುಕುಲವೇ ಒಂದು ವರ್ಗವಾಗಿರುವಾಗ ಅಲ್ಲಿ ಮನುಷ್ಯನ ಮೈಬಣ್ಣವನ್ನು ಆಧರಿಸಿ ಬೇಧ ಎಣಿಸುವುದು ನೈತಿಕತೆಯ ದೃಷ್ಟಿಯಿಂದ ಸರಿಯಲ್ಲ ಎನ್ನುವುದು ಗಾಂಧೀಜಿಯವರ ದಿಟ್ಟ ನಿಲುವಾಗಿತ್ತು. ಆಫ್ರಿಕಾದಲ್ಲಿನ ಕಪ್ಪು ವರ್ಣೀಯರನ್ನು ಅವರದ್ದೇ ಹುಟ್ಟು ನಾಡಿನಲ್ಲಿ ಪರ ದೇಶೀಯರಾದ ಬ್ರಿಟಿಷರು ದಬ್ಬಾಳಿಕೆಯಿಂದ ಆಳುತ್ತಿದ್ದದ್ದು ನೈತಿಕ ದೃಷ್ಟಿಯಿಂದ ಸರಿಯಲ್ಲ ಎನ್ನುವುದು ಗಾಂಧೀಜಿಯವರ ನೋಟವಾಗಿತ್ತು. ಈ ಹಿನ್ನೆಲೆಯಲ್ಲಿ ಅನೈತಿಕವಾದ ವರ್ಣಬೇಧ ನೀತಿಯ ವಿರುದ್ಧ ದಕ್ಷಿಣ ಆಫ್ರಿಕಾದಲ್ಲಿದ್ದ ಕಪ್ಪು ವರ್ಣೀಯರನ್ನೆಲ್ಲ ಸಂಘಟಿಸಿ ಅಹಿಂಸಾತ್ಮಕ ಹೋರಾಟ ರೂಪಿಸಿ ಗಾಂಧಿ ಗೆಲುವು ಸಾಧಿಸಿದರು.

ಭಾರತದ ಸ್ವಾತಂತ್ರ್ಯ ಹೋರಾಟದ ವಿಷಯದಲ್ಲಿಯೂ ಗಾಂಧೀಜಿಯವರ ನಿಲುವು ನೈತಿಕತೆಯ ಹಿನ್ನೆಲೆಯಲ್ಲಿಯೇ ಗಟ್ಟಿಯಾಗಿ ರೂಪುಗೊಂಡಿತ್ತು . ಸ್ವಾಯತ್ತವಾಗಿದ್ದ ಭಾರತ ದೇಶಕ್ಕೆ ಪರದೇಶೀಯರಾದ ಬ್ರಿಟಿಷರು ಬಂದು ದಬ್ಬಾಳಿಕೆಯಿಂದ ಆಳ್ವಿಕೆ


Downloaded From:www.kpscvaani.com

ನಡೆಸುತ್ತಿರುವುದು ತಪ್ಪು ಎನ್ನುವುದು ಗಾಂಧಿಯವರ ನಿಲುವಾಗಿತ್ತು . ಗಾಂಧೀಜಿ ಈ ಸ್ವಾತಂತ್ರ್ಯ ಹೋರಾಟದ ಜೊತೆ ಜೊತೆಯಲ್ಲೇ ಭಾರತ ದೇಶದ ಸಾಮಾಜಿಕ , ಆರ್ಥಿಕ , ರಾಜಕೀಯ ಸಮಸ್ಯೆಗಳನ್ನು ನೈತಿಕ ನೆಲೆಗಟ್ಟಿನಲ್ಲಿ ನಿಂತು ನೋಡಿ ಅಲ್ಲಿ ಸುಧಾರಣೆ ಬಯಸಿದರು.

ಗಾಂಧಿ 1915ರಲ್ಲಿ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಮರಳಿ ಬಂದು ಸ್ವಾತಂತ್ರ್ಯ ಚಳವಳಿಗೆ ಕಾಲಿಡುವವರೆಗೆ ಸ್ವಾತಂತ್ರ್ಯ ಚಳವಳಿ ನಾವಿಕನಿಲ್ಲದ ನಾವೆಯಂತೆ ಸಾಗುತ್ತಿತ್ತು . ಗಾಂಧಿ ಈ ಹೋರಾಟದ ಚುಕ್ಕಾಣಿ ಹಿಡಿದು ಏಕಮೇವಾದ್ವಿತೀಯರಾಗಿ ಮೂರು ದಶಕಗಳ ಕಾಲ ಅದನ್ನು ನೈತಿಕತೆಯಿಂದ ಆಚೀಚೆ ಸರಿಯದಂತೆ ಯಶಸ್ವಿಯಾಗಿ ಮುನ್ನಡೆಸಿದರು. ತಮ್ಮ ರಾಜಕೀಯ ಗುರುಗಳಾದ ಗೋಪಾಲ ಕೃಷ್ಣ ಗೋಖಲೆಯವರ ಸಲಹೆಯಂತೆ ಗಾಂಧೀಜಿ ಒಂದು ವರ್ಷ ಕಾಲ ಇಡೀ ಭಾರತ ದೇಶವನ್ನು ರೈಲಿನಲ್ಲಿ ಮೂರನೇ ದರ್ಜೆ ಭೋಗಿಗಳಲ್ಲಿ ಪ್ರಯಾಣಿಸುವ ಸಂದರ್ಭದಲ್ಲಿ ಭಾರತದ ಸಾಮಾಜಿಕ ಅನಿಷ್ಟ ಪದ್ಧತಿಗಳು, ಬಡತನ, ಮಹಿಳಾ ತಾರತಮ್ಯ ಇವೆಲ್ಲವನ್ನೂ ಸೂಕ್ಷ್ಮವಾಗಿ ಗ್ರಹಿಸಿದರು. ಆಗ ಅವರಿಗೆ ಸ್ವಾತಂತ್ರ್ಯ ಹೋರಾಟಕ್ಕಿಂತ ಹೆಚ್ಚಾಗಿ ಭಾರತದ ಸಾಮಾಜಿಕ ಸುಧಾರಣೆ, ಆರ್ಥಿಕ ಅಭಿವೃದ್ಧಿಗಳು, ಪ್ರಧಾನವಾಗಿ ಕಂಡವು. ಅಸ್ಪೃಶ್ಯತೆ, ಕೋಮು ದ್ವೇಷ, ಅನಕ್ಷರತೆ, ಅನೈರ್ಮಲ್ಯ, ಇವುಗಳಿಂದ ಭಾರತವನ್ನು ಮುಕ್ತಗೊಳಿಸುವುದೇ ಸ್ವಾತಂತ್ರ್ಯ ಚಳವಳಿಗಿಂತ ಪ್ರಮುಖವಾಗಿವೆ ಎಂದು ಅನ್ನಿಸಿತು. ಅದಕ್ಕಾಗಿ ಅವರು ಈ ಸಮಸ್ಯೆಗಳ ನಿವಾರಣೆಯನ್ನೂ ಮುನ್ನೆಲೆಗೆ ತಂದು ಸ್ವಾತಂತ್ರ್ಯ ಚಳವಳಿಯ ಜೊತೆಗೆ ಸಂಯೋಜಿಸಿದರು.

ಸಾವಿರಾರು ವರ್ಷಗಳಿಂದ ಹಿಂದೂ ಸಮಾಜದಲ್ಲಿ ಅನೂಚಾನವಾಗಿ ನಡೆದುಕೊಂಡು ಬರುತ್ತಿದ್ದ ಅಸ್ಪೃಶ್ಯತಾ ಆಚರಣೆ ಹಿಂದೂ ಸಮಾಜಕ್ಕೆ ಅಂಟಿರುವ ಮಹಾಶಾಪ. ಅದನ್ನು ತೊಡೆದು ಹಾಕಬೇಕು ಎಂದು ಅದರ ವಿರುದ್ಧ ಗಾಂಧಿ ನೈತಿಕ ನೆಲೆಗಟ್ಟಿನಲ್ಲಿ ಆಂದೋಲನವನ್ನೇ ಆರಂಭಿಸಿದರು. ತಳ ಸಮುದಾಯಗಳ ಜನರಿಗೆ ಪ್ರವೇಶವಿಲ್ಲದ ದೇವಾಲಯಗಳಿಗೆ ತಾವು ಪ್ರವೇಶಿಸುವುದಿಲ್ಲ ಎಂದರು. ಹಲವಾರು ಕಡೆ ಹರಿಜನ ಕೇರಿಗಳಲ್ಲಿಯೇ ವಾಸ್ತವ್ಯ ಹೂಡಿ ತಳಸಮುದಾಯಗಳಲ್ಲಿ ಆತ್ಮ ವಿಶ್ವಾಸ ಮೂಡಿಸಿದರು. ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಮೇಲು ಸ್ತರದಲ್ಲಿದ್ದ ಹಾಗೂ ಮುಂಚೂಣಿಯಲ್ಲಿದ್ದ ರಾಜಕೀಯ ದುರೀಣರು ಮತ್ತು ಮೇಲ್ವರ್ಗದ ಸಾಮಾನ್ಯ ಜನರ ಮನ ಒಲಿಸಿ ಅಸ್ಪೃಶ್ಯತೆಯ ಆಚರಣೆಯ ವಿರುದ್ಧ ಜನಾಭಿಪ್ರಾಯ ರೂಪಿಸಿದರು. ತಮ್ಮ ಸಬರಮತಿ ಆಶ್ರಮದಲ್ಲಿ ಹರಿಜನರನ್ನು ಆಶ್ರಮವಾಸಿಗಳನ್ನಾಗಿ ಸೇರಿಸಿಕೊಂಡರು. ಆಶ್ರಮದಲ್ಲಿ ಹರಿಜನರಿಗೆ ಪ್ರವೇಶ ನೀಡಿದರೆ ಆಶ್ರಮಕ್ಕೆ ನೀಡುವ ದೇಣಿಗೆಯನ್ನು ನಿಲ್ಲಿಸುತ್ತೇವೆ ಎಂದು ದಾನಿಗಳು ಹೇಳಿದಾಗಲೂ ಗಾಂಧಿ ತಮ್ಮ ನೈತಿಕತೆಯನ್ನು ಬಿಟ್ಟುಕೊಡದೆ ಅದನ್ನು ಧೈರ್ಯದಿಂದ ಎದುರಿಸಿ ಗೆಲುವು ಸಾಧಿಸಿದರು.

ಬ್ರಿಟಿಷ್ ಆಳ್ವಿಕೆಯ ವಿರುದ್ಧದ ಸ್ವಾತಂತ್ರ್ಯ ಚಳವಳಿಯನ್ನು ಗಾಂಧೀಜಿ ಹಂತ ಹಂತವಾಗಿ ನೈತಿಕ ನೆಲೆಗಟ್ಟಿನಲ್ಲಿ ರೂಪಿಸುತ್ತಿದ್ದರು. ಪ್ರಥಮ ಹಂತದಲ್ಲಿ ಈ ಚಳವಳಿಯ ಬಗ್ಗೆ ಸಾಮಾನ್ಯ ಜನರಲ್ಲಿ ಜಾಗೃತಿ ಮೂಡಿಸಿದರು. ಎರಡನೆಯ ಹಂತದಲ್ಲಿ ಅಸಹಕಾರ ಚಳವಳಿ ರೂಪಿಸಿದರು. ಈ ಚಳವಳಿ



Downloaded From:www.kpscvaani.com

ಚೌರಿ ಚೌರಾದಲ್ಲಿ ಹಿಂಸೆಗೆ ತಿರುಗಿ ಪೊಲೀಸ್ ಠಾಣೆಗೆ ಬೆಂಕಿ ಹಚ್ಚಿ ಪೊಲೀಸರನ್ನೇ ಸುಟ್ಟು ಹಾಕಿದಾಗ ಗಾಂಧೀಜಿ ನೈತಿಕವಾಗಿ ಇದು ಸರಿಯಲ್ಲ ಎಂದು ತಮ್ಮ ಅಸಹಕಾರ ಚಳವಳಿಯನ್ನೇ ಹಿಂದಕ್ಕೆ ತೆಗೆದುಕೊಂಡರು. ಗಾಂಧೀಜಿಯವರು ಏಕಾಏಕಿ ಹೀಗೆ ಚಳವಳಿಯನ್ನು ಹಿಂತೆಗೆದು ಕೊಂಡ ಬಗ್ಗೆ ಕಾಂಗ್ರೆಸ್ ಪಕ್ಷದಲ್ಲಿ ಭಿನ್ನಾಭಿಪ್ರಾಯ ಉಂಟಾಯಿತು. ಆದರೆ ಗಾಂಧಿ ಈ ಭಿನ್ನಾಭಿಪ್ರಾಯಗಳಿಗೆ ಮಣಿಯಲಿಲ್ಲ. ನಾವು ಅಹಿಂಸೆಯ ನೈತಿಕ ನೆಲೆಗಟ್ಟಿನಲ್ಲಿ ನಮ್ಮ ಚಳವಳಿಯನ್ನು ರೂಪಿಸಿದ್ದೇವೆ. ಇದು ಹೀಗೆ ಹಿಂಸೆಗೆ ತಿರುಗಿದ್ದನ್ನು ನಾನು ಒಪ್ಪುವುದಿಲ್ಲ. ಅದಕ್ಕಾಗಿಯೇ ಅಸಹಕಾರ ಚಳವಳಿಯನ್ನು ಹಿಂತೆಗೆದುಕೊಳ್ಳುತ್ತೇನೆ ಎಂದು ಸಮಜಾಯಿಸಿ ನೀಡಿ ತಮ್ಮ ನೈತಿಕತೆಯನ್ನು ಸಮರ್ಥಿಸಿಕೊಂಡರು.

ಕೋಮು ಸೌಹಾರ್ದತೆ ಮತ್ತು ದೇಶ ವಿಭಜನೆಯ ವಿಷಯದಲ್ಲಿಯೂ ಗಾಂಧಿ ತಮ್ಮ ನೈತಿಕ ಬದ್ಧತೆಯನ್ನು ಎಂದೂ ಬಿಟ್ಟು ಕೊಡಲಿಲ್ಲ. ಹಿಂದೂ ಮುಸ್ಲಿಮರು ಸಾವಿರಾರು ವರ್ಷಗಳಿಂದಲೂ ಈ ನೆಲದಲ್ಲಿ ಜೊತೆ ಜೊತೆಯಾಗಿ ಬದುಕುತ್ತಿದ್ದಾರೆ. ಈಗ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಲ್ಲಿ ಮುಸ್ಲಿಮರನ್ನು ದೂರವಿಟ್ಟು ಪ್ರತ್ಯೇಕ ರಾಷ್ಟ್ರ ನಿರ್ಮಾಣಕ್ಕೆ ಒತ್ತಾಯ ಹೇರುವುದು ಸರಿಯಲ್ಲ. ಮುಸ್ಲಿಮರನ್ನು ಅನಗತ್ಯವಾಗಿ ದ್ವೇಷ ಮಾಡುವುದು ನೈತಿಕವಾಗಿ ಒಪ್ಪಿತವಲ್ಲ ಎನ್ನುವುದು ಗಾಂಧಿಯವರ ನಿಲುವಾಗಿತ್ತು . ಆದರೆ ಬಹುಸಂಖ್ಯಾತ ಹಿಂದೂಗಳು ಹಿಂದೂ ಮಹಾಸಭಾದ ಕುಮ್ಮಕ್ಕಿನಿಂದ ದೇಶ ವಿಭಜನೆ ಮತ್ತು ಕೋಮು ಹಿಂಸೆಗೆ ಮುಂದಾದಾಗ ಗಾಂಧಿ ನೈತಿಕತೆಯ ವಾದ ಮುಂದಿಟ್ಟು ಇದನ್ನು ವಿರೋಧಿಸಿದರು. ಕೋಮು ಗಲಭೆ ನಡೆಯುತ್ತಿದ್ದ ಬಿಹಾರ, ಉತ್ತರ ಪ್ರದೇಶ ಬಂಗಾಳ ಪ್ರಾಂತ್ಯಗಳಲ್ಲಿ ತಮ್ಮ ಪ್ರಾಣವನ್ನೇ ಒತ್ತೆಯಿಟ್ಟು ವ್ಯಾಪಕ ಪ್ರವಾಸ ಮಾಡಿದರು. ಕೋಮು ಗಲಭೆಯಲ್ಲಿ ಸಂತ್ರಸ್ತರಾದ ಎರಡೂ ಕೋಮಿನ ಜನರಿಗೆ ಸಾಂತ್ವನ ಹೇಳಿದರು. ತಮ್ಮ ಜೊತೆಗಿದ್ದ ಹಲವಾರು ನಾಯಕರುಗಳು ಬಹುಸಂಖ್ಯಾತ ಹಿಂದೂಗಳ ಭಾವನೆಯ ಜೊತೆ ನಿಂತಾಗಲೂ ಗಾಂಧಿ ತಮ್ಮ ನಿಲುವಿನಿಂದ ಕೊಂಚವೂ ಅಚೆ ಈಚೆಗೆ ಸರಿಯಲಿಲ್ಲ. ತಮ್ಮ ನೈತಿಕ ನೀತಿಗೆ ಅಂಟಿಕೊಂಡು ನಿಂತು ಕೋಮು ವೈಷಮ್ಯವನ್ನು ವಿರೋಧಿಸಿದರು.

ಇದಕ್ಕಿಂತಲೂ ಕಟುವಾದ ಗಾಂಧೀಜಿಯವರ ನೈತಿಕ ಬದ್ಧತೆಯನ್ನು ಭಾರತ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭವು ನಿರೂಪಿಸುತ್ತದೆ. ಆಗಸ್ಟ್ 15.08.1947ರಂದು ಇಡೀ ದೇಶ ಸ್ವಾತಂತ್ರ್ಯ ಆಚರಣೆಯ ಸಂಭ್ರಮದಲ್ಲಿತ್ತು . ಪ್ರಧಾನಿ ನೆಹರು ಮತ್ತು ಅವರ ಸಚಿವ ಸಂಪುಟ ದೆಹಲಿಯ ಕೆಂಪು ಕೋಟೆ ಮೇಲೆ ಸಂಭ್ರಮ ಮತ್ತು ಸಡಗರದಿಂದ ರಾಷ್ಟ್ರಧ್ವಜ ಏರಿಸುತ್ತಿದ್ದಾಗ ಸ್ವಾತಂತ್ರ್ಯ ಹೋರಾಟದ ರೂವಾರಿಯಾಗಿದ್ದ ಮಹಾತ್ಮ ಗಾಂಧಿಯವರು ನೌಖಾಲಿ ಪ್ರಾಂತದಲ್ಲಿ ಹಿಂದೂ ಮುಸ್ಲಿಂ ಕೋಮು ಗಲಭೆಯಿಂದ ತತ್ತರಿಸಿ ಹೋಗಿದ್ದ ಹಳ್ಳಿಗಳಲ್ಲಿ ಕಸಬರಿಗೆ ಹಿಡಿದು ಕಸ ಗುಡಿಸುತ್ತಿದ್ದರು. ಎರಡೂ ಕೋಮಿನ ನೊಂದ ಕುಟುಂಬಗಳಿಗೆ ಸಾಂತ್ವನದ ಮುಲಾಮು ಹಚ್ಚುತ್ತಿದ್ದರು ಇದು ಗಾಂಧೀಜಿಯವರ ನೈತಿಕತೆಯ ಪರಾಕಾಷ್ಠೆ .



ಗಾಂಧೀಜಿಯವರ ನೈತಿಕ ಬದ್ಧತೆಯನ್ನು ಅವರ ಬದುಕಿನ ಅಂತಿಮ ಕ್ಷಣದಲ್ಲಿಯೂ ಕಾಣಬಹುದು. ಸ್ವಾತಂತ್ರ್ಯಾನಂತರ ಭಾರತ ಮತ್ತು ಪಾಕಿಸ್ತಾನದ ಗಡಿಭಾಗಗಳಲ್ಲಿ ಹಿಂದೂ ಮುಸ್ಲಿಮರು ದೊಣ್ಣೆ, ಕತ್ತಿ , ಈಟಿ , ಭರ್ಜಿ, ನಾಡ ಬಾಂಬು ಬಂದೂಕು ಹಿಡಿದು ಕಡಿದಾಡುತ್ತಿದ್ದಾಗ ಗಾಂಧಿ ಅಕ್ಷರಶಃ ನಲುಗಿ ಹೋಗಿದ್ದರು. ರಾಜಧಾನಿ ದೆಹಲಿಯಲ್ಲಿನ ಕೋಮು ಗಲಭೆಯಲ್ಲಿ ನೂರಾರು ಜನ ಅಮಾಯಕರು ಬಲಿಯಾಗಿ ಮಹಿಳೆಯರು ಮತ್ತು ಮಕ್ಕಳು ಅನಾಥರಾಗಿ ರೋಧಿಸುತ್ತಿದ್ದಾಗ ಗಾಂಧಿ ತಮ್ಮ ಅಂತಿಮ ಅಸ್ತ್ರವಾದ ಅಮರಣಾಂತ ಉಪವಾಸ ಸತ್ಯಾಗ್ರಹವನ್ನು ಘೋಷಿಸಿದರು. ಗಲಭೆ ಎರಡೇ ದಿನಗಳಲ್ಲಿ ತಹಬಂದಿಗೆ ಬಂದಿತು. ಹಿಂದೂಗಳು , ಮುಸ್ಲಿಂ ಗಲಭೆಕೋರರು ತಮ್ಮ ತಮ್ಮ ಆಯುಧಗಳನ್ನು ತಂದು ಗಾಂಧಿಯವರ ಪದತಲದಲ್ಲಿ ಸುರಿದು ಹಿಂಸೆಯಿಂದ ಗಾಂಧೀಯವರ ಅಹಿಂಸಾ ನಿಲುವಿನ ಹಾದಿಗೆ ಬಂದು ನಿಂತರು. ಇದು ಗಾಂಧೀಜಿಯವರ ನೈತಿಕ ಅಹಿಂಸಾ ನಿಲುವಿನ ಧೀ ಶಕ್ತಿಯಾಗಿತ್ತು .

ಮಾನವ ಇತಿಹಾಸದಲ್ಲಿ ಮಹಾ ನಾಯಕರುಗಳ ಅಂತಿಮ ಹಂತವು ಹತ್ಯೆಗಳಿಂದಲೇ ಅಂತಿಮವಾಗಿರುವುದಕ್ಕೆ ಹಲವಾರು ಉದಾಹರಣೆಗಳಿವೆ . ಕರುಣಾಮಯಿ ಏಸು ಕ್ರಿಸ್ತ ರೋಮನ್ ದೊರೆಗಳ ಸಂಚಿಗೆ ಬಲಿಯಾಗಿ ಶಿಲುಬೆಗೆ ಏರಿದರು. ಕಪ್ಪು ಜನರ ನಾಯಕ ಅಬ್ರಹಾಂ ಲಿಂಕನ್ ದುಷ್ಕರ್ಮಿಗಳ ಗುಂಡಿಗೆ ತುತ್ತಾದರು. ಅಹಿಂಸಾ ವಾದಿ ಮಹಾತ್ಮ ಗಾಂಧಿಯವರು ಹಿಂದೂ ಸನಾತನಿಗಳ ದ್ವೇಷಕ್ಕೆ ತುತ್ತಾಗಿ ಬಂದೂಕಿನ ಗುಂಡಿಗೆ ಬಲಿಯಾದರು. ಬಾಲ್ಯದಿಂದಲೂ ದೈವ ಭಕ್ತರಾಗಿದ್ದ ಗಾಂಧಿ ತಮ್ಮ ಹತ್ಯೆಯ ಅಂತಿಮ ಕ್ಷಣದಲ್ಲಿ ಹೇ .. ರಾಮ್ ಎನ್ನುತ್ತಲೇ ಅಮರರಾದರು.

Downloaded From:www.kpscvaani.com



ಗಾಂಧಿ ವಿಚಾರಗಳ ಕ್ರಿಯಾರೂಪ ಕೊಪ್ಪಳದ ಗಾಂಧಿ ಬಳಗ

ಗಾಂಧಿ ಚಿಂತನೆಯ ಬೀಜಗಳ ನಿರಂತರ ಚಿತ್ತನೆ

ಮಂಜುನಾಥ ಡಿ.ಹೊಳ್ಳಿನ

(ಚಿತ್ರಗಳು : ಭರತ್ ಕಂದಕೂರ)

ಮಹಾತ್ಮ ಗಾಂಧೀಜಿ, ಬಾಪೂಜಿ, ರಾಷ್ಟ್ರಪಿತ ಹೀಗೆ ಹಲವು ರೀತಿಯಲ್ಲಿ ಕರೆಸಿಕೊಳ್ಳುವ ಮೋಹನದಾಸ್ ಕರಮಚಂದ್ ಗಾಂಧಿ, ತನ್ನ ಬದುಕು, ನಡೆ, ನುಡಿಗಳಿಂದ ಕಳೆದ ಶತಮಾನದಲ್ಲಿ ಭಾರತೀಯರನ್ನಷ್ಟೇ ಅಲ್ಲ, ಸಮಸ್ತ ಮನುಕುಲವನ್ನು ಸೂಜಿಗಲ್ಲಿನಂತೆ ಸೆಳೆದ ಮಹಾನ್ ಚೇತನ. ರಕ್ತ ಮತ್ತು ಮಾಂಸಗಳಿಂದ ಕೂಡಿದ ಇಂತಹ ಮನುಷ್ಯನೊಬ್ಬ ಈ ಭೂಮಿಯ ಮೇಲಿದ್ದರು ಎಂದರೆ ಮುಂದಿನ ಪೀಳಿಗೆ ನಂಬುವುದಿಲ್ಲ ಎಂದು ಹೆಸರಾಂತ ವಿಜ್ಞಾನಿ ಅಲ್ಬರ್ಟ್ ಐನ್‌ಸ್ಟೈನ್ ಹೇಳಿದ ಕಾಲಘಟ್ಟ ಇದೀಗ ಪ್ರಾರಂಭವಾಗುತ್ತಿದೆ. ಗಾಂಧೀಜಿಯವರು ಸತ್ಯ, ಶಾಂತಿ, ಅಹಿಂಸೆ, ತ್ಯಾಗ ಮತ್ತು ಸತ್ಯಾಗ್ರಹದ ಪರಿಕಲ್ಪನೆಯಡಿ ತುಳಿದ ಹಾದಿಯನ್ನು ಕೇಳುವ ಹೊಸ ಪೀಳಿಗೆ ಈಗಾಗಲೇ ಸೋಜಿಗದಿಂದ ನೋಡುತ್ತಾರೆ. ಗಾಂಧೀಜಿಯವರನ್ನು ಸರಿಯಾಗಿ ಅರಿಯದ ಮತ್ತು ವ್ಯವಸ್ಥಿತವಾಗಿ ಸರಿಯಾಗಿ ಅರಿಯಲು ಬಿಡದೇ ಅವರ ವ್ಯಕ್ತಿತ್ವವನ್ನು ತಪ್ಪಾಗಿ ಅರ್ಥೈಸಿ ಮಸುಕಾಗಿಸುವ ಪ್ರವೃತ್ತಿಗಳು ಢಾಳಾಗಿ ನಡೆಯುತ್ತಿರುವ ಈ ಹೊತ್ತಿನಲ್ಲಿಯೇ ಕೊಪ್ಪಳದ ಯುವಕರು, ಹಿರಿಯರು, ಮಹಿಳೆಯರನ್ನೊಳಗೊಂಡ ತಂಡವು ಗಾಂಧೀಜಿಯವರ ವಿಚಾರಗಳಿಗೆ ಆಕರ್ಷಿತರಾಗುವುದಷ್ಟೇ ಅಲ್ಲ, ಅವುಗಳನ್ನು ಕ್ರಿಯೆಗೆ ಇಳಿಸುವ ಮಹಾನ್ ಕೈಂಕರ್ಯವನ್ನು ನಿರ್ವಹಿಸುತ್ತಿದ್ದಾರೆ. ಗಾಂಧೀ ಜಯಂತಿ

Downloaded From:www.kpscvaani.com



ಎಂದರೆ ಮತ್ತೆ ಗಾಂಧಿ ಚಿಂತನೆಗಳನ್ನು ನಮ್ಮೆದೆಯೊಳಗೆ ಇಳಿಸಿಕೊಂಡು ಜನಮಾನಸದಲ್ಲಿ ಬಿತ್ತುವ, ಮೊಳಕೆಯೊಡೆಸುವ ಕಾರ್ಯವನ್ನು ಈ ಬಳಗ ಶ್ರದ್ಧೆಯಿಂದ ಮಾಡುತ್ತಿದೆ.

ಕೃಷಿ, ಕೈಗಾರಿಕೆ, ಉದ್ಯೋಗ, ತಾಂತ್ರಿಕತೆ, ಪ್ರಜಾತಾಂತ್ರಿಕ ವ್ಯವಸ್ಥೆ, ಸಹಕಾರ, ಸಹಬಾಳ್ವೆ–ಸಾಮರಸ್ಯ, ಸಾಮಾಜಿಕ ನ್ಯಾಯ, ಆರ್ಥಿಕತೆ, ಗ್ರಾಮಾಭಿವೃದ್ಧಿ ಸೇರಿದಂತೆ ದೇಶದ ವರ್ತಮಾನದ ಹತ್ತು ಹಲವು ಗೊಂದಲಗಳಿಗೆ ಗಾಂಧೀ ಮಾರ್ಗದಲ್ಲಿಯೇ ಪರಿಹಾರಗಳಿವೆ ಎಂಬ ನಂಬಿಕೆಯೊಂದಿಗೆ ಕೊಪ್ಪಳದ ಶಿಕ್ಷಕರು, ಪ್ರಾಧ್ಯಾಪಕರು, ನೌಕರರು,ರೈತರು, ವ್ಯಾಪಾರಿಗಳು, ಖಾಸಗಿ ವಾಹನ ಚಾಲಕರು ಹೀಗೆ ಸಮಾನ ಮನಸ್ಕರೆಲ್ಲ ಸೇರಿಕೊಂಡು 2023ರ ಆಸುಪಾಸಿನಲ್ಲಿ ಕಟ್ಟಿಕೊಂಡ ಗಾಂಧಿ ಬಳಗ ಯಾವುದೇ ಪ್ರತಿಫಲ, ಪ್ರಚಾರ



ಬಯಸದೆ ಕೇವಲ ಗಾಂಧೀ ಆಶಯಗಳಿಗಾಗಿ ತುಡಿಯುವ, ಮಿಡಿಯುವ ಹಾಗೂ ದುಡಿಯುವ ಬಳಗವಾಗಿ ಜಿಲ್ಲೆಯಾದ್ಯಂತ ಕ್ರಿಯಾಶೀಲವಾಗಿ ತನ್ನನ್ನು ತೊಡಗಿಸಿಕೊಂಡಿದೆ. ಪ್ರತಿವರ್ಷ ಮಹಾತ್ಮ ಗಾಂಧೀಜಿಯವರ ಜಯಂತಿ ದಿನವಾದ ಅಕ್ಟೋಬರ್ 2ರಂದು ಮದ್ಯ, ಗುಟಕಾ, ಬೀಡಿ, ಸಿಗರೇಟು ಮಾರಾಟ ಮುಕ್ತವಾಗಿರುವ ಜಿಲ್ಲೆಯ ಗ್ರಾಮವೊಂದಕ್ಕೆ ತೆರಳಿ ಗ್ರಾಮಸ್ಥರೊಂದಿಗೆ ಗಾಂಧಿ ಪ್ರಿಯ ಭಜನೆಗಳು, ಸರ್ವಧರ್ಮ ಪ್ರಾರ್ಥನೆ, ವಿಚಾರಗಳ ವಿನಿಮಯ ಮಾಡಿಕೊಂಡು ಬರುತ್ತಿದ್ದಾರೆ. ಕೊಪ್ಪಳದ ಗಾಂಧಿ ಬಳಗ ತಮ್ಮೂರಿಗೆ ಬರುವುದು ಈಗ ಜಿಲ್ಲೆಯ ಹಲವು ಗ್ರಾಮಗಳಿಗೆ ಹೆಮ್ಮೆಯ ವಿಷಯವಾಗಿ ಮಾರ್ಪಡುತ್ತಿದೆ. ನೆರೆಯ ಗ್ರಾಮಕ್ಕೆ ಗಾಂಧಿ ಬಳಗ ಬಂದಿದ್ದರಿಂದ ಪ್ರೇರಣೆ ಪಡೆದ ಹಲವು ಗ್ರಾಮಗಳ ಜನರು ತಮ್ಮ ಗ್ರಾಮಗಳಲ್ಲಿಯೂ ಮದ್ಯ,ಬೀಡಿ, ಸಿಗರೇಟು, ತಂಬಾಕು, ಮಾರಾಟಕ್ಕೆ ತಡೆಯೊಡ್ಡುವ ಮೂಲಕ ಗಾಂಧೀಜಿಯವರ ವಿಚಾರಗಳನ್ನು ಕೇವಲ ಮಾತಿಗೆ ಸೀಮಿತಗೊಳಿಸದೇ ಆಚರಣೆಗೆ ತರುತ್ತಿರುವುದು ಮಹಾತ್ಮ ಗಾಂಧೀಜಿಯವರ ಜಯಂತಿಯ ನಿಜವಾದ ಆಚರಣೆಯಾಗಿದೆ.

ಕಾಲ್ನಡಿಗೆ ಮೂಲಕ ಕನಸುಗಳನ್ನು ಬಿತ್ತುವ ಕಾರ್ಯ

2023–ಭಾನಾಪುರ

ಮಹಾತ್ಮ ಗಾಂಧೀಜಿ ಎಂದರೆ ಕೈಯಲ್ಲೊಂದು ಕೋಲು, ವೇಗದ ನಡಿಗೆಯ ಚಿತ್ರ ಎಲ್ಲರ ಕಣ್ಮುಂದೆ ಬರುತ್ತದೆ, ಕಾಲ್ನಡಿಗೆ, ಉಪವಾಸಗಳ ಮೂಲಕವೇ ಭಾರತದಂತಹ ಬೃಹತ್ ದೇಶದ ಜನ ಮನ ತಲುಪಿದ ಈ ನಾಯಕನ

Downloaded From:www.kpscvaani.com

ಗಾಂಧಿ ಬಳಗದ ಹುಟ್ಟು

ಕೊಪ್ಪಳದಲ್ಲಿ ಶಿಕ್ಷಕರ ಕಲಾ ಸಂಘದ ಮೂಲಕ ಸಮಾನ ಮನಸ್ಕ ಶಿಕ್ಷಕರು, ನೌಕರರು ಸೇರಿ ಸೃಜನಶೀಲವಾದ ನಾಟಕಗಳು, ಕಲೆಗಳ ಪ್ರದರ್ಶನದಲ್ಲಿ ಕಳೆದ ಒಂದು ದಶಕದಿಂದ ತೊಡಗಿಸಿಕೊಂಡಿದ್ದೆವು. 2021ರ ಅಕ್ಟೋಬರ್ 2ರಂದು ಅಜೀಂ ಪ್ರೇಮ್ ಜಿ ಫೌಂಡೇಶನ್ ಸಹಯೋಗದಲ್ಲಿ "ಗಾಂಧಿ ಬೆಳಕು" ಉಪನ್ಯಾಸ, ಸಂಗೀತ ಕಾರ್ಯಕ್ರಮ ಹಮ್ಮಿಕೊಂಡೆವು. ಅಲ್ಲಿಂದ ಬಳಗದ ಸದಸ್ಯರೆಲ್ಲರೂ ಗಾಂಧಿ ವಿಚಾರಗಳೊಂದಿಗೆ ಏನಾದರೂ ಕೆಲಸ ಮಾಡಬೇಕೆಂಬ ಆಶಯಗಳೊಂದಿಗೆ ಗಾಂಧಿ ಬಳಗ ಕಟ್ಟಿಕೊಂಡೆವು. ಕೊಪ್ಪಳದ ಅನೇಕ ಆಸಕ್ತ ಹಿರಿಯರು, ಶಿಕ್ಷಕರು, ನೌಕರರು, ರೈತರು, ಪತ್ರಕರ್ತರು, ಖಾಸಗಿ ವೃತ್ತಿಯಲ್ಲಿರುವ ಎಲ್ಲ ವರ್ಗಗಳು ಕೈ ಜೋಡಿಸಿದರು.ಈಗ ನಮ್ಮ ಕೆಲಸಗಳಿಗೆ ಜಿಲ್ಲೆಯಾದ್ಯಂತ ನಿಸ್ಪೃಹ ಬೆಂಬಲ ವ್ಯಕ್ತವಾಗುತ್ತಿದೆ.ಕಾರ್ಯಗಳನ್ನು ಉತ್ಸಾಹದಿಂದ ಮುಂದುವರೆಸುತ್ತಿದ್ದೇವೆ.

–ಪ್ರಾಣೇಶ್ ಜೆ.ಪೂಜಾರ



ಶಕ್ತಿಯನ್ನು ಮೈಗೂಡಿಸಿಕೊಳ್ಳಲು ಬಯಸಿದ ಕೊಪ್ಪಳದ ಗಾಂಧಿ ಬಳಗ 2023ರಲ್ಲಿ ಮೊದಲ ಬಾರಿಗೆ ಕೊಪ್ಪಳ ಜಿಲ್ಲಾ ಕೇಂದ್ರದಿಂದ ಕುಕನೂರ ತಾಲ್ಲೂಕಿನ ಭಾನಾಪೂರ ಗ್ರಾಮಕ್ಕೆ ಪಾದಯಾತ್ರೆ ಕೈಗೊಂಡಿತು.ಹರಿಜನ ನಿಧಿ ಸಂಗ್ರಹಣೆ ಹಾಗೂ ಅಸ್ಪೃಶ್ಯತೆ ನಿವಾರಣೆಗಾಗಿ ದೇಶದಾದ್ಯಂತ ಪ್ರವಾಸ ಕೈಗೊಂಡಿದ್ದ ಮಹಾತ್ಮ ಗಾಂಧೀಜಿಯವರು 1934ರ ಮಾರ್ಚ್ 3ರಂದು ಭಾನಾಪೂರ ಗ್ರಾಮದ ರೈಲು ನಿಲ್ದಾಣದಲ್ಲಿ ಇಳಿದು, ನಿಲ್ದಾಣದ ಹೊರಭಾಗದಲ್ಲಿ ಹಾಕಲಾಗಿದ್ದ ವೇದಿಕೆಯಲ್ಲಿ ತಳಕಲ್ ಗ್ರಾಮದ ಸುಟ್ಟವ್ವ ಹರಿಜನ ಎಂಬ ಮಹಿಳೆಯಿಂದ ಕುಡಿಯುವ ನೀರು ಸ್ವೀಕರಿಸಿದ್ದರು. ಪರಿಶಿಷ್ಟ ಜಾತಿಯ ಮಹಿಳೆಯೋರ್ವರಿಂದ ಕುಡಿಯುವ ನೀರು ಸ್ವೀಕರಿಸಿದ್ದ ಗಾಂಧೀಜಿ ನೆರೆದ ಜನಸಮೂಹಕ್ಕೆ ಅಸ್ಪೃಶ್ಯತೆ ಆಚರಿಸದಿರಲು ಕರೆ ನೀಡಿದ್ದರು. ಈ ಐತಿಹಾಸಿಕ ಘಟನೆಯನ್ನು ಸ್ಥಳೀಯರಿಗೆ ನೆನಪಿಸುವದರೊಂದಿಗೆ ಗಾಂಧೀಜಿಯವರು ಹೇಳಿದ ಮಾತುಗಳನ್ನು ಸ್ವತಃ ಗಾಂಧೀಜಿ ನಿಂತ ನೆಲದಲ್ಲಿಯೇ ವೇದಿಕೆ ನಿರ್ಮಿಸಿ ಮನವರಿಕೆ ಮಾಡಿಕೊಟ್ಟಿದ್ದು ಭಾನಾಪುರ ಹಾಗೂ ಸುತ್ತಲಿನ ಜನರಲ್ಲಿ ಹೊಸ ಸಂಚಲನ ಮೂಡಿಸಿತು.

2024– ಕಾಮನೂರ

2023ರ ಭಾನಾಪುರ

ಪಾದಯಾತ್ರೆಯಿಂದ ಸ್ಫೂರ್ತಿ ಪಡೆದ ಗಾಂಧಿ ಬಳಗಕ್ಕೆ 2024ರಲ್ಲಿ ಮತ್ತಷ್ಟು ಉತ್ಸಾಹಿಗಳು ಜೊತೆಯಾದರು. ಗಾಂಧೀ ಜಯಂತಿಯಂದು ಪಾದಯಾತ್ರೆ ಮುಂದುವರೆಸುವುದು ಜನರಲ್ಲಿ ಉತ್ತಮ ಪರಿಣಾಮ ಉಂಟು ಮಾಡುತ್ತಿದೆ, ಇದಕ್ಕೆ ಇನ್ನೂ ಹೆಚ್ಚು ಅರ್ಥ ಬರುವಂತೆ ಮಾಡಬೇಕು ಎಂಬ ಧ್ಯೇಯದೊಂದಿಗೆ 2024ರಲ್ಲಿ ಕೊಪ್ಪಳ ತಾಲ್ಲೂಕಿನ ಕಾಮನೂರು ಗ್ರಾಮಕ್ಕೆ ಪಾದಯಾತ್ರೆ ಕೈಗೊಂಡರು. ಕಾಮನೂರು ಗ್ರಾಮದಲ್ಲಿ ಸುಮಾರು 30 ವರ್ಷಗಳಿಂದ ಮದ್ಯ, ಬೀಡಿ, ಗುಟಕಾ, ಸಿಗರೇಟು ಮಾರಾಟ ನಿಷಿದ್ಧವಾಗಿದೆ. ಒಂದು ಸಣ್ಣ ಹೋಟೆಲು ಕೂಡ ಇಲ್ಲಿಲ್ಲ. ಗ್ರಾಮದ ಅನೇಕ ರೈತರು



Downloaded From:www.kpscvaani.com



ಸಾವಯವ ಪದ್ಧತಿಯಡಿ ಕೃಷಿ ಮಾಡುತ್ತಿದ್ದಾರೆ. ಪುಟ್ಟ ಊರು ಕಾಮನೂರಿನಲ್ಲಿ ಕುಳಿತು ಜಾಗತಿಕವಾಗಿ ಸಾವಯವ ಕೃಷಿಯಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಪರಿಚಯ ಮಾಡಿಕೊಂಡು ಆ ನಿಟ್ಟಿನಲ್ಲಿ ಸಾಗಲು ಪ್ರಯತ್ನಶೀಲ ಯುವ ರೈತರ ಪಡೆಯೊಂದು ಇಲ್ಲಿರುವುದು ವಿಶೇಷ. ಕೊಪ್ಪಳದ ಗಾಂಧಿಬಳಗ ತಮ್ಮೂರಿಗೆ ಪಾದಯಾತ್ರೆ ಬರುವ ವಿಷಯ ತಿಳಿದು ಊರಿನ ಎಲ್ಲ ರಸ್ತೆಗಳನ್ನು ಸ್ವಯಂಪ್ರೇರಿತರಾಗಿ ಸ್ವಚ್ಛಗೊಳಿಸಿಕೊಂಡು, ರಂಗೋಲಿ ಹಾಕಿ, ತಳಿರು ತೋರಣಗಳಿಂದ ಅಲಂಕರಿಸಿ ಸ್ವಾಗತಿಸಿದ್ದು ಗಾಂಧಿ ಜಯಂತಿಗೆ ಅಕ್ಷರಶಃ ಹಬ್ಬದ ಕಳೆ ತಂದಿತ್ತು. ಗಾಂಧಿ ಬಳಗವು ಕಾಮನೂರಿನತ್ತ ಗಮನ ಸೆಳೆದ ಪರಿಣಾಮವಾಗಿ ಕೊಪ್ಪಳ ಸಂಸದ ರಾಜಶೇಖರ ಹಿಟ್ನಾಳ ಅವರು ಈ ಗ್ರಾಮವನ್ನು ಸಂಸದರ ದತ್ತು ಗ್ರಾಮವಾಗಿ ಘೋಷಣೆ ಮಾಡಿ, ವಿಶೇಷ ಅಭಿವೃದ್ಧಿ ಕಾರ್ಯಗಳಿಗೆ ಒತ್ತು ನೀಡುತ್ತಿರುವುದು ಗಾಂಧಿ ಬಳಗದ ಕಾರ್ಯಕ್ಕೆ ಹಾಗೂ ಕಾಮನೂರ ಗ್ರಾಮಸ್ಥರ ಬದ್ಧತೆಗೆ ದೊರೆತ ದೊಡ್ಡ ಮನ್ನಣೆ ಎನ್ನಬಹುದು.

2025– ಬಿನ್ನಾಳ

ಕುಕನೂರು ತಾಲ್ಲೂಕಿನ ಬಿನ್ನಾಳ ಪಾರಂಪರಿಕ ಕೃಷಿ ಸಂಸ್ಕೃತಿ ಹೆಪ್ಪುಗಟ್ಟಿದ ಊರು. ಚಿತ್ರದುರ್ಗದ ಹೆಸರಾಂತ ಮುರುಘಾಮಠದ ಶ್ರೀ ಜಯದೇವ ಮುರುಘರಾಜೇಂದ್ರ ಸ್ವಾಮಿಗಳ ಹುಟ್ಟೂರೂ ಹೌದು. ಆದರೆ ಇತ್ತೀಚೆಗೆ ಸ್ಥಳೀಯ ಯುವಕರು ದುಶ್ಚಟಗಳಿಗೆ ದಾಸರಾಗುವುದನ್ನು ತಡೆಯಲು ಗ್ರಾಮದ ಮುಖಂಡರು, ದೈವದವರು ಸೇರಿ ಗ್ರಾಮದಲ್ಲಿ ಮದ್ಯ,ಮಾದಕ ವಸ್ತುಗಳ ಮಾರಾಟಕ್ಕೆ ಸ್ವಯಂ ಪ್ರೇರಣೆಯ ನಿಷೇಧ ಹೇರಿಕೊಂಡಿದ್ದಾರೆ. ಗ್ರಾಮಸ್ಥರ ಈ ನಿರ್ಣಯವನ್ನು ಸ್ವಾಗತಿಸಿ, ಬೆಂಬಲ ಸೂಚಿಸಲು ಕೊಪ್ಪಳದ ಗಾಂಧಿ ಬಳಗದ ಸದಸ್ಯರು 2025ರ ಅಕ್ಟೋಬರ್ 2ರಂದು ಬಟಪನಹಳ್ಳಿ ಗ್ರಾಮದಿಂದ ಬಿನ್ನಾಳದವರೆಗೆ ಪಾದಯಾತ್ರೆ ನಡೆಸಿದರು. ಮಾರ್ಗ ಮಧ್ಯೆ ಚಿಕ್ಕೇನಕೊಪ್ಪ ಗ್ರಾಮದಲ್ಲಿ ಗಾಂಧಿ ಚಿಂತನ ಸಭೆ ನಡೆಸಿ ಜಾಗೃತಿ ಮೂಡಿಸಿದ್ದು ವಿಶೇಷವಾಗಿತ್ತು. ಈ ಪಾದಯಾತ್ರೆಯಲ್ಲಿ ಗದಗ ಜಿಲ್ಲೆಯ ಕಪ್ಪತ್ತಗುಡ್ಡದ ಶ್ರೀಗಳು, ವಿಜಯಪುರ ಜಿಲ್ಲೆಯ ಹಡಪದ ಅಪ್ಪಣ್ಣ ಗುರುಪೀಠದ ಶ್ರೀಗಳು ಸ್ವಇಚ್ಛೆಯಿಂದ ಭಾಗವಹಿಸಿದ್ದರು. ಬಿನ್ನಾಳ ಗ್ರಾಮಸ್ಥರ ಮದ್ಯ ಮಾರಾಟ ನಿಷೇಧ ನಿರ್ಣಯದಿಂದ ಸ್ಫೂರ್ತಿ ಪಡೆದ ನೆರೆಯ ಚಿಕ್ಕೇನಕೊಪ್ಪ ಗ್ರಾಮಸ್ಥರು ಕೂಡ ತಮ್ಮ ಗ್ರಾಮದಲ್ಲಿ ಅಂತಹ ನಿರ್ಣಯ ಕೈಗೊಂಡಿದ್ದಾರೆ.

ಹಟ್ಟಿ ಗ್ರಾಮಕ್ಕೆ ಸಂಯಮ ಪ್ರಶಸ್ತಿ

ಹೆಣ್ಣುಮಕ್ಕಳು ಮನಸ್ಸು ಮಾಡಿದರೆ ಏನಾದರೂ ಬದಲಾವಣೆ, ಸುಧಾರಣೆ ತರಬಲ್ಲರು ಎಂಬುದನ್ನು ಕೊಪ್ಪಳ ತಾಲ್ಲೂಕಿನ ಕಾಮನೂರು ಬಳಿಯ ಹಟ್ಟಿ ಗ್ರಾಮದ ಮಹಿಳೆಯರು ಮಾಡಿ ತೋರಿಸಿದ್ದಾರೆ. ತಮ್ಮ ಊರಿನ ಪುರುಷರು, ಯುವಕರ ಮದ್ಯ ವ್ಯಸನದಿಂದ ರೋಸಿ ಹೋದ ಹೆಣ್ಣುಮಕ್ಕಳು ಗ್ರಾಮಕ್ಕೆ ಭೇಟಿ ನೀಡಿದ್ದ ಗವಿಮಠದ ಶ್ರೀ ಗವಿಸಿದ್ಧೇಶ್ವರ ಸ್ವಾಮಿಗಳಲ್ಲಿ ಅಹವಾಲು ಹೇಳಿಕೊಂಡಾಗ, ಹಟ್ಟಿ ಗ್ರಾಮಸ್ಥರು ಮಠಕ್ಕೆ ದೇಣಿಗೆ ಕೊಡುವುದಕ್ಕಿಂತಲೂ ಮುಖ್ಯವಾಗಿ ಗ್ರಾಮದಲ್ಲಿ ಮದ್ಯ ಮಾರಾಟ ಸ್ಥಗಿತ ಮಾಡುವ ನಿರ್ಣಯ ಕೈಗೊಂಡು, ಆಚರಿಸಲು ಸೂಚಿಸಿದರು. ಗವಿಶ್ರೀಗಳ ಮಾತಿನಂತೆ ಹಟ್ಟಿ ಗ್ರಾಮಸ್ಥರು ಗ್ರಾಮದಲ್ಲಿ ಮದ್ಯ ಮಾರಾಟ ನಿಷೇಧಿಸಿ ಮದ್ಯ ಮುಕ್ತ ಗ್ರಾಮವಾಗಿಸಿದ್ದಾರೆ. ಹಟ್ಟಿ ಗ್ರಾಮಸ್ಥರ ಈ ಸಾಧನೆಯೇ ನಿಜವಾದ ಸಂಯಮ ಎಂದು ಗುರುತಿಸಿದ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷರಾದ ಶರಣಪ್ಪ ಸಲಾದಪೂರ ಅವರು ಹಟ್ಟಿ ಗ್ರಾಮಕ್ಕೆ ಸಂಯಮ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಇತ್ತೀಚೆಗಷ್ಟೇ ಗ್ರಾಮದಲ್ಲಿ ಗಾಂಧಿ ಚಿಂತನೆಗಳೊಂದಿಗೆ ಪಾದಯಾತ್ರೆ ನಡೆಸಿ ಪ್ರಶಸ್ತಿ ಪ್ರದಾನ ಮಾಡಿದ್ದು ಊರಿನ ಜನರಲ್ಲಿ ಹೊಸ ಭರವಸೆ ಮೂಡಿಸಿದೆ.

ನೈತಿಕತೆ, ಮಾನವೀಯ ಮೌಲ್ಯಗಳೆಂದರೆ ಕೇವಲ ವೇದಿಕೆಯ ಮೇಲಿನ ಭಾಷಣಗಳು, ಬರಹಗಳಿಗೆ ಸೀಮಿತವಾಗಲು ಬಿಡದೆ, ಚಿಂತನೆಗಳಿಗೆ ಕ್ರಿಯಾರೂಪ ನೀಡುತ್ತಿರುವ ಕೊಪ್ಪಳದ ಗಾಂಧಿ ಬಳಗದ ಕಾರ್ಯ ನಾಡಿಗೆ ಮಾದರಿಯಾಗಿದೆ. ಗಾಂಧಿ ಜಯಂತಿ ಕೇವಲ ಆಚರಣೆಯಲ್ಲ ಅದು ನಾವು ಸಾಗಬೇಕಾದ ಮಾರ್ಗ, ದಿಕ್ಸೂಚಿಯಾಗಿ ಮುನ್ನಡೆಸುತ್ತಿದ್ದಾರೆ. ಇಂತಹ ಬಳಗದ ಸಂತತಿ ಎಲ್ಲೆಡೆ ಹಬ್ಬಿದರೆ ಸುಸ್ಥಿರ ಬದುಕು, ಭವಿಷ್ಯದೆಡೆಗೆ ದೇಶ ಸಾಗಲು ಸಾಧ್ಯ. ಗಾಂಧಿ ಎಂದಿಗೂ ನಮ್ಮ ಅಸ್ಮಿತೆಯಾಗಿರಲು ಸಾಧ್ಯ. ■

Downloaded From:www.kpscvaani.com

ಕರ್ನಾಟಕದ ಮಣ್ಣಿನಲ್ಲಿ ಮತ್ತೆ ಮೊಳಗಿದ ಗಾಂಧಿ ಚಿಂತನೆ

ಶತಮಾನೋತ್ಸವದ ಸಂಕಲ್ಪ

ಜಡಿಯಪ್ಪ ಗೆದ್ಲಗಟ್ಟಿ



ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಕರ್ನಾಟಕದ ಪಾತ್ರ ವಿಶಿಷ್ಟವಾದುದು. ಈ ಹೋರಾಟಕ್ಕೆ ಮಹಾತ್ಮ ಗಾಂಧೀಜಿಯವರ ಭೇಟಿ ಮತ್ತು ಪ್ರವಾಸಗಳು ಮತ್ತಷ್ಟು ಚೈತನ್ಯ ತುಂಬಿದವು. ಉತ್ತರ ಕರ್ನಾಟಕದ ಬೆಳಗಾವಿಯಿಂದ ಕರಾವಳಿಯ ಮಂಗಳೂರಿನವರೆಗೆ, ಮೈಸೂರು ಸಂಸ್ಥಾನದಿಂದ ಬೆಂಗಳೂರಿನವರೆಗೆ ಗಾಂಧೀಜಿಯವರ ಹೆಜ್ಜೆಗಳು ಮೂಡಿವೆ. ಅವರು ಭೇಟಿ ನೀಡಿದ ಪ್ರತಿಯೊಂದು ಪ್ರದೇಶವೂ ಅವರ ರಾಜಕೀಯ ಸಂದೇಶಕ್ಕಷ್ಟೇ ಅಲ್ಲದೆ, ಖಾದಿ, ಸ್ವದೇಶಿ, ಅಹಿಂಸೆ, ಅಸ್ಪೃಶ್ಯತಾ ನಿವಾರಣೆ, ಗ್ರಾಮೋನ್ನತಿ ಹಾಗೂ ಸಾಮಾಜಿಕ ಸಾಮರಸ್ಯದ ಚಿಂತನೆಗಳಿಗೆ ಸಾಕ್ಷಿಯಾಗಿದೆ.

ಗಾಂಧೀಜಿಯವರ ಕರ್ನಾಟಕ ಪ್ರವಾಸಗಳನ್ನು ಕೇವಲ ರಾಜಕೀಯ ಸಭೆಗಳ ಸರಣಿಯಾಗಿ ನೋಡುವುದಕ್ಕಿಂತ, ಕರ್ನಾಟಕದ ಜನಜೀವನದೊಂದಿಗೆ ಅವರು ನಡೆಸಿದ ನಿರಂತರ ಸಂವಾದವೆಂದು ನೋಡುವುದು ಸೂಕ್ತ. ಸ್ವಾತಂತ್ರ್ಯ ಹೋರಾಟದಿಂದ ಸಮಾಜ ಸುಧಾರಣೆಯವರೆಗೆ ಬಾಪೂಜಿ ಕರ್ನಾಟಕದೊಂದಿಗಿನ ಅವಿನಾಭಾವ ನಂಟು ಹೊಂದಿರುವುದನ್ನು ನಾವು ಗಮನಿಸಬಹುದಾಗಿದೆ.

ಕರ್ನಾಟಕಕ್ಕೆ ಗಾಂಧೀಜಿಯವರ ಮೊದಲ ಹೆಜ್ಜೆ : 1915ರಲ್ಲಿ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಮರಳಿದ ಬಳಿಕ ಗಾಂಧೀಜಿಯವರು ಕರ್ನಾಟಕದ ಭಾಗಗಳಿಗೆ ಭೇಟಿ ನೀಡಲು ಆರಂಭಿಸಿದರು. ಅವರ

Downloaded From:www.kpscvaani.com



ಆರಂಭಿಕ ಕರ್ನಾಟಕ ಸಂಪರ್ಕದಲ್ಲಿ ಬೆಂಗಳೂರು ಪ್ರಮುಖವಾಗಿತ್ತು. ನಂತರದ ವರ್ಷಗಳಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳಿಗೆ ಅವರು ಪುನಃ ಪುನಃ ಭೇಟಿ ನೀಡಿದರು.

ಅವರ ಪ್ರವಾಸಗಳ ಉದ್ದೇಶ ಒಂದೇ ಆಗಿರಲಿಲ್ಲ. ಕೆಲವೆಡೆ ಸ್ವಾತಂತ್ರ್ಯ ಚಳವಳಿಯ ಸಂಘಟನೆ, ಇನ್ನೆಡೆ ಖಾದಿ ಮತ್ತು ಚರಕದ ಪ್ರಚಾರ, ಮತ್ತೊಂದೆಡೆ ಅಸ್ಪೃಶ್ಯತಾ ನಿವಾರಣೆ ಹಾಗೂ ಸಾಮಾಜಿಕ ಸುಧಾರಣೆ ಹೀಗೆ ಸ್ಥಳಾನುಸಾರ ಅವರ ಕಾರ್ಯಕ್ರಮಗಳು ರೂಪುಗೊಳ್ಳುತ್ತಿದ್ದವು.

ಬೆಳಗಾವಿ–ಗಾಂಧೀಜಿಯವರ ಕರ್ನಾಟಕದ ಐತಿಹಾಸಿಕ ನೆಲೆ : ಕರ್ನಾಟಕದ ಇತಿಹಾಸದಲ್ಲಿ ಗಾಂಧೀಜಿಯವರೊಂದಿಗೆ ಅತ್ಯಂತ ಗಾಢವಾಗಿ ಸಂಬಂಧ ಹೊಂದಿರುವ ನಗರವೆಂದರೆ ಬೆಳಗಾವಿ. ಗಾಂಧೀಜಿಯವರು 1916ರಲ್ಲಿ ಲೋಕಮಾನ್ಯ ಬಾಲ ಗಂಗಾಧರ ತಿಲಕರೊಂದಿಗೆ ಬೆಳಗಾವಿಗೆ ಭೇಟಿ ನೀಡಿದ್ದರು. ನಂತರ 1920ರ ನವೆಂಬರ್‌ನಲ್ಲಿ ಮತ್ತೆ ಬೆಳಗಾವಿಗೆ ಆಗಮಿಸಿ ಸ್ವಾತಂತ್ರ್ಯ ಚಳವಳಿಯ ಸಂದೇಶವನ್ನು ಜನರಿಗೆ ತಲುಪಿಸಿದರು.

ಆದರೆ 1924ರ ಬೆಳಗಾವಿ ಕಾಂಗ್ರೆಸ್ ಅಧಿವೇಶನವು ಗಾಂಧೀಜಿಯವರ ಕರ್ನಾಟಕ ಪ್ರವಾಸದ ಇತಿಹಾಸದಲ್ಲಿ ಅತ್ಯಂತ ಮಹತ್ವದ ಅಧ್ಯಾಯವಾಗಿದೆ. ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ 1924ರ ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ ವಿಶಿಷ್ಟ ಸ್ಥಾನವಿದೆ. ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಅಧ್ಯಕ್ಷತೆ ವಹಿಸಿದ್ದ ಏಕೈಕ ಕಾಂಗ್ರೆಸ್ ಅಧಿವೇಶನ ಎಂಬ ಹೆಗ್ಗಳಿಕೆಗೆ ಪಾತ್ರವಾದ ಈ ಐತಿಹಾಸಿಕ ಅಧಿವೇಶನ ಕರ್ನಾಟಕದ ನೆಲದಲ್ಲಿ ನಡೆದಿರುವುದು ಕನ್ನಡಿಗರ ಹೆಮ್ಮೆ.

ಈ ಐತಿಹಾಸಿಕ ಘಟನೆಯ ಶತಮಾನೋತ್ಸವದ ಸಂದರ್ಭದಲ್ಲಿ 2024ರಲ್ಲಿ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ನೇತೃತ್ವದ ಕರ್ನಾಟಕ ಸರ್ಕಾರ "ಗಾಂಧಿ ಭಾರತ" ಎಂಬ ವಿಶಾಲ ಜನಜಾಗೃತಿ ಕಾರ್ಯಕ್ರಮಕ್ಕೆ ರೂಪ ನೀಡಿದೆ. ಗಾಂಧೀಜಿಯವರ ಸತ್ಯ, ಅಹಿಂಸೆ, ಸ್ವದೇಶಿ, ಸ್ವಾವಲಂಬನೆ, ಸಾಮಾಜಿಕ ಸಮಾನತೆ, ಗ್ರಾಮ ಸ್ವರಾಜ್ಯ ಮತ್ತು ಸರ್ವೋದಯದ ಮೌಲ್ಯಗಳನ್ನು ಇಂದಿನ ಪೀಳಿಗೆಗೆ ಪರಿಚಯಿಸುವುದು ಇದರ ಪ್ರಮುಖ ಆಶಯವಾಗಿದೆ. ರಾಜ್ಯಾದ್ಯಂತ ವರ್ಷವಿಡೀ ವಿವಿಧ ಕಾರ್ಯಕ್ರಮಗಳನ್ನು ನಡೆಸಿ ಗಾಂಧಿ ತತ್ವಗಳು ಪ್ರತಿಯೊಂದು ಮನೆಗೂ ತಲುಪುವಂತೆ ಮಾಡುವ ಉದ್ದೇಶವನ್ನು ಸರ್ಕಾರ ಹೊಂದಿದೆ.

ಗಾಂಧೀಜಿಯವರ ಕರ್ನಾಟಕ: ಒಂದು ಆತ್ಮೀಯ ಸಂಬಂಧ : ಗಾಂಧೀಜಿಯವರ ಕರ್ನಾಟಕ ಪ್ರವಾಸಗಳು ಭಾರತದ ಸ್ವಾತಂತ್ರ್ಯ ಚಳವಳಿಯೊಂದಿಗೆ ರಾಜ್ಯದ ಜನರನ್ನು ನೇರವಾಗಿ ಜೋಡಿಸಿದವು. ಬೆಂಗಳೂರು, ಮೈಸೂರು, ಬೆಳಗಾವಿ, ಹುಡಲಿ, ಮಂಗಳೂರು, ಧಾರವಾಡ, ಹುಬ್ಬಳ್ಳಿ, ಗದಗ, ವಿಜಯಪುರ, ಬಾಗಲಕೋಟೆ, ಬಳ್ಳಾರಿ, ನಂದಿಬೆಟ್ಟ, ಚಿಕ್ಕಬಳ್ಳಾಪುರ, ಕೋಲಾರ, ಕೆಜಿಎಫ್, ಮಂಡ್ಯ, ಮದ್ದೂರು, ರಾಮನಗರ ಸೇರಿದಂತೆ ಕರ್ನಾಟಕದ ಅನೇಕ ಪ್ರದೇಶಗಳಲ್ಲಿ ಗಾಂಧೀಜಿಯವರ ಹೆಜ್ಜೆಗುರುತುಗಳಿವೆ.

1936ರಲ್ಲಿ ನಂದಿಬೆಟ್ಟದಲ್ಲಿ ವಿಶ್ರಾಂತಿ ಪಡೆದ ಬಳಿಕ ಅವರು ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಕೋಲಾರ, ಬಂಗಾರಪೇಟೆ, ಕೆಜಿಎಫ್ ಮತ್ತು ಮಾಲೂರು ಮಾರ್ಗವಾಗಿ ಬೆಂಗಳೂರಿಗೆ ಆಗಮಿಸಿದ್ದರು. 1937ರಲ್ಲಿ ಬೆಳಗಾವಿ ಜಿಲ್ಲೆಯ ಹುಡಲಿಗೆ ಭೇಟಿ ನೀಡಿ ಖಾದಿ ಪ್ರದರ್ಶನ ಉದ್ಘಾಟಿಸಿ ಕೆಲವು ದಿನಗಳ ಕಾಲ ತಂಗಿದ್ದರು. ಕರ್ನಾಟಕ ಸರ್ಕಾರದ Handbook of Karnataka ಕೂಡ ಹುಡಲಿ ಪ್ರವಾಸವೇ ಗಾಂಧೀಜಿಯವರ ಕರ್ನಾಟಕದ ಕೊನೆಯ ಭೇಟಿ ಎಂದು ದಾಖಲಿಸುತ್ತದೆ.

Downloaded From:www.kpscvaani.com

ಹೀಗಾಗಿ ಕರ್ನಾಟಕವು ಗಾಂಧೀಜಿಯವರ ರಾಜಕೀಯ ಪ್ರವಾಸದ ಒಂದು ಅಧ್ಯಾಯ ಮಾತ್ರವಲ್ಲ; ಅವರ ಸಾಮಾಜಿಕ ಮತ್ತು ಆರ್ಥಿಕ ಚಿಂತನೆಗಳಿಗೆ ಸ್ಪಂದಿಸಿದ ಪ್ರಮುಖ ನೆಲವೂ ಹೌದು.

ಗಾಂಧಿ ಭಾರತ: ಇತಿಹಾಸವನ್ನು ವರ್ತಮಾನದೊಂದಿಗೆ ಬೆಸೆಯುವ ಪ್ರಯತ್ನ : ಇತಿಹಾಸವನ್ನು ನೆನಪಿಸಿಕೊಳ್ಳುವುದು ಎಂದರೆ ಕೇವಲ ಹಿಂದಿನ ಘಟನೆಗಳನ್ನು ಪುನರುಚ್ಚರಿಸುವುದಲ್ಲ. ಆ ಇತಿಹಾಸದಿಂದ ವರ್ತಮಾನಕ್ಕೆ ಬೇಕಾದ ಮೌಲ್ಯಗಳನ್ನು ಪಡೆದುಕೊಳ್ಳುವುದು. "ಗಾಂಧಿ ಭಾರತ"ದ ಆಶಯವೂ ಇದೇ ಆಗಿದೆ.

ಗಾಂಧೀಜಿಯವರ ವಿಚಾರಗಳು ಸ್ವಾತಂತ್ರ್ಯ ಹೋರಾಟದ ಕಾಲಕ್ಕೆ ಮಾತ್ರ ಸೀಮಿತವಾಗಿಲ್ಲ. ಸಾಮಾಜಿಕ ಸಾಮರಸ್ಯ, ಸ್ವಚ್ಛತೆ, ಗ್ರಾಮೀಣಾಭಿವೃದ್ಧಿ, ಸ್ವಾವಲಂಬನೆ, ಮಹಿಳಾ ಸಬಲೀಕರಣ, ದುರ್ಬಲ ವರ್ಗಗಳ ಒಳಗೊಳ್ಳುವಿಕೆ, ಪರಿಸರ ಕಾಳಜಿ ಮತ್ತು ಶಾಂತಿಯಂತಹ ಇಂದಿನ ಹಲವು ಸವಾಲುಗಳ ಕುರಿತ ಚರ್ಚೆಯಲ್ಲಿಯೂ ಅವುಗಳನ್ನು ಪುನರ್‌ಪರಿಶೀಲಿಸಬಹುದಾಗಿದೆ. ಈ ಕಾರಣದಿಂದಲೇ ಶತಮಾನೋತ್ಸವದ ಆಚರಣೆ ಒಂದು ನೆನಪಿನ ಕಾರ್ಯಕ್ರಮಕ್ಕಿಂತಲೂ ಮೌಲ್ಯಗಳ ಪುನರ್‌ಸ್ಮರಣೆಯಾಗಿದೆ.

ಕರ್ನಾಟಕದಲ್ಲಿ ಗಾಂಧೀಜಿ : ಕರ್ನಾಟಕಕ್ಕೆ ಭೇಟಿ ನೀಡಿದಾಗ ಗಾಂಧೀಜಿಯವರು ಕೇವಲ ರಾಜಕೀಯ ನಾಯಕರಾಗಿ ಜನರನ್ನುದ್ದೇಶಿಸಿ ಮಾತನಾಡಲಿಲ್ಲ. ಕಾರ್ಮಿಕರು, ವಿದ್ಯಾರ್ಥಿಗಳು, ಖಾದಿ ಮತ್ತು ಚರಕದ ಮಹತ್ವ, ಅಸ್ಪೃಶ್ಯತಾ ನಿವಾರಣೆ ಕುರಿತಂತೆ ಮಾತನಾಡಿದರು ಹಾಗೂ ಗ್ರಾಮೀಣ ಜೀವನವನ್ನು ಸಮೀಪದಿಂದ ಅರಿಯಲು ಪ್ರಯತ್ನಿಸಿದರು, ಸಾಮಾಜಿಕ ಸಾಮರಸ್ಯಕ್ಕಾಗಿ ಜನರನ್ನು ಪ್ರೇರೇಪಿಸಿದರು. ಇಂದು ಅದೇ ಇತಿಹಾಸವನ್ನು ನೆನಪಿಸಿಕೊಳ್ಳುತ್ತಿರುವ ಕರ್ನಾಟಕದಲ್ಲಿ ಸ್ವಾತಂತ್ರ್ಯವನ್ನು ಪಡೆದ ನಂತರದ ಭಾರತದ ಜವಾಬ್ದಾರಿಗಳ ಕುರಿತು ಚಿಂತಿಸುವ ಅಗತ್ಯದಿಂದ ಗಾಂಧಿ ಭಾರತ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಕರ್ನಾಟಕ ಸರ್ಕಾರ ಹಮ್ಮಿಕೊಂಡಿರುವ ಗಾಂಧಿ ಭಾರತದ ಮುಖ್ಯ ಉದ್ದೇಶ ಪ್ರಜಾಪ್ರಭುತ್ವವನ್ನು ಬಲಪಡಿಸುವುದು. ಸಾಮಾಜಿಕ ಸಾಮರಸ್ಯವನ್ನು ಕಾಪಾಡುವುದು. ದುರ್ಬಲ ವರ್ಗಗಳೊಂದಿಗೆ ನಿಲ್ಲುವುದು. ಸ್ವಾವಲಂಬನೆಯನ್ನು ಬೆಳೆಸುವುದು. ಪರಿಸರದ ಬಗ್ಗೆ ಜವಾಬ್ದಾರಿ ವಹಿಸುವುದು. ಯುವಜನರಲ್ಲಿ ಸೇವಾ ಮನೋಭಾವ ಬೆಳೆಸುವುದಾಗಿದೆ.

ಯುವಜನರಿಗಾಗಿ ಗಾಂಧಿ : ಗಾಂಧೀಜಿಯವರನ್ನು ಕೇವಲ ಇತಿಹಾಸ ಪುಸ್ತಕದ ಒಂದು ಅಧ್ಯಾಯವಾಗಿ ಪರಿಚಯಿಸುವ ಬದಲು, ಅವರ ಚಿಂತನೆಗಳ ಕುರಿತು ಯುವಜನರಲ್ಲಿ ಪ್ರಶ್ನೆ, ಚರ್ಚೆ ಮತ್ತು ಸಂವಾದವನ್ನು ಬೆಳೆಸುವುದು ಅಗತ್ಯವಾಗಿದೆ. "ನನ್ನ ಜೀವನವೇ ನನ್ನ ಸಂದೇಶ" ಎಂಬ ಗಾಂಧೀಜಿಯವರ ಪ್ರಸಿದ್ಧ ಜೀವನದೃಷ್ಟಿ, ಯುವಜನರಿಗೆ ಮೌಲ್ಯಗಳನ್ನು ಕೇವಲ ಓದುವುದಕ್ಕಿಂತ ಅವುಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವ ಸಂದೇಶವನ್ನು ನೀಡುತ್ತದೆ. "ಗಾಂಧಿ ಭಾರತ"ವು ಈ ದೃಷ್ಟಿಯಿಂದ ಶಾಲಾ-ಕಾಲೇಜುಗಳು, ಯುವಜನರು, ಕಲಾವಿದರು, ಸಾಹಿತಿಗಳು, ರೈತರು, ಕಾರ್ಮಿಕರು, ಮಹಿಳೆಯರು ಮತ್ತು ನಾಗರಿಕ ಸಮಾಜವನ್ನು ಒಳಗೊಂಡ ದೊಡ್ಡ ಜನಸಂವಾದಕ್ಕೆ ವೇದಿಕೆಯಾಗಿದೆ.


1924ರ ಬೆಳಗಾವಿ ಅಧಿವೇಶನದಲ್ಲಿ ಗಾಂಧೀಜಿಯವರ ನೇತೃತ್ವದಲ್ಲಿ ರಾಷ್ಟ್ರೀಯ ಚಳವಳಿಯ ಸಂದೇಶ ಮೊಳಗಿತ್ತು. ಒಂದು ಶತಮಾನದ ನಂತರ ಅದೇ ನೆಲದಿಂದ ಗಾಂಧೀಜಿಯವರ ಮೌಲ್ಯಗಳನ್ನು ಇಡೀ ರಾಜ್ಯಕ್ಕೆ ಕೊಂಡೊಯ್ಯುವ ಪ್ರಯತ್ನ ನಡೆಯುತ್ತಿದೆ. ಆದ್ದರಿಂದ "ಗಾಂಧಿ ಭಾರತ" ಎಂಬುದು ಕೇವಲ ಒಂದು ಕಾರ್ಯಕ್ರಮದ ಹೆಸರು ಅಲ್ಲ, ಅದು ಒಂದು ನೆನಪು, ಅದು ಒಂದು ಸಂವಾದ, ಅದು ಒಂದು ಮೌಲ್ಯಗಳ ಪುನರ್ಸ್ಮರಣೆ, ಅದು ಹೊಸ ಪೀಳಿಗೆಗೆ ಇತಿಹಾಸದೊಂದಿಗೆ ಸಂಪರ್ಕ ಕಲ್ಪಿಸುವ ಪ್ರಯತ್ನ ಮತ್ತು ಮುಖ್ಯವಾಗಿ, ಗಾಂಧೀಜಿಯವರ ಕನಸಿನ ಭಾರತವನ್ನು ಇಂದಿನ ಸಂದರ್ಭದಲ್ಲಿ ಅರ್ಥಮಾಡಿಕೊಳ್ಳುವ ಒಂದು ಅವಕಾಶವಾಗಿದೆ.





Downloaded From:www.kpscvaani.com

ಕರ್ನಾಟಕ ಸರ್ಕಾರದ ಗಾಂಧಿ ಭಾರತ : ಮಹಾತ್ಮ ಗಾಂಧಿಜಿಯವರ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ದಿನಾಚರಣೆಯ ಅಂಗವಾಗಿ ವರ್ಷಪೂರ್ತಿ ವಿವಿಧ ಕಾರ್ಯಕ್ರಮಗಳನ್ನು ರಾಜ್ಯದ ವಿವಿಧಡೆ ವಿವಿಧ ಇಲಾಖೆಗಳ ಮೂಲಕ ಗಾಂಧಿ ತತ್ವಗಳ ಪ್ರಚಾರಕ್ಕಾಗಿ ಗಾಂಧಿ ಭಾರತ ಕಾರ್ಯಕ್ರಮವನ್ನು ರೂಪಿಸಿ ಅರ್ಥಪೂರ್ಣವಾಗಿ ಹಾಗೂ ರಚನಾತ್ಮಕವಾಗಿ ಆಯೋಜಿಸಲು ಕರ್ನಾಟಕ ಸರ್ಕಾರ ಅಂದಿನ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಪ್ರವಸೋದ್ಯಮ ಸಚಿವರಾಗಿದ್ದ ಹೆಚ್.ಕೆ.ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ವಿವಿಧ ಸಚಿವರು ಹಾಗೂ ಗಾಂಧಿವಾದಿಗಳು ಮತ್ತು ಗಾಂಧಿ ತತ್ವ ಸಾರುವ ಸಂಸ್ಥೆಗಳನ್ನು ಸದಸ್ಯರನ್ನಾಗಿ ಮಾಡಿ ಆದೇಶಿಸಿದೆ.



ಗಾಂಧಿ ಸ್ಮಾರಕ ಸ್ತಂಭ : ಗಾಂಧಿ ಭಾರತ ಕಾರ್ಯಕ್ರಮದ ಪ್ರಮುಖ ಯೋಜನೆಯಾದ ಗಾಂಧಿ ಸ್ಮಾರಕ ಸ್ತಂಭವನ್ನು ಜಾರಿಗೊಳಿಸಲು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ವಹಿಸಲಾಗಿದೆ. ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಭೇಟಿ ಕೊಟ್ಟ ರಾಜ್ಯದ 87 ಸ್ಥಳಗಳಲ್ಲಿ ಅವರ ಸ್ಮರಣಾರ್ಥ "ಗಾಂಧಿ ಸ್ಮಾರಕ ಸ್ತಂಭ"ಗಳನ್ನು ನಿರ್ಮಿಸಲಾಗುತ್ತಿದೆ. ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ವಿಚಾರಧಾರೆಗಳನ್ನು ಯುವಜನರಿಗೆ ತಿಳಿಸಲು ಮತ್ತು ಗಾಂದಿ ಭವನಗಳನ್ನು ಪುನಃಶ್ಚೇತನಗೊಳಿಸಲು ಮಹಾತ್ಮ ಗಾಂಧಿ ಜನ ಶಿಕ್ಷಣ ಕೇಂದ್ರ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ.

ಅಂತರರಾಷ್ಟ್ರೀಯ ಖ್ಯಾತಿಯ ಶಿಲ್ಪಿ ಮೈಸೂರಿನ ಶ್ರೀ ಅರುಣ್ ಯೋಗಿರಾಜ ಅವರ ಕೈಚಳಕದಿಂದ ಮೂಡಿ ಬಂದಿರುವ ಗಾಂಧಿ ಸ್ಮಾರಕ ಸ್ತಂಭಗಳು ಶಿಲಾ ಗ್ರಾನೈಟ್ ಕಲ್ಲು ಬಳಸಿದ್ದು, ಇದು ಏಕಶಿಲೆಯಾಗಿರುವುದು ವಿಶೇಷವಾಗಿದೆ. "10 ಅಡಿ ಎತ್ತರ, ಒಂದು ಅಡಿ ದಪ್ಪ ಹಾಗೂ ಮೂರು ಕಾಲು ಅಡಿ ಅಗಲವಿರುವ ಈ ಶಿಲೆ ಯಾವುದೇ ಮಳೆ-ಬಿಸಿಲಿಗೆ ಹಾನಿಯಾಗುವುದಿಲ್ಲ, ಶಿಲ್ಪಕ್ಕೆ 400ರಿಂದ 500 ವರ್ಷಗಳ ಕಾಲ ಯಾವುದೇ ನಿರ್ವಹಣೆಯ ಅಗತ್ಯವಿರುವುದಿಲ್ಲ" ಎನ್ನುತ್ತಾರೆ ಅರುಣ್ ಯೋಗಿರಾಜ ಅವರು.

ಗಾಂಧಿ ಸ್ಮಾರಕ ಸ್ತಂಭ ಸಾರುವ ಮುಖ್ಯ ಅಂಶಗಳು :

ಸತ್ಯ: ಗಾಂಧಿ ಚಿಂತನೆಯ ಮೊದಲ ಹೆಜ್ಜೆ:

"ಸತ್ಯ" ಗಾಂಧೀಜಿಯವರ ಜೀವನದ ಕೇಂದ್ರಬಿಂದು. ಅವರಿಗೆ ಸತ್ಯವೆಂದರೆ ಕೇವಲ ಮಾತಿನಲ್ಲಿ ಪ್ರಾಮಾಣಿಕತೆ ಅಲ್ಲ; ಬದುಕಿನ ಪ್ರತಿಯೊಂದು ಕ್ಷೇತ್ರದಲ್ಲಿಯೂ ನೈತಿಕತೆಯನ್ನು ಅಳವಡಿಸಿಕೊಳ್ಳುವುದು. ಈ ಕುರಿತಂತೆ ಯುವ ಜನರಲ್ಲಿ ಜಾಗೃತಿ ಮೂಡಿಸುವುದು ಸರ್ಕಾರದ ಮುಖ್ಯ ಉದ್ದೇಶವಾಗಿದೆ.

ಇಂದು ಸಾರ್ವಜನಿಕ ಜೀವನದಲ್ಲಿ ಪಾರದರ್ಶಕತೆ, ಜವಾಬ್ದಾರಿ ಮತ್ತು ನೈತಿಕತೆಯ ಕುರಿತು ನಡೆಯುತ್ತಿರುವ ಚರ್ಚೆಗಳ ನಡುವೆ ಗಾಂಧೀಜಿಯವರ ಸತ್ಯದ ಪರಿಕಲ್ಪನೆ ಹೊಸ ಅರ್ಥ ಪಡೆದುಕೊಳ್ಳುತ್ತದೆ. 'ಗಾಂಧಿ ಭಾರತ'ದಂತಹ ಕಾರ್ಯಕ್ರಮವು ಯುವಜನರಲ್ಲಿ ಈ ಮೌಲ್ಯಗಳ ಕುರಿತು ಸಂವಾದಕ್ಕೆ ಅವಕಾಶ ಕಲ್ಪಿಸುವ ಸಾಧ್ಯತೆ ಇದೆ.

Downloaded From:www.kpscvaani.com

ಅಹಿಂಸೆ: ಸಂಘರ್ಷಕ್ಕೆ ಪರ್ಯಾಯವಾದ ಶಕ್ತಿ : ಗಾಂಧೀಜಿಯವರ ಅಹಿಂಸೆ ದುರ್ಬಲತೆಯ ಸಂಕೇತವಾಗಿರಲಿಲ್ಲ. ಅನ್ಯಾಯದ ವಿರುದ್ಧ ದೃಢವಾಗಿ ನಿಲ್ಲುತ್ತಾ, ಹಿಂಸೆಯನ್ನು ತ್ಯಜಿಸುವ ನೈತಿಕ ಶಕ್ತಿಯಾಗಿತ್ತು. ಕರ್ನಾಟಕದ ಸ್ವಾತಂತ್ರ್ಯ ಹೋರಾಟದಲ್ಲಿಯೂ ಅಹಿಂಸಾತ್ಮಕ ಹೋರಾಟಗಳು ಜನರನ್ನು ದೊಡ್ಡ ಪ್ರಮಾಣದಲ್ಲಿ ಒಗ್ಗೂಡಿಸಿದವು.

ಮಂಡ್ಯ ಜಿಲ್ಲೆಯ ಶಿವಪುರದಲ್ಲಿ ನಡೆದ ಸತ್ಯಾಗ್ರಹದ ನೆನಪು ಇದಕ್ಕೆ ಒಂದು ಪ್ರಮುಖ ಉದಾಹರಣೆ. 1938ರ ಏಪ್ರಿಲ್ 26 ರಂದು ಸುಮಾರು 40,000 ಜನರ ಬೃಹತ್ ಸಮೂಹದ ಎದುರು ಪೊಲೀಸರು ಶಸ್ತ್ರಸಜ್ಜಿತರಾಗಿ ನಿಂತಿದ್ದರೂ, ಸತ್ಯಾಗ್ರಹಿಗಳು ಅಹಿಂಸೆಯ ಮಾರ್ಗವನ್ನು ಅನುಸರಿಸಿದರು ಎಂದು ಮಂಡ್ಯ ಜಿಲ್ಲಾಡಳಿತದ ಅಧಿಕೃತ ದಾಖಲೆ ತಿಳಿಸುತ್ತದೆ. ಅಹಿಂಸೆಯ ಈ ಇತಿಹಾಸ ಇಂದಿನ ಸಮಾಜಕ್ಕೆ ಸಂವಾದ ಮತ್ತು ಶಾಂತಿಯ ಮಹತ್ವವನ್ನು ನೆನಪಿಸುತ್ತದೆ.

ಶತಮಾನದ ಹಿಂದೆ ಆತ್ಮನಿರ್ಭರತೆಯ ಚಿಂತನೆ : ಗಾಂಧೀಜಿಯವರ ಚರಕ ಮತ್ತು ಖಾದಿ ಕೇವಲ ಬಟ್ಟೆಯ ಸಂಕೇತಗಳಾಗಿರಲಿಲ್ಲ. ಅವು ಗ್ರಾಮೀಣ ಆರ್ಥಿಕತೆ, ಉದ್ಯೋಗ ಮತ್ತು ಸ್ವಾವಲಂಬನೆಯ ಸಂಕೇತಗಳಾಗಿದ್ದವು. ಹುಡಲಿ ಸೇರಿದಂತೆ ಕರ್ನಾಟಕದ ಹಲವು ಪ್ರದೇಶಗಳಲ್ಲಿ ಖಾದಿ ಚಟುವಟಿಕೆಗಳು ಬಲ ಪಡೆದವು. 1937ರಲ್ಲಿ ಗಾಂಧೀಜಿಯವರು ಹುಡಲಿಯಲ್ಲಿ ಖಾದಿ ಪ್ರದರ್ಶನ ಉದ್ಘಾಟಿಸಿ, ಗಾಂಧಿ ಸೇವಾ ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರು. ಇಂದು "ಸ್ವಾವಲಂಬನೆ" ಮತ್ತು "ಸ್ಥಳೀಯ ಉತ್ಪನ್ನಗಳಿಗೆ ಪ್ರೋತ್ಸಾಹ"ದ ಕುರಿತು ನಡೆಯುತ್ತಿರುವ ಚರ್ಚೆಗಳನ್ನು ಗಾಂಧೀಜಿಯವರ ಸ್ವದೇಶಿ ಚಿಂತನೆಯ ಐತಿಹಾಸಿಕ ಹಿನ್ನೆಲೆಯಲ್ಲಿ ನೋಡಬಹುದಾಗಿದೆ.

ಗ್ರಾಮ ಸ್ವರಾಜ್ಯ: ಅಭಿವೃದ್ಧಿಯ ಮತ್ತೊಂದು ದೃಷ್ಟಿಕೋನ : ಗಾಂಧೀಜಿಯವರ ಭಾರತ ಕಲ್ಪನೆಯಲ್ಲಿ ಗ್ರಾಮಕ್ಕೆ ಪ್ರಮುಖ ಸ್ಥಾನವಿತ್ತು. ಗ್ರಾಮಗಳು ಆರ್ಥಿಕವಾಗಿ ಸ್ವಾವಲಂಬಿಯಾಗಬೇಕು, ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಳ್ಳಬೇಕು, ಜನರ ಪಾಲ್ಗೊಳ್ಳುವಿಕೆಯಿಂದ ಸ್ಥಳೀಯ ಆಡಳಿತ ಬಲಪಡಿಸಬೇಕು ಎಂಬುದು ಅವರ ಚಿಂತನೆಯ ಪ್ರಮುಖ ಅಂಶವಾಗಿದೆ. ಇಂದಿನ ವಿಕೇಂದ್ರೀಕರಣ, ಸ್ಥಳೀಯ ಆಡಳಿತ ಮತ್ತು ಗ್ರಾಮೀಣಾಭಿವೃದ್ಧಿಯ ಚರ್ಚೆಗಳ ಸಂದರ್ಭದಲ್ಲಿ ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಪರಿಕಲ್ಪನೆಯನ್ನು ಪುನರ್‌ಚಿಂತನೆ ಮಾಡುವುದು ಪ್ರಸ್ತುತವಾಗಿದೆ.

ಸರ್ವೋದಯ: ಎಲ್ಲರ ಅಭಿವೃದ್ಧಿಯ ಕನಸು : ಗಾಂಧೀಜಿಯವರ ಚಿಂತನೆಯ ಮತ್ತೊಂದು ಪ್ರಮುಖ ಆಯಾಮ ಸರ್ವೋದಯ ಎಲ್ಲರ ಉದಯ. ಸಮಾಜದ ಕೊನೆಯ ವ್ಯಕ್ತಿಯ ಜೀವನದಲ್ಲೂ ಸುಧಾರಣೆ ಕಾಣದಿದ್ದರೆ ಅಭಿವೃದ್ಧಿ ಪೂರ್ಣವಾಗುವುದಿಲ್ಲ ಎಂಬ ಅವರ ಚಿಂತನೆ ಭಾರತದ ಸಾಮಾಜಿಕ ನ್ಯಾಯದ ಚರ್ಚೆಗೆ ಮಹತ್ವದ ನೈತಿಕ ಆಯಾಮವನ್ನು ನೀಡಿದೆ. "ಗಾಂಧಿ ಭಾರತ"ದ ಮೂಲಕ ಈ ಸಂದೇಶಗಳನ್ನು ಹೊಸ ತಲೆಮಾರಿಗೆ ತಲುಪಿಸುವುದು ಶತಮಾನೋತ್ಸವದ ಆಚರಣೆಯ ಪ್ರಮುಖ ಅರ್ಥವಾಗಬಹುದು.

'ಗಾಂಧಿ ಭಾರತ' ಹಾಗೂ ಕರ್ನಾಟಕ ಸರ್ಕಾರದ ವರ್ಷಪೂರ್ತಿ ಕಾರ್ಯಕ್ರಮಗಳು: ಬೆಳಗಾವಿಯಲ್ಲಿ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ 1924ರಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಸಮಾರಂಭದ ನೆನಪಿಗಾಗಿ ಬೆಳಗಾವಿಯಲ್ಲಿ 2024ರಲ್ಲಿ ಬೃಹತ್ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

ಕೇಂದ್ರ ಸರ್ಕಾರ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಕುರಿತು ನಿರ್ಮಿಸಿರುವ ಸಾಕ್ಷ್ಯಚಿತ್ರಗಳನ್ನು ಶಾಲಾ, ಕಾಲೇಜು ವಿದ್ಯಾರ್ಥಿಗಳಿಗೆ ಪ್ರದರ್ಶನ ಏರ್ಪಡಿಸುವುದು ಸೇರಿದಂತೆ ಅವರ ಜೀವನ ಯಾನ ಪ್ರತಿಬಿಂಬಿಸುವ ಛಾಯಾಚಿತ್ರ ಪ್ರದರ್ಶನ ಏರ್ಪಡಿಸುವುದು.

ರಾಷ್ಟ್ರಪಿತ ಜೀವನ ಚರಿತ್ರೆ ಹಾಗೂ ಸ್ವಾತಂತ್ರ್ಯ ಸಂಗ್ರಾಮದ ಹೋರಾಟ ಕುರಿತು ನಾಟಕ ಪ್ರದರ್ಶನ, ಅವರು ಭೇಟಿ ನೀಡಿದ ರಾಜ್ಯದ ವಿವಿಧ ಸ್ಥಳಗಳಲ್ಲಿ ಶಿಲಾ ಫಲಕಗಳ ನಿರ್ಮಾಣ ಮತ್ತು ಅಳವಡಿಕೆ ಸೇರಿದಂತೆ ವಿಶೇಷ ಕಿರು ಹೊತ್ತಿಗೆಗಳನ್ನು ಪ್ರಕಟಿಸುವ ಮೂಲಕ ಗಾಂಧಿ ತತ್ವಗಳ ಕುರಿತು ಜಾಗೃತಿ ಮೂಡಿಸುವುದು.

ಗಾಂಧಿ ಭಾರತ: ನೆನಪಿನಿಂದ ಸಂಕಲ್ಪದವರೆಗೆ : ಕರ್ನಾಟಕದ ಮಣ್ಣಿನಲ್ಲಿ ಗಾಂಧೀಜಿಯವರು ಇಟ್ಟ ಹೆಜ್ಜೆಗುರುತುಗಳಿಗೆ ಒಂದು ಶತಮಾನವಾಗಿದೆ. ಆ ಹೆಜ್ಜೆಗುರುತುಗಳು 'ಸತ್ಯದ ದಾರಿ ಎಂದಿಗೂ ಹಳೆಯದಾಗುವುದಿಲ್ಲ' ಎಂಬುದನ್ನು ನಮಗೆ ಸಾರುತ್ತವೆ. ಅಹಿಂಸೆಯ ಶಕ್ತಿ ಎಂದಿಗೂ ಕುಗ್ಗುವುದಿಲ್ಲ, ಸಾಮರಸ್ಯದ ಅಗತ್ಯ ಎಂದಿಗೂ ಮುಗಿಯುವುದಿಲ್ಲ, ಸ್ವಾವಲಂಬನೆಯ ಆಶಯ ಎಂದಿಗೂ ಅಪ್ರಸ್ತುತವಾಗುವುದಿಲ್ಲ ಆದ್ದರಿಂದ ಗಾಂಧೀಜಿಯವರ ಶತಮಾನೋತ್ಸವವನ್ನು ಆಚರಿಸುವುದರ ನಿಜವಾದ ಅರ್ಥ, ಅವರ ಚಿತ್ರಕ್ಕೆ ಮಾಲಾರ್ಪಣೆ ಮಾಡುವುದರಲ್ಲಿ ಮಾತ್ರವಲ್ಲ; ಅವರ ಚಿಂತನೆಗಳನ್ನು ನಮ್ಮ ಬದುಕಿನೊಂದಿಗೆ ಮತ್ತೆ ಸಂವಾದಕ್ಕೆ ತರುವುದರಲ್ಲಿ ಇದೆ.

ಬೆಳಗಾವಿಯಲ್ಲಿ ಆರಂಭವಾದ ಆ ಶತಮಾನದ ಹಿಂದಿನ ನೆನಪು, ಇಂದು "ಗಾಂಧಿ ಭಾರತ"ದ ಮೂಲಕ ಕರ್ನಾಟಕದ ಪ್ರತಿಯೊಂದು ಮನೆಯನ್ನು ತಲುಪುವ ಹೊಸ ಸಂಕಲ್ಪವಾಗಿ ರೂಪುಗೊಳ್ಳುತ್ತಿದೆ. ಗಾಂಧೀಜಿಯವರ ಹೆಜ್ಜೆಗುರುತುಗಳನ್ನು ನೆನಪಿಸಿಕೊಳ್ಳೋಣ; ಅವರ ಮೌಲ್ಯಗಳನ್ನು ಅರ್ಥಮಾಡಿಕೊಳ್ಳೋಣ; ಅವುಗಳನ್ನು ಮುಂದಿನ ಪೀಳಿಗೆಗೆ ತಲುಪಿಸೋಣ.

ಇದೇ ಗಾಂಧಿ ಭಾರತ– ಇತಿಹಾಸದಿಂದ ಭವಿಷ್ಯದತ್ತ ಸಾಗುವ ಕರ್ನಾಟಕದ ಸಂಕಲ್ಪ.

Downloaded From:www.kpscvaani.com



ಎಡಮಿದುಳು – ಬಲಮಿದುಳು

ಎರಡರ ಮೇಲೂ ನಿಯಂತ್ರಣ ಸಾಧಿಸಿದ್ದ ಗಾಂಧಿ

ಅನುವಾದ :
ವೆಂಕಟೇಶ ಪ್ರಸಾದ್ ಬಿ.ಎಸ್.

(ಮೂಲ: ನ್ಯೂರೋಸರ್ಜನ್
ಡಾ. ಎನ್. ಕೆ. ವೆಂಕಟರಮಣ ಅವರ
'ದಿ ಸೀಕ್ರೆಟ್ ಆಫ್ ಬ್ರೈನ್ ವೆಲ್‌ನೆಸ್' ಪುಸ್ತಕದಿಂದ)

ಭಾರತದ ಸ್ವಾತಂತ್ರ್ಯ ಚಳವಳಿ ಮುನ್ನಡೆಸುವಲ್ಲಿ ಮಹಾತ್ಮ ಗಾಂಧೀಜಿಯವರ ಯಶಸ್ಸನ್ನು ವಿಶ್ಲೇಷಿಸಿದಾಗ ನನ್ನ ಮನಸ್ಸಿಗೆ ಎರಡು ಪ್ರಮುಖ ಅಂಶಗಳು ಮುನ್ನೆಲೆಗೆ ಬರುತ್ತವೆ. ಮೊದಲನೆಯದು, ಅವರು ಸೂಕ್ತ ಅಸ್ತ್ರವನ್ನು ಆಯ್ಕೆ ಮಾಡಿಕೊಂಡದ್ದು; ಎರಡನೆಯದು, ಅದನ್ನು ಸೂಕ್ತ ರೀತಿಯಲ್ಲಿ ಬಳಸಲು ಅಗತ್ಯವಾದ ತರಬೇತಿಯನ್ನು ಪಡೆದದ್ದು. ಇವೆರಡಕ್ಕೂ ಬದ್ಧತೆ, ಉತ್ಸಾಹ, ಏಕಾಗ್ರತೆ ಮತ್ತು ದೃಢಸಂಕಲ್ಪಗಳು ಪೂರಕ ಶಕ್ತಿಗಳಾಗಿದ್ದವು. ಸೂಕ್ಷ್ಮವಾಗಿ ಗಮನಿಸಿದರೆ, 'ಬೀಯಿಂಗ್ ರೈಟ್' (ಬಲಮಿದುಳಿನ ಸೂಕ್ತ ಬಳಕೆ) ಅವರ ಯೋಚನಾ ವಿಧಾನವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಆದರೆ, ಅದು ಅವರಿಗೆ ಸುಲಭವಾಗಿ ಅಥವಾ ಆಕಸ್ಮಿಕವಾಗಿ ಬಂದದ್ದಲ್ಲ. ಸತ್ಯದೊಂದಿಗೆ ನಡೆಸಿದ ತಮ್ಮ ಎಲ್ಲ ಪ್ರಯೋಗಗಳಲ್ಲಿಯೂ 'ಸರಿ ದಾರಿಯಲ್ಲಿ' ಇರಲು ಅವರು ಅಪಾರವಾಗಿ ಪರಿಶ್ರಮಿಸಿದ್ದರು.

Downloaded From:www.kpscvaani.com

ಮೊದಲಿಗೆ, ಅವರು ತಮ್ಮ ಬಲಮಿದುಳಿನ ಸಾಮರ್ಥ್ಯವನ್ನು ಬಳಸಿಕೊಂಡು ದೇಶದ ಸಮಗ್ರ ಚಿತ್ರಣವನ್ನು ಅವಲೋಕಿಸಿದರು. ದೇಶವನ್ನು ಬಂಧನದಿಂದ ಮುಕ್ತಗೊಳಿಸಬೇಕೆಂಬ ಸಹಾನುಭೂತಿಯ ದೃಷ್ಟಿಕೋನ ಅವರಲ್ಲಿತ್ತು. ಕರುಣೆ ಮತ್ತು ದೃಢಸಂಕಲ್ಪಗಳೇ ಅವರನ್ನು ಮುನ್ನಡೆಸುತ್ತಿದ್ದ ಶಕ್ತಿಗಳಾಗಿದ್ದವು. ಜೊತೆಗೆ, ತಮ್ಮ ಎಡಮಿದುಳಿನ ಸಾಮರ್ಥ್ಯವನ್ನು ಬಳಸಿಕೊಂಡು ದೇಶದ ವಾಸ್ತವ ಸ್ಥಿತಿಗತಿಗಳನ್ನು ಸ್ವತಃ ಅರಿಯಲು ಅವರು ಪ್ರಯತ್ನಿಸಿದರು. ಗಾಂಧಿ ಇತರರು ನೀಡುವ ಭಾವನಾತ್ಮಕ ಮಾಹಿತಿಗಳಿಂದ ದಿಕ್ಕುತಪ್ಪದೆ, ವೈಯಕ್ತಿಕ ಅನುಭವದ ಆಧಾರದ ಮೇಲೆ ದೇಶದ ಚಿತ್ರಣವನ್ನು ಅರ್ಥಮಾಡಿಕೊಳ್ಳಲು ಮುಂದಾದರು. ಅವರ ಎಡಮಿದುಳು ಮಾಹಿತಿಯನ್ನು ವಿಶ್ಲೇಷಿಸುವ ಕಾರ್ಯವನ್ನು ನಿರ್ವಹಿಸಿತು. ಆದರೆ, ಅದರ ನಿಯಂತ್ರಿತ ಬಳಕೆಯು ಪ್ರತೀಕಾರ ಅಥವಾ ದ್ವೇಷವನ್ನು ಹೆಚ್ಚಿಸುವ ಬದಲು ಅವರಲ್ಲಿದ್ದ ಸಹಾನುಭೂತಿ ಮತ್ತು ಕರುಣೆಯನ್ನು ಇನ್ನಷ್ಟು ಗಟ್ಟಿಗೊಳಿಸಿತು.

ರಾಜ್ಯಗಳು, ಭಾಷೆಗಳು, ಸಂಸ್ಕೃತಿಗಳು ಮತ್ತು ಗಡಿಗಳ ಆಧಾರದ ಮೇಲೆ ದೇಶವನ್ನು ವಿಭಜಿಸಿ ನೋಡುವ ಪ್ರವೃತ್ತಿಗೆ ಅವರು ಆಸ್ಪದ ನೀಡಲಿಲ್ಲ. ಸಾಮಾನ್ಯವಾಗಿ ಎಡಮಿದುಳು ಇಂತಹ ವಿಭಜನೆಗಳನ್ನು ಪ್ರಚೋದಿಸುವ ಸ್ವಭಾವವನ್ನು ಹೊಂದಿರುತ್ತದೆ. ಆದರೆ ಅವರು ತಮ್ಮ ಬಲಮಿದುಳಿನ ಪ್ರಾಬಲ್ಯವನ್ನು ಕಾಯ್ದುಕೊಂಡಿದ್ದರಿಂದಾಗಿ ಅವರಿಗೆ ಇಡೀ ದೇಶವನ್ನು ಅಖಂಡ ದೃಷ್ಟಿಯಲ್ಲಿ ನೋಡಲು ಸಾಧ್ಯವಾಯಿತು.

'ಸ್ವಾಟ್' ವಿಶ್ಲೇಷಣೆ

ಬ್ರಿಟಿಷರ ಬಲವನ್ನು ಅವರು ಶಾಂತಚಿತ್ತದಿಂದ ವಿಶ್ಲೇಷಿಸಿದರು. ಅವರು ತಮ್ಮ ಎಡಮಿದುಳಿನ ಸಾಮರ್ಥ್ಯವನ್ನು ಬಳಸಿ ಇಂದು ನಾವು ನಡೆಸುವ 'ಸ್ವಾಟ್' (SWOT- ಶಕ್ತಿಗಳು, ದೌರ್ಬಲ್ಯಗಳು, ಅವಕಾಶಗಳು, ಭೀತಿಗಳು) ವಿಶ್ಲೇಷಣೆಯ ರೀತಿಯಲ್ಲಿ ಬ್ರಿಟಿಷರ ಸಾಮರ್ಥ್ಯಗಳು ಮತ್ತು ದೌರ್ಬಲ್ಯಗಳನ್ನು ತುಲನೆ ಮಾಡಿದರು. ಬ್ರಿಟಿಷರ ವಿರುದ್ಧ ಹೋರಾಡಲು ಎಷ್ಟು ದೊಡ್ಡ ಸೇನೆಯ ಅಗತ್ಯವಾಗಬಹುದು ಎಂಬುದನ್ನೂ ಅಂದಾಜಿಸಿದರು.

ತಮ್ಮ ಎಡಮಿದುಳಿನ ವಿಶ್ಲೇಷಣಾ ಸಾಮರ್ಥ್ಯವನ್ನು ಸಮರ್ಪಕವಾಗಿ ಬಳಸಿಕೊಂಡ ಗಾಂಧಿ, ಬ್ರಿಟಿಷರಂತಹ ಪ್ರಬಲ ಶಕ್ತಿಯನ್ನು ಯುದ್ಧದ ಮೂಲಕ ಸೋಲಿಸುವುದು ಸಾಧ್ಯವಿಲ್ಲ ಎಂಬ ತೀರ್ಮಾನಕ್ಕೆ ಬಂದರು. ಬಲಮಿದುಳಿನ ಶಾಂತತೆ ಮತ್ತು ಕರುಣೆಯ ಗುಣಗಳು ಹಾಗೂ ಎಡಮಿದುಳಿನ ಗುರಿನಿರ್ದೇಶಿತ ಮತ್ತು ಭವಿಷ್ಯಕೇಂದ್ರಿತ ಚಿಂತನೆಗಳು ಅವರಲ್ಲಿ ಮೇಳೈಸಿದ್ದರಿಂದ ಅವರಿಗೆ 'ಅಹಿಂಸೆ' ಎಂಬ ಹೊಸ ಅಸ್ತ್ರವನ್ನು ರೂಪಿಸಲು ಸಾಧ್ಯವಾಯಿತು. ಹೀಗೆ, ಎದುರಾಳಿಯ ಯಾವುದೇ ಬಲದ ಎದುರು ಬಳಸಬಹುದಾದ ಏಕೈಕ ಶಕ್ತಿಶಾಲಿ ಅಸ್ತ್ರವಾಗಿ ಅಹಿಂಸೆಯನ್ನು ಅವರು ರೂಪಿಸಿದರು. ಗಾಂಧೀಜಿ ಅವರ ಯಶಸ್ಸಿನ ಹಿಂದಿನ ಮಹತ್ವದ ನರವೈಜ್ಞಾನಿಕ ಹಿನ್ನೆಲೆಯ ವಿವರಣೆ ಇದಾಗಿದೆ.

ಆದರೆ, ಆಯ್ಕೆ ಮಾಡಿಕೊಂಡ ಅಸ್ತ್ರವನ್ನು ಸರಿಯಾದ ರೀತಿಯಲ್ಲಿ ಬಳಸುವುದು ಮತ್ತು ಇತರರಿಗೆ ಅದನ್ನು ವ್ಯವಸ್ಥಿತ ರೀತಿಯಲ್ಲಿ ಬಳಸಲು ತರಬೇತಿ ನೀಡುವುದು ದೊಡ್ಡ ಸವಾಲಾಗಿತ್ತು. "ನೀವು ಇತರರಲ್ಲಿ ಯಾವ ಬದಲಾವಣೆಯನ್ನು ಬಯಸುತ್ತೀರೋ ಆ ಬದಲಾವಣೆಯು ಮೊದಲಿಗೆ ನಿಮ್ಮಲ್ಲೇ ಆಗಬೇಕು" ಎಂಬ ಅವರ ತತ್ವವು ಬೇರೆಯವರಿಗೆ ಬೋಧಿಸುವ ಮುನ್ನ ಸ್ವತಃ ತಮ್ಮಲ್ಲಿ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಪ್ರೇರಣೆಯಾಯಿತು.

ಎಡಮಿದುಳು ಯಶಸ್ಸನ್ನು ಆನಂದಿಸುತ್ತದೆ ಮತ್ತು ವ್ಯಕ್ತಿಯಲ್ಲಿ ಅಪಾರ ಆತ್ಮವಿಶ್ವಾಸವನ್ನು ಬೆಳೆಸುತ್ತದೆ. ಗಾಂಧೀಜಿಯವರಲ್ಲಿದ್ದ ಈ ಸಾಮರ್ಥ್ಯವು ಅಹಿಂಸೆಯ ತತ್ವಗಳನ್ನು ಆತ್ಮವಿಶ್ವಾಸದಿಂದ ಬೋಧಿಸಲು ನೆರವಾಯಿತು. ಇದೇ ಸಮಯದಲ್ಲಿ, ಬಲಮಿದುಳಿನಿಂದ ಹೊರಹೊಮ್ಮಿದ ಅಗಾಧ ದೇಶಪ್ರೇಮವು ಜನರನ್ನು ಒಗ್ಗೂಡಿಸಲು ಸಹಕಾರಿಯಾಯಿತು. ಬಲಮಿದುಳಿನ ಏಕಾಗ್ರತೆ ಮತ್ತು ಎಡಮಿದುಳಿನ ಅಭಿವ್ಯಕ್ತಿ ಹಾಗೂ ಸಂವಹನ ಸಾಮರ್ಥ್ಯಗಳು ಸೇರಿ ಮಹಾನ್ ಚಳವಳಿಗೆ ರೂಪ ನೀಡಲು ಅತ್ಯಗತ್ಯವಾದ ಅಗಾಧವಾದ ಶಕ್ತಿಯನ್ನು ನೀಡಿದವು.

ತದನಂತರ ಗಾಂಧಿ ಅವರಿಗೆ ಬ್ರಿಟಿಷರಿಂದ ವಿರೋಧ, ಲೆಕ್ಕವಿಲ್ಲದಷ್ಟು ತೊಂದರೆಗಳು ಮತ್ತು ಅನೇಕ ಬಾರಿ ಸೆರೆವಾಸಗಳು ಎದುರಾದವು. ಸಾಮಾನ್ಯವಾಗಿ, ವ್ಯಕ್ತಿಯು ಯಾವ ತಪ್ಪನ್ನು ಮಾಡದಿದ್ದ ಸನ್ನಿವೇಶದಲ್ಲೂ ಶಿಕ್ಷೆಗೆ ಗುರಿಯಾದಾಗ ಆ ವ್ಯಕ್ತಿಯ ಎಡಮಿದುಳಿನ ಅಹಂಭಾವಕ್ಕೆ ತೀವ್ರವಾದ ಪೆಟ್ಟು ಬೀಳುತ್ತದೆ. ಆದರೆ, ಗಾಂಧೀಜಿಯವರಲ್ಲಿ ಬಲಮಿದುಳು ಅವರಿಗೆ ತಕ್ಷಣವೇ ತಾಳ್ಮೆ ಮತ್ತು ಸಹನಾಶಕ್ತಿಯನ್ನು ಲಭ್ಯವಾಗಿಸಿ, ಕಷ್ಟಗಳಿಂದ ಉಂಟಾಗುವ ಮಾನಸಿಕ ಯಾತನೆಯನ್ನು ಕಡಿಮೆಗೊಳಿಸಿತು. ಉತ್ತಮವಾಗಿ ನಿರ್ವಹಿಸಲ್ಪಟ್ಟ ಅವರ ಎಡಮಿದುಳು ಸೆರೆವಾಸದ ಅವಧಿಯನ್ನೂ ಬರವಣಿಗೆಗೆ ಮತ್ತು ಯೋಜನೆ ರೂಪಿಸುವಂತಹ ರಚನಾತ್ಮಕ ಕಾರ್ಯಗಳಿಗೆ ಬಳಸಿಕೊಳ್ಳಲು ನೆರವಾಯಿತು. ಇದೇ ವೇಳೆ, ಅವರ ಸ್ವಾರ್ಥರಹಿತ ಬಲಮಿದುಳು ಬ್ರಿಟಿಷರು ಒಡ್ಡಿದ ಪ್ರಲೋಭನೆಗಳು ಮತ್ತು ತಂತ್ರಗಳಿಗೆ ಅವರನ್ನು ಮಣಿಯಗೊಡದಂತೆ ಎಚ್ಚರಿಕೆ ವಹಿಸಿತು.

ಸಮತೋಲನದಲ್ಲಿದ್ದ ಅವರ ಎರಡೂ ಮಿದುಳಿನ ಸಾಮರ್ಥ್ಯಗಳು ಒಂದಾಗಿ ಕಾರ್ಯಾಚರಿಸಿ ಅವರಲ್ಲಿ ಗುರಿಯನ್ನು ಇನ್ನಷ್ಟು ಗಟ್ಟಿಗೊಳಿಸಿದವು ಮತ್ತು ಅವರನ್ನು ವರ್ತಮಾನದಲ್ಲಿ ನೆಲೆಗೊಳಿಸಿದವು. ಅವರ ಎಡಮಿದುಳು ತಮಗೆ ಮತ್ತು ಇತರರಿಗೆ ಆದ ಅನೇಕ ಕಹಿ

Downloaded From:www.kpscvaani.com

ಘಟನೆಗಳನ್ನು ನೆನಪಿಸಿ ಪ್ರತೀಕಾರದ ಭಾವನೆಗಳನ್ನು ಕೆರಳಿಸುವ ಸಾಧ್ಯತೆ ಇತ್ತಾದರೂ ಬಲ ಮಿದುಳಿನ ಪ್ರಾಬಲ್ಯವು ಅದಕ್ಕೆ ತಡೆಯೊಡ್ಡಿತು. ಹೀಗಾಗಿ, ಭೂತಕಾಲದ ನೋವುಗಳು, ವರ್ತಮಾನದ ಉದ್ವಿಗ್ನತೆಗಳು ಅಥವಾ ಭವಿಷ್ಯದ ಆತಂಕಗಳಿಂದ ಅವರು ಪ್ರಭಾವಿತರಾಗದೆ ಪ್ರಸ್ತುತದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವತ್ತ ಗಮನ ಹರಿಸಿದರು.

ಸಾಮಾನ್ಯವಾಗಿ, ಜಲಿಯನ್‌ವಾಲಾ ಬಾಗ್‌ನಂತಹ ಸಾಮೂಹಿಕ ಹತ್ಯಾಕಾಂಡವು ಭಾವನಾತ್ಮಕ ಮಿದುಳನ್ನು (ಲಿಂಬಿಕ್ ಬ್ರೈನ್) ತೀವ್ರವಾಗಿ ಪ್ರಚೋದಿಸಿ ಉಳಿದೆಲ್ಲಾ ಚಿಂತನೆಗಳನ್ನು ಹತ್ತಿಕ್ಕಿಬಿಡುವ ಅಪಾಯವಿರುತ್ತದೆ. ಇಂತಹ ಸಂದರ್ಭದಲ್ಲಿ, ಎಡಮಿದುಳು ಇಡೀ ವ್ಯವಸ್ಥೆಯ ವೈಫಲ್ಯವನ್ನು ಎತ್ತಿಹಿಡಿದು, ವೈಯಕ್ತಿಕ ಹಾಗೂ ಸಾಮೂಹಿಕ ನಿರ್ಧಾರಗಳನ್ನು ದೂಷಿಸಿ, ಅಪಾರ ಪ್ರಮಾಣದ ಅಪರಾಧಭಾವ ಮತ್ತು ಆಕ್ರೋಶವನ್ನು ಹುಟ್ಟುಹಾಕುವ ಅಪಾಯವಿರುತ್ತದೆ. ಹೀಗಾಗುವುದು ಹೈಪೋಥ್ಯಾಲಮಸ್ ಅನ್ನು ಉದ್ರೇಕಗೊಳಿಸಿ, ಪಿಟ್ಯುಟರಿ–ಅಡ್ರಿನಲ್ ಅಕ್ಷವನ್ನು ಸಕ್ರಿಯಗೊಳಿಸಿ, ದೇಹದಲ್ಲಿ ಅಡ್ರಿನಲಿನ್ ಪ್ರವಾಹವನ್ನು ಹೆಚ್ಚಿಸಿ, ಮನಸ್ಸನ್ನು ಉದ್ವಿಗ್ನಗೊಳಿಸಿ ಅತಿರೇಕದ ಕ್ರಿಯೆಗಳತ್ತ ದೂಡುವ ಸಾಧ್ಯತೆಯೂ ಇರುತ್ತದೆ.

ವಿವೇಕದ ಸ್ಪಂದನೆ

ಆದರೆ ಇಂದಿಗೂ ಆಶ್ಚರ್ಯ ಹುಟ್ಟಿಸುವ ಸಂಗತಿಯೆಂದರೆ, ಗಾಂಧೀಜಿಯವರಲ್ಲಿ ಬಲಮಿದುಳು ಪ್ರಬಲವಾಗಿದ್ದುದರಿಂದ ಅವರು ಪ್ರತಿಕ್ರಿಯಾತ್ಮಕವಾಗಿ ವರ್ತಿಸಲಿಲ್ಲ; ಬದಲಾಗಿ ವಿವೇಕಪೂರ್ಣವಾಗಿ ಸ್ಪಂದಿಸಿದರು. ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡ ಮತ್ತು ಅದಕ್ಕೆ ಗಾಂಧಿ ಅವರು ತೋರಿದ ಪ್ರತಿಕ್ರಿಯೆಯು ಬ್ರಿಟಿಷರನ್ನು ಮಾನವೀಯತೆ ಇಲ್ಲದವರು ಮತ್ತು ನ್ಯಾಯಪರರಲ್ಲದವರು ಎಂದು ಬಿಂಬಿಸಿದರೆ, ಗಾಂಧೀಜಿಯವರನ್ನು ನೈತಿಕವಾಗಿ ಸರಿ ಎಂಬ ಸ್ಥಾನದಲ್ಲಿ ನಿಲ್ಲಿಸಿ ಅವರನ್ನು ಅಜೇಯ ವ್ಯಕ್ತಿತ್ವದ ವ್ಯಕ್ತಿಯನ್ನಾಗಿ ರೂಪಿಸಿತು.

ಇದರಿಂದಾಗಿ, ಎಲ್ಲ ಪ್ರಕ್ಷುಬ್ಧತೆಗಳ ನಡುವೆಯೂ ಕೇವಲ ಆ ಒಂದು ಘಟನೆಯಿಂದಾಗಿ ಭಾರತಕ್ಕೆ ಅಗತ್ಯವಿದ್ದ ನೈತಿಕ ಬಲ ಮತ್ತು ಜನಬೆಂಬಲ ದೊರಕಲು ಸಾಧ್ಯವಾಯಿತು. ಮತ್ತೊಂದೆಡೆ, ಬ್ರಿಟಿಷ್ ಆಡಳಿತವು ತನ್ನ ಕ್ರಮಗಳನ್ನು ಸಮರ್ಥಿಸಿಕೊಳ್ಳಲಾಗದ ಸ್ಥಿತಿಗೆ ತಲುಪಿ ನೈತಿಕ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿತು. ಈ ಹಿನ್ನೆಲೆಯಲ್ಲಿ, ಗಾಂಧೀಜಿಯವರು "ನಾನು ಸಂಪೂರ್ಣ ನಿಯಂತ್ರಣದಲ್ಲಿದ್ದೇನೆ" ಎಂದು ಹೇಳಿದ್ದು ಸಮಂಜಸವಾಗಿಯೇ ಕಾಣುತ್ತದೆ.

ಎಲ್ಲ ರೀತಿಯ ಪ್ರಚೋದನೆಗಳು, ಅವಮಾನಗಳು ಮತ್ತು ಸಂಕಷ್ಟಗಳ ನಡುವೆಯೂ ಸದಾ ಜಾಗೃತ ಸ್ಥಿತಿಯಲ್ಲಿ ಇರುವುದು, ತಪ್ಪು ಧೋರಣೆಗೆ ಜಾರದೆ ಉಳಿಯುವುದು, ತನ್ನನ್ನು ತಾನು ನಿಯಂತ್ರಿಸಿಕೊಳ್ಳುವುದು, ಮುನ್ನಡೆಯುವುದು ಮತ್ತು ಸ್ಥೈರ್ಯವನ್ನು ಕಾಯ್ದುಕೊಳ್ಳುವುದು ಸುಲಭದ ವಿಷಯವಲ್ಲ. ಇದಕ್ಕೆ ಅಸಾಧಾರಣವಾದ ಆತ್ಮಶಿಸ್ತು ಮತ್ತು ಪರಿಪಕ್ವತೆ ಅಗತ್ಯವಿರುತ್ತದೆ. ಗಾಂಧೀಜಿಯವರು ಆ ಮಟ್ಟದ ಪರಿಪೂರ್ಣತೆಯನ್ನು ಸಾಧಿಸಲು ಹಾಗೂ ಅದೇ ಮಾರ್ಗದಲ್ಲಿ ಅಚಲವಾಗಿ ಸಾಗಲು ವೈಯಕ್ತಿಕ ಮಟ್ಟದಲ್ಲಿ ಅಪಾರ ಪರಿಶ್ರಮವನ್ನು ಹಾಕಿದ್ದರು ಎಂಬುದು ಇದರಿಂದ ಸ್ಪಷ್ಟವಾಗಿ ಮನವರಿಕೆಯಾಗುತ್ತದೆ.

ಇದರ ಫಲವಾಗಿಯೇ ಅವರಿಗೆ ಬ್ರಿಟಿಷರ ಸಾಮೂಹಿಕ ಬಲವನ್ನು ಮೀರಿದ ನಿಜವಾದ ಅಂತರಂಗದ ಶಕ್ತಿ ಸಿದ್ಧಿಸಿತು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಗಾಂಧಿ ಅವರನ್ನು ನಿಜಾರ್ಥದಲ್ಲಿ 'ಮಹಾತ್ಮ'ರನ್ನಾಗಿ ರೂಪಿಸಿದ್ದು ಈ ಅಂಶವೇ ಆಗಿದೆ. ಅದರ ಫಲಶ್ರುತಿಯಾಗಿ ಭಾರತ ದೇಶಕ್ಕೆ ಸ್ವಾತಂತ್ರ್ಯ ದೊರಕಿತು.

ಭಾರತಕ್ಕೆ ಬ್ರಿಟಿಷರಿಂದ ಬಿಡುಗಡೆ ದೊರೆತದೊರೆತ ಸ್ವಾತಂತ್ರ್ಯೋತ್ಸವದ ಸಂಭ್ರಮದಲ್ಲಿ ಅನೇಕರು ಭಾವೋದ್ವೇಗಕ್ಕೆ ಒಳಗಾಗಿ ಸ್ವಯಂ ನಿಯಂತ್ರಣ ಕಳೆದುಕೊಂಡರು. ಆದರೆ, ಗಾಂಧೀಜಿಯವರು ತಮ್ಮ ಅಂತರೊಂದಿಗೆ ತಾವು ಸಂಪೂರ್ಣ ಲೀನವಾಗಿದ್ದರಿಂದಾಗಿ, ಅಂತಿಮ ಕ್ಷಣದಲ್ಲಿಯೂ "ಹೇ ರಾಮ್" ಎಂಬ ಉದ್ಗಾರದ ಮೂಲಕವೇ ಪ್ರತಿಕ್ರಿಯೆ ವ್ಯಕ್ತಪಡಿಸಿದರು. ಅವರ ದೇಹವು ನೆಲಕ್ಕುರುಳುವ ಮುನ್ನ ಅವರಿಂದ ಈ ಉದ್ಗಾರ ಹೊರಹೊಮ್ಮಿತು. ಆ ಕ್ಷಣದಲ್ಲಿ ಅವರ ಬಲಮಿದುಳು ಸಂಪೂರ್ಣ ಶಾಂತಿ, ಸಮರ್ಪಣೆ ಮತ್ತು ಆತ್ಮಜಾಗೃತಿಯ ಸ್ಥಿತಿಯಲ್ಲಿದ್ದರೆ, ಎಡಮಿದುಳು ಸಂಭವಿಸಿದ ಘಟನೆಯ ಆಘಾತವನ್ನು ಸಾಕ್ಷಿಭಾವದಿಂದ ನೋಡುತ್ತಿತ್ತು ಎನ್ನಬಹುದು.

ಇದು ಮನುಷ್ಯನ ಮಿದುಳು ಮತ್ತು ಮನಸ್ಸಿನ ಅಪಾರ ಶಕ್ತಿಗೆ ಸಂಬಂಧಿಸಿದ ಉದಾಹರಣೆಯಾಗಿದೆ. ಈ ಸತ್ಯವನ್ನು ಅರಿತು ನಮ್ಮನ್ನು ನಾವು ಸೂಕ್ತವಾಗಿ ತರಬೇತುಗೊಳಿಸಿಕೊಂಡರೆ ಸಮಾಜವು ಎಷ್ಟು ಸಂತಸಮಯವಾಗಬಹುದು ಮತ್ತು ದೇಶವು ಎಷ್ಟು ಶಕ್ತಿಶಾಲಿಯಾಗಬಹುದು ಎಂಬುದನ್ನು ಊಹಿಸಿಕೊಳ್ಳಬಹುದಾಗಿದೆ.

ನಮ್ಮ ಮಿದುಳು, ಮನಸ್ಸು ಹಾಗೂ ಸಾಮಾಜಿಕ ಮೌಲ್ಯಗಳಲ್ಲಿ ಸಂಭವಿಸುತ್ತಿರುವ ಶಿಥಿಲತೆಯನ್ನು ತಡೆಯಲು ಈ ಕಥನ ಸ್ವಲ್ಪವಾದರೂ ನೆರವಾಗಬಹುದು ಎಂಬುದು ಸಮಾಜದ ಹಿತಬಯಸುವ ಒಬ್ಬ ನ್ಯೂರೋ ಸರ್ಜನ್ ಆಗಿ ನನ್ನ ಆಶಯವಾಗಿದೆ. ಗಾಂಧೀಜಿಯವರು ಮಾಡಿದ ಪ್ರಯತ್ನ ಮತ್ತು ಆತ್ಮಶಿಸ್ತಿನ ಸಾಧನೆಯಲ್ಲಿ ಕಿಂಚಿತ್ತನ್ನಾದರೂ ನಾವು ಅನುಸರಿಸಲು ಪ್ರಯತ್ನಿಸಿದರೆ ಈ ಮಿದುಳಿನ ನರವಿಜ್ಞಾನ ಆಧಾರಿತ ವಿಶ್ಲೇಷಣೆಯ ನನ್ನ ಉದ್ದೇಶವು ಸಾರ್ಥಕವಾಗುತ್ತದೆ ಎಂಬುದು ನನ್ನ ಭಾವನೆಯಾಗಿದೆ.


Downloaded From:www.kpscvaani.com



ಖಾದಿಯ ನೂಲಿನಲ್ಲಿ ಸ್ವಾವಲಂಬನೆಯ ಕನಸು ನೇಯ್ದ ಪುಟ್ಟ ಹಳ್ಳಿ

ಬದನವಾಳು

ಎಂ. ತ್ಯಾಗರಾಜು



ಮಹಾತ್ಮ ಗಾಂಧೀಜಿಯವರ ಬದುಕಿನಲ್ಲಿ ಕರ್ನಾಟಕಕ್ಕೆ ವಿಶಿಷ್ಟ ಸ್ಥಾನವಿದೆ. ಸ್ವಾತಂತ್ರ್ಯ ಹೋರಾಟ, ಅಸ್ಪೃಶ್ಯತೆ ನಿವಾರಣೆ, ಖಾದಿ ಪ್ರಚಾರ ಮತ್ತು ಗ್ರಾಮ ಸ್ವರಾಜ್ಯದ ಸಂದೇಶವನ್ನು ಹೊತ್ತು ಅವರು ಕರ್ನಾಟಕದ ಹಲವು ಪ್ರದೇಶಗಳಲ್ಲಿ ಸಂಚರಿಸಿದ್ದರು. ಅಂತಹ ಗಾಂಧಿ ಸಂಚಾರದ ನೆನಪುಗಳನ್ನು ಇಂದಿಗೂ ತನ್ನ ಒಡಲಲ್ಲಿ ಜೋಪಾನವಾಗಿ ಉಳಿಸಿಕೊಂಡಿರುವ ಪುಟ್ಟ ಊರು ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಬದನವಾಳು.

ದೇಶದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಬದನವಾಳಿನ ಹೆಸರು ದೊಡ್ಡ ಅಕ್ಷರಗಳಲ್ಲಿ ಕಾಣಿಸದೇ ಇರಬಹುದು. ಆದರೆ ಗಾಂಧೀಜಿಯವರ ಸ್ವದೇಶಿ, ಸ್ವಾವಲಂಬನೆ ಮತ್ತು ಗ್ರಾಮೋದ್ಯೋಗದ ಚಿಂತನೆಗಳನ್ನು ಕಾರ್ಯರೂಪಕ್ಕೆ ತಂದ ನೆಲವಾಗಿ ಬದನವಾಳಿಗೆ ವಿಶಿಷ್ಟ ಸ್ಥಾನವಿದೆ.

ಖಾದಿ ಕೇಂದ್ರವಾಗಿ ಅರಳಿದ ಬದನವಾಳು

ಬದನವಾಳಿನ ವಿಶೇಷತೆ ಅಡಗಿರುವುದು ಅಲ್ಲಿನ ಖಾದಿ ಮತ್ತು ಗ್ರಾಮೋದ್ಯೋಗ ಚಟುವಟಿಕೆಯಲ್ಲಿ. 1927ರಲ್ಲಿ ಅಂದಿನ ಮೈಸೂರು

Downloaded From:www.kpscvaani.com



ಸಂಸ್ಥಾನದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಾಲದಲ್ಲಿ ಬದನವಾಳಿನಲ್ಲಿ ಖಾದಿ ಕೇಂದ್ರ ಸ್ಥಾಪನೆಯಾಯಿತು ಎಂಬ ದಾಖಲೆಗಳಿವೆ. ಕೇವಲ ನಾಲ್ವರು ದಲಿತ ಮಹಿಳೆಯರೊಂದಿಗೆ ಆರಂಭವಾದ ಈ ಪ್ರಯತ್ನ, ಸಮಾಜದ ದುರ್ಬಲ ವರ್ಗಗಳ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಉದ್ದೇಶವನ್ನೂ ಹೊಂದಿತ್ತು.

ಚರಕದಲ್ಲಿ ನೂಲು ತೆಗೆಯುವುದು, ಕೈಮಗ್ಗದಲ್ಲಿ ಬಟ್ಟೆ ನೇಯುವುದು ಮೊದಲಾದ ಚಟುವಟಿಕೆಗಳ ಮೂಲಕ ಗ್ರಾಮೀಣ ಜನರಿಗೆ, ವಿಶೇಷವಾಗಿ ಮಹಿಳೆಯರಿಗೆ, ಉದ್ಯೋಗ ದೊರೆಯತೊಡಗಿತು. ಕೆಲವೇ ವರ್ಷಗಳಲ್ಲಿ ಬದನವಾಳಿನ ಖಾದಿ ಕೇಂದ್ರ ಗಮನಾರ್ಹವಾಗಿ ಬೆಳೆಯಿತು.

ಲಭ್ಯವಿರುವ ಐತಿಹಾಸಿಕ ವಿವರಗಳ ಪ್ರಕಾರ, 1932ರ ವೇಳೆಗೆ ಇಲ್ಲಿ ಸುಮಾರು 60 ಮಹಿಳೆಯರು ಮತ್ತು ಒಂಬತ್ತು ಪುರುಷ ನೇಕಾರರು ಕಾರ್ಯನಿರ್ವಹಿಸುತ್ತಿದ್ದರು. ಸುಮಾರು 3,500 ರೂಪಾಯಿಗಳ ಹೂಡಿಕೆಯೊಂದಿಗೆ ಬೆಳೆದ ಕೇಂದ್ರವು ಆಗಲೇ ಸುಮಾರು 50,000 ರೂಪಾಯಿ ಮೌಲ್ಯದ ಖಾದಿ ಉತ್ಪಾದಿಸುವ ಮಟ್ಟ ತಲುಪಿತ್ತು. ಆ ಕಾಲದ ಆರ್ಥಿಕ ಪರಿಸ್ಥಿತಿಯನ್ನು ಗಮನಿಸಿದರೆ ಇದು ಗಮನಾರ್ಹ ಸಾಧನೆ.

ಗಾಂಧೀಜಿಯವರ ಗಮನ ಸೆಳೆದ ಹಳ್ಳಿ

ಬದನವಾಳಿನಲ್ಲಿ ನಡೆಯುತ್ತಿದ್ದ ಈ ಮೌನ ಆರ್ಥಿಕ ಕ್ರಾಂತಿಯ ಸುದ್ದಿ ಮಹಾತ್ಮ ಗಾಂಧೀಜಿಯವರನ್ನೂ ತಲುಪಿತು. 'ಮೈಸೂರು ಗಾಂಧಿ' ಎಂದೇ ಪ್ರಸಿದ್ಧರಾಗಿದ್ದ ಸ್ವಾತಂತ್ರ್ಯ ಹೋರಾಟಗಾರ ತಗಡೂರು ರಾಮಚಂದ್ರರಾಯರು ಬದನವಾಳಿನ ಖಾದಿ ಚಟುವಟಿಕೆಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು. ಅವರ ಒತ್ತಾಸೆಯ ಮೇರೆಗೆ ಗಾಂಧೀಜಿ ಬದನವಾಳಿಗೆ ಭೇಟಿ ನೀಡಿದರು ಎಂಬ ಉಲ್ಲೇಖಗಳಿವೆ.

1932ರಲ್ಲಿ ಗಾಂಧೀಜಿ ಬದನವಾಳಿನ ಸುಮಾರು 7.5 ಎಕರೆ ಪ್ರದೇಶದಲ್ಲಿ ನಡೆಯುತ್ತಿದ್ದ ಖಾದಿ ಕೇಂದ್ರಕ್ಕೆ ಭೇಟಿ ನೀಡಿ, ಅದರ ಬೆಳವಣಿಗೆಯನ್ನು ಕಂಡು ಮೆಚ್ಚುಗೆ ವ್ಯಕ್ತಪಡಿಸಿದ್ದರು ಎಂದು ದಾಖಲಾಗಿದೆ.

ಇನ್ನೂ ಕೆಲವು ವರದಿಗಳು ಗಾಂಧೀಜಿ 1927 ಮತ್ತು 1932ರಲ್ಲಿ ಎರಡು ಬಾರಿ ಬದನವಾಳಿಗೆ ಭೇಟಿ ನೀಡಿದ್ದರು ಎಂದು ದಾಖಲಿಸುತ್ತವೆ. ಹೀಗಾಗಿ ಗಾಂಧೀಜಿಯವರ ಬದನವಾಳಿನ ನಂಟು ಕೇವಲ ಒಂದು ಸಾಂದರ್ಭಿಕ ಭೇಟಿಗೆ ಸೀಮಿತವಾಗಿರದೆ, ಅಲ್ಲಿನ ಖಾದಿ ಮತ್ತು ಗ್ರಾಮೋದ್ಯೋಗ ಪ್ರಯೋಗದೊಂದಿಗೆ ಸಂಬಂಧ ಹೊಂದಿತ್ತು ಎಂಬುದು ಗಮನಾರ್ಹ.

ಖಾದಿ ಎಂದರೆ ಬಟ್ಟೆ ಮಾತ್ರವಲ್ಲ

ಬದನವಾಳಿನ ಮಹತ್ವವನ್ನು ಅರ್ಥಮಾಡಿಕೊಳ್ಳಬೇಕಾದರೆ ಗಾಂಧೀಜಿಯವರ ದೃಷ್ಟಿಯಲ್ಲಿ ಖಾದಿಗೆ ಇದ್ದ ಅರ್ಥವನ್ನು ತಿಳಿಯಬೇಕು.

ಗಾಂಧೀಜಿಯವರಿಗೆ ಖಾದಿ ಕೇವಲ ಧರಿಸುವ ಬಟ್ಟೆಯಾಗಿರಲಿಲ್ಲ. ಅದು ಸ್ವದೇಶಿ, ಸ್ವಾಭಿಮಾನ, ಸ್ವಾವಲಂಬನೆ ಮತ್ತು ಶ್ರಮದ ಗೌರವದ ಸಂಕೇತವಾಗಿತ್ತು.

ಬ್ರಿಟಿಷರ ಕಾರ್ಖಾನೆಗಳಲ್ಲಿ ತಯಾರಾದ ಬಟ್ಟೆ ಭಾರತಕ್ಕೆ ಬಂದು ಮಾರಾಟವಾಗುತ್ತಿದ್ದರೆ, ಭಾರತದ ಹತ್ತಿ ಮತ್ತು ಸಂಪತ್ತು ಹೊರಹೋಗುತ್ತಿತ್ತು. ಇದರ ಪರಿಣಾಮವಾಗಿ ಭಾರತೀಯ ನೇಕಾರರು ಮತ್ತು ಗ್ರಾಮೀಣ ಕುಶಲಕರ್ಮಿಗಳ ಬದುಕು ಸಂಕಷ್ಟಕ್ಕೆ ಸಿಲುಕಿತ್ತು. ಈ ಆರ್ಥಿಕ ವ್ಯವಸ್ಥೆಗೆ ಪರ್ಯಾಯವಾಗಿ ಗಾಂಧೀಜಿ ಚರಕ ಮತ್ತು ಖಾದಿಯನ್ನು ಜನಾಂದೋಲನದ ರೂಪಕ್ಕೆ ತಂದರು.

ಒಂದು ಕುಟುಂಬ ತನ್ನ ಬಿಡುವಿನ ವೇಳೆಯಲ್ಲಿ ನೂಲು ತೆಗೆಯುವುದು, ಮತ್ತೊಂದು ಕುಟುಂಬ ಅದನ್ನು



Downloaded From:www.kpscvaani.com





ನೇಯುವುದು, ಸ್ಥಳೀಯ ಜನರೇ ಆ ಬಟ್ಟೆಯನ್ನು ಖರೀದಿಸುವುದು□ಇದರ ಮೂಲಕ ಹಣ ಹಳ್ಳಿಯ ಆರ್ಥಿಕ ವ್ಯವಸ್ಥೆಯಲ್ಲಿಯೇ ಚಲಿಸುತ್ತದೆ. ಬದನವಾಳಿನಲ್ಲಿ ಗಾಂಧೀಜಿ ಕಂಡದ್ದು ಈ ಚಿಂತನೆಯ ಪ್ರಾಯೋಗಿಕ ರೂಪ.

ನಾಲ್ವರು ಮಹಿಳೆಯರಿಂದ ಆರಂಭವಾದ ಸಾಮಾಜಿಕ ಕ್ರಾಂತಿ

ಬದನವಾಳಿನ ಇತಿಹಾಸದಲ್ಲಿ ಅತ್ಯಂತ ಮಹತ್ವದ ಅಂಶವೆಂದರೆ ಖಾದಿ ಕೇಂದ್ರದ ಆರಂಭದಲ್ಲಿ ದಲಿತ ಮಹಿಳೆಯರ ಭಾಗವಹಿಸುವಿಕೆ. ಸಮಾಜದಲ್ಲಿ ಅಸ್ಪೃಶ್ಯತೆ ಆಳವಾಗಿ ಬೇರೂರಿದ್ದ ಕಾಲಘಟ್ಟದಲ್ಲಿ ಸಮಾಜದ ಅಂಚಿನಲ್ಲಿದ್ದ ಮಹಿಳೆಯರಿಗೆ ಕೆಲಸ ಮತ್ತು ಆರ್ಥಿಕ ಸ್ವಾವಲಂಬನೆ ಕಲ್ಪಿಸುವುದು ಸಾಮಾನ್ಯ ಸಂಗತಿಯಾಗಿರಲಿಲ್ಲ.

ಗಾಂಧೀಜಿಯವರ ದೃಷ್ಟಿಯಲ್ಲಿ ರಾಜಕೀಯ ಸ್ವಾತಂತ್ರ್ಯವಷ್ಟೇ ಸಾಕಾಗಿರಲಿಲ್ಲ. ಸಾಮಾಜಿಕ ಅಸಮಾನತೆ ನಿವಾರಣೆಯಾಗಬೇಕು; ಕಟ್ಟಕಡೆಯ ಮನುಷ್ಯನಿಗೂ ಗೌರವಯುತ ಬದುಕು ಸಿಗಬೇಕು ಎಂಬುದು ಅವರ ಆಶಯವಾಗಿತ್ತು. ಆ ಕಾರಣದಿಂದಲೇ ಬದನವಾಳಿನ ಪ್ರಯೋಗಕ್ಕೆ ವಿಶೇಷ ಅರ್ಥವಿದೆ.

ಚರಕ ಇಲ್ಲಿ ಕೇವಲ ನೂಲನ್ನು ಉತ್ಪಾದಿಸಲಿಲ್ಲ; ಅದು ಆತ್ಮವಿಶ್ವಾಸವನ್ನು ಉತ್ಪಾದಿಸಿತು. ಕೈಮಗ್ಗ ಕೇವಲ ಬಟ್ಟೆಯನ್ನು ನೇಯಲಿಲ್ಲ; ಅದು ಸ್ವಾಭಿಮಾನದ ಬದುಕನ್ನೂ ನೇಯಿತು.

ಮೈಸೂರು ಸಂಸ್ಥಾನದ ಪ್ರಗತಿಪರ ಪರಂಪರೆ

ಬದನವಾಳಿನ ಬೆಳವಣಿಗೆಯನ್ನು ಅಂದಿನ ಮೈಸೂರು ಸಂಸ್ಥಾನದ ಪ್ರಗತಿಪರ ಆಡಳಿತದ ಹಿನ್ನೆಲೆಯಲ್ಲಿಯೂ ನೋಡಬೇಕು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಡಳಿತಾವಧಿ ಶಿಕ್ಷಣ, ಕೈಗಾರಿಕೆ, ನೀರಾವರಿ, ಸಹಕಾರ ಮತ್ತು ಸಾಮಾಜಿಕ ಸುಧಾರಣೆಯ ಹಲವು ಪ್ರಯೋಗಗಳಿಗೆ ಹೆಸರಾಗಿದೆ. ಈ ಕಾಲಘಟ್ಟದಲ್ಲಿಯೇ ಬದನವಾಳಿನ ಖಾದಿ ಕೇಂದ್ರವೂ ರೂಪುಗೊಂಡಿತು. 1927ರಲ್ಲಿ ಕೇಂದ್ರ ಸ್ಥಾಪನೆಯಾದ ಕುರಿತು ದಾಖಲೆಗಳಿದ್ದು, ಅದು ಸ್ವದೇಶಿ ಚಳವಳಿಯ ಆಶಯಗಳೊಂದಿಗೆ ಬೆಸೆದುಕೊಂಡಿತ್ತು.

ಹೀಗಾಗಿ ಬದನವಾಳು ಒಂದು ವಿಶಿಷ್ಟ ಸಂಗಮವನ್ನು ಪ್ರತಿನಿಧಿಸುತ್ತದೆ□ಒಂದು ಕಡೆ, ಗಾಂಧೀಜಿಯವರ ಸ್ವದೇಶಿ ಮತ್ತು ಗ್ರಾಮಸ್ವರಾಜ್ಯದ ಚಿಂತನೆ; ಮತ್ತೊಂದು ಕಡೆ, ಮೈಸೂರು ಸಂಸ್ಥಾನದ ಪ್ರಗತಿಪರ ವಾತಾವರಣ; ಮೂರನೆಯದಾಗಿ, ಸ್ಥಳೀಯ ಜನರ ಶ್ರಮ.

ಕಾಲದ ಹೊಡೆತಕ್ಕೆ ಮಂಕಾದ ವೈಭವ

ಒಂದು ಕಾಲದಲ್ಲಿ ನೂರಾರು ಕುಟುಂಬಗಳ ಬದುಕಿಗೆ ಆಧಾರವಾಗಿದ್ದ ಬದನವಾಳಿನ ಗ್ರಾಮೋದ್ಯೋಗ ಕ್ರಮೇಣ ತನ್ನ ಹಿಂದಿನ ವೈಭವವನ್ನು ಕಳೆದುಕೊಂಡಿತು. ಯಾಂತ್ರೀಕರಣ, ಕೈಮಗ್ಗ ಉತ್ಪನ್ನಗಳಿಗೆ ಎದುರಾದ ಮಾರುಕಟ್ಟೆ ಸ್ಪರ್ಧೆ ಮತ್ತು ಬದಲಾದ ಆರ್ಥಿಕ ಪರಿಸ್ಥಿತಿಗಳು ಗ್ರಾಮೀಣ ಖಾದಿ ಉದ್ಯಮವನ್ನು ದುರ್ಬಲಗೊಳಿಸಿದವು.

ಆದರೆ ಬದನವಾಳಿನ ಗಾಂಧಿವಾದಿ ಪರಂಪರೆಯನ್ನು ಪುನರುಜ್ಜೀವಗೊಳಿಸುವ ಪ್ರಯತ್ನಗಳು ನಿಂತಿಲ್ಲ. 2015ರಲ್ಲಿ ರಂಗಕರ್ಮಿ ಪ್ರಸನ್ನ ಅವರ ನೇತೃತ್ವದಲ್ಲಿ ಬದನವಾಳಿನಲ್ಲಿ ಸುಸ್ಥಿರ ಗ್ರಾಮೀಣ ಆರ್ಥಿಕತೆ ಮತ್ತು ಕೈಮಗ್ಗದ ಉಳಿವಿನ ಕುರಿತು ಚಳವಳಿ ನಡೆಯಿತು. ಗಾಂಧೀಜಿ ಪ್ರತಿಪಾದಿಸಿದ್ದ ಸಾಮಾಜಿಕ-ಆರ್ಥಿಕ ಮಾದರಿಯತ್ತ ಮತ್ತೊಮ್ಮೆ ಗಮನ ಸೆಳೆಯುವುದು ಇದರ ಉದ್ದೇಶವಾಗಿತ್ತು.

ಇಂದಿಗೂ ಬದನವಾಳು ಏಕೆ ಮುಖ್ಯ?

ಇಚೆದು ಭಾರತ ವಿಶ್ವದ ಪ್ರಮುಖ ಆರ್ಥಿಕ ಶಕ್ತಿಗಳಲ್ಲಿ ಒಂದಾಗಿ ಬೆಳೆಯುತ್ತಿದೆ. ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ, ಬೃಹತ್ ಕೈಗಾರಿಕೆ ಮತ್ತು ನಗರೀಕರಣ ನಮ್ಮ ಅಭಿವೃದ್ಧಿಯ ಹೊಸ ಮುಖಗಳಾಗಿವೆ. ಆದರೂ ಗಾಂಧೀಜಿ ಬದನವಾಳಿನಲ್ಲಿ ಕಂಡ ಕನಸು ಅಪ್ರಸ್ತುತವಾಗಿಲ್ಲ. ಹಳ್ಳಿಯಲ್ಲಿಯೇ ಉದ್ಯೋಗ ಸೃಷ್ಟಿಸುವುದು, ಮಹಿಳೆಯರನ್ನು ಆರ್ಥಿಕವಾಗಿ ಸಬಲಗೊಳಿಸುವುದು, ಸ್ಥಳೀಯ ಉತ್ಪನ್ನಗಳಿಗೆ ಮಾರುಕಟ್ಟೆ ಕಲ್ಪಿಸುವುದು, ಸಾಂಪ್ರದಾಯಿಕ ಕೌಶಲಗಳನ್ನು ಉಳಿಸುವುದು ಮತ್ತು ಪರಿಸರ ಸ್ನೇಹಿ ಉತ್ಪಾದನೆಯನ್ನು ಬೆಂಬಲಿಸುವುದು-ಇವೆಲ್ಲವೂ ಇಂದಿನ ಅಭಿವೃದ್ಧಿಯ ಚರ್ಚೆಯಲ್ಲಿಯೂ ಪ್ರಮುಖ ವಿಷಯಗಳಾಗಿವೆ.

ಆದ್ದರಿಂದ ಬದನವಾಳು ಕೇವಲ ಗಾಂಧೀಜಿ ಭೇಟಿ ನೀಡಿದ ಐತಿಹಾಸಿಕ ಸ್ಥಳವಾಗಿ ಉಳಿಯಬಾರದು. ಅದನ್ನು ಗಾಂಧೀಜಿಯವರ ಗ್ರಾಮಸ್ವರಾಜ್ಯ ಮತ್ತು ಸ್ವಾವಲಂಬನೆಯ ಜೀವಂತ ಸ್ಮಾರಕವಾಗಿ ಸಂರಕ್ಷಿಸಬೇಕಾಗಿದೆ. ಗಾಂಧೀಜಿಯವರ ಹೆಜ್ಜೆಗುರುತು ಮೂಡಿದ ಆ ನೆಲದಲ್ಲಿ ಚರಕದ ಸದ್ದು ಇಂದು ಮೊದಲಿನಷ್ಟು ಜೋರಾಗಿ ಕೇಳಿಸದಿರಬಹುದು. ಆದರೆ ಆ ಚರಕ ಸಾರಿದ ಸಂದೇಶ ಮಾತ್ರ ಇಂದಿಗೂ ಸ್ಪಷ್ಟವಾಗಿದೆ- ದೇಶದ ನಿಜವಾದ ಅಭಿವೃದ್ಧಿ ಎಂದರೆ ಕೇವಲ ನಗರಗಳ ಬೆಳವಣಿಗೆಯಲ್ಲ; ಹಳ್ಳಿಯ ಕಟ್ಟಕಡೆಯ ಮನುಷ್ಯನ ಕೈಗೆ ಕೆಲಸ, ಬದುಕಿಗೆ ಆದಾಯ ಮತ್ತು ವ್ಯಕ್ತಿತ್ವಕ್ಕೆ ಗೌರವ ದೊರೆಯುವುದೂ ಅಭಿವೃದ್ಧಿಯೇ. ಅದೇ ಬದನವಾಳು ನಮಗೆ ಹೇಳುವ ಗಾಂಧಿ ಸಂದೇಶ.

Downloaded From:www.kpscvaani.com



ಕರ್ನಾಟಕದ ಮಣ್ಣಿನಲ್ಲಿ ಗಾಂಧೀಜಿಯವರ ಹೆಜ್ಜೆ ಗುರುತು

ಸ್ವಾತಂತ್ರ್ಯ ಸಾಮಾಜಿಕ ಮತ್ತು ಸಮಾನತೆಯ ಪಯಣ

ಮಹೇಶ್ ವಿ. ಮುಡಿಗುಂಡ

ಕರ್ನಾಟಕದಲ್ಲಿ ಗಾಂಧೀಜಿಯವರ ಹೆಜ್ಜೆ ಗುರುತು ಎಂದರೆ ಸ್ವಾತಂತ್ರ್ಯ ಹೋರಾಟದ ಜೊತೆಗೆ ಖಾದಿ, ಗ್ರಾಮೀಣ ಸ್ವಾವಲಂಬನೆ, ಸಾಮಾಜಿಕ ಸಮಾನತೆ ಮತ್ತು ಸಾಮಾಜಿಕ ಪಿಡುಗುಗಳನ್ನು ನಿವಾರಿಸಿ ಸ್ವಾಸ್ಥ್ಯ ಭಾರತವನ್ನು ಜನ ಸಾಮಾನ್ಯರ ಬಳಿ ಕೊಂಡೊಯ್ಯುವುದೇ ಆಗಿದೆ.

ಗಾಂಧೀಜಿ ಮೊದಲ ಬಾರಿಗೆ ಕರ್ನಾಟಕಕ್ಕೆ 1915ರ ಮೇ 8ರಂದು ಬೆಂಗಳೂರಿಗೆ ಭೇಟಿ ನೀಡಿದ್ದರು. ಅನಂತರದ 21 ವರ್ಷಗಳಲ್ಲಿ ಅವರು ಹಲವಾರು ಬಾರಿ ಕರ್ನಾಟಕಕ್ಕೆ ಭೇಟಿ ಕೊಟ್ಟಿದ್ದರು. ಬೆಂಗಳೂರು, ಕೊಡಗು, ಹಾಸನ, ಬೆಳಗಾವಿ, ವಿಜಯಪುರ ಸೇರಿದಂತೆ ಹಲವಾರು ಪ್ರದೇಶಗಳಿಗೆ ಗಾಂಧೀಜಿ ಭೇಟಿ ನೀಡಿದ್ದರು. ಭಾರತಕ್ಕೆ ಸ್ವಾತಂತ್ರ್ಯ ತಂದು ಕೊಡುವುದು ಮಾತ್ರ ಗಾಂಧೀಜಿಯ ಧ್ಯೇಯವಾಗಿರಲಿಲ್ಲ. ಅಸ್ಪೃಶ್ಯತಾ ನಿವಾರಣೆ, ಮಹಿಳಾ ಸಬಲೀಕರಣ, ಖಾದಿ ಗ್ರಾಮೋದ್ಯೋಗ, ಗ್ರಾಮ ಸ್ವರಾಜ್ಯ, ಹಿಂದು–ಮುಸ್ಲಿಂ ಭಾವೈಕ್ಯ ಸೇರಿದಂತೆ ಹಲವಾರು ಸಾಮಾಜಿಕ ಧ್ಯೇಯಗಳನ್ನು ಅವರು ಹೊಂದಿದ್ದರು. ಹೀಗಾಗಿ ಇವುಗಳ ಬಗ್ಗೆ ಜಾಗೃತಿ ಮೂಡಿಸಲು ಅವರು ಇಡೀ ದೇಶವನ್ನು ಸಂಚಾರ ಮಾಡಿದರು.

ಗಾಂಧೀಜಿ ಮೊದಲ ಬಾರಿಗೆ ಮೈಸೂರಿಗೆ ಭೇಟಿ ಕೊಟ್ಟಿದ್ದು 1927ರಲ್ಲಿ. ಅವರನ್ನು ಅಂದು ಲಕ್ಷಾಂತರ ಸ್ವಾತಂತ್ರ್ಯ ಹೋರಾಟಗಾರರು ಪುರಭವನದಲ್ಲಿ ಸ್ವಾಗತ ಮಾಡಿದರು. ಮೊದಲ ಬಾರಿಗೆ ಗಾಂಧೀಜಿ ಇಲ್ಲಿಗೆ ಬಂದಾಗ ಆಗ ತಾನೇ ಸ್ಥಾಪನೆಗೊಂಡಿದ್ದ ಕೃಷ್ಣರಾಜೇಂದ್ರ ಬಟ್ಟೆ ಗಿರಣಿ ಉದ್ಘಾಟಿಸಿದ್ದರು. ಜಗನ್ಮೋಹನ ಅರಮನೆಯಲ್ಲಿ ಮಹಿಳೆಯರನ್ನು ಉದ್ದೇಶಿಸಿ ಮಾತನಾಡಿ, ತದ ನಂತರ ಮೈಸೂರು ಅರಮನೆಯಲ್ಲಿ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಚರಕವನ್ನು ಉಡುಗೊರೆಯಾಗಿ ನೀಡಿದ್ದರು. ಹಿಂದುಳಿದ

Downloaded From:www.kpscvaani.com



ಜನಾಂಗದವರಿಗಾಗಿ ಮಹಾರಾಜರು ಜಾರಿಗೆ ತಂದಿದ್ದ ಹಲವಾರು ಯೋಜನೆಗಳ ಬಗ್ಗೆ ಮುಕ್ತ ಕಂಠದಿಂದ ಪ್ರಶಂಸಿಸಿ ಅವರನ್ನು 'ರಾಜರ್ಷಿ' ಎಂದು ಕರೆದಿದ್ದರು. ಆದಿ ಕರ್ನಾಟಕ ಸಮುದಾಯದವರಿಗಾಗಿ ಸಂಸ್ಥಾನ ಮನೆಗಳನ್ನು ಕಟ್ಟಿಕೊಟ್ಟಿದ್ದ ಪ್ರದೇಶಕ್ಕೆ ಗಾಂಧೀಜಿ ಭೇಟಿ ನೀಡಿದ್ದರು. ಆಗ ದೊಡ್ಡ ಆದಿ ಕರ್ನಾಟಕಪುರ ಎನ್ನಿಸಿಕೊಂಡಿದ್ದ ಪ್ರದೇಶ ಇಂದು 'ಅಶೋಕಪುರಂ' ಆಗಿದೆ. ಚಿಕ್ಕ ಹೊಲಗೇರಿ ಎಂಬ ಸ್ಥಳ 'ಗಾಂಧಿನಗರ' ಆಗಿದೆ. ಅವರ ಭೇಟಿ ಸ್ಮರಣಾರ್ಥ ಎರಡೂ ನಗರಗಳಲ್ಲಿ ಇಂದು ಗಾಂಧಿ ಪ್ರತಿಮೆಯನ್ನು ಪ್ರತಿಷ್ಠಾಪಿಸಲಾಗಿದೆ. ಆಗಮನದ ನೆನಪಿಗೆ ಗಾಂಧಿ ಚೌಕ ಎಂಬ ಸತ್ಯಾಗ್ರಹ ವೇದಿಕೆಯನ್ನೂ ನಿರ್ಮಾಣ ಮಾಡಲಾಗಿದೆ. 1934ರಲ್ಲಿ ಮತ್ತೊಮ್ಮೆ ಗಾಂಧೀಜಿ ಮೈಸೂರಿಗೆ ಬಂದಿದ್ದರು. ಎರಡು ಬಾರಿ ಭೇಟಿ ನೀಡಿದಾಗಲೂ ಅವರು ಶೇಷಾದ್ರಿ ಅಯ್ಯರ್ ರಸ್ತೆಯ ಶೇಷಾದ್ರಿ ಹೌಸ್ ನಲ್ಲಿ ತಂಗಿದ್ದರು ಎಂಬುದು ಮತ್ತೊಂದು ವಿಶೇಷ. ಅವತ್ತಿನ ಶೇಷಾದ್ರಿ ಹೌಸ್ ಇಂದು ವಾಣಿಜ್ಯ ತೆರಿಗೆ ಇಲಾಖೆ ಕಚೇರಿಯಾಗಿದೆ.

ಮೈಸೂರು ವಿಶ್ವವಿದ್ಯಾನಿಲಯವೂ ಗಾಂಧಿ ಸ್ಮರಣೆಯಲ್ಲಿ ಗುರುತಿಸಿಕೊಂಡಿದೆ. ಮಾನಸಗಂಗೋತ್ರಿ ಆವರಣದಲ್ಲಿ ಸಬರಿಮತಿ ಆಶ್ರಮದ ಮಾದರಿಯ ಕಟ್ಟಡವೊಂದನ್ನು ನಿರ್ಮಿಸಲಾಗಿದೆ. ಅಲ್ಲಿ ಗಾಂಧಿ ಜೀವನ ಕುರಿತಾದ ಹಲವಾರು ಕಪ್ಪು–ಬಿಳುಪು ಚಿತ್ರಗಳನ್ನು ಪ್ರದರ್ಶಿಸಲಾಗುತ್ತಿದೆ. ಮತ್ತೊಂದು ಕುತೂಹಲದ ಸಂಗತಿಯೆಂದರೆ ಅಂದು ಮೈಸೂರು ಸಂಸ್ಥಾನದ ಭೇಟಿಯಲ್ಲಿ ಗಾಂಧೀಜಿ ಬಳಸಿದ್ದರೆನ್ನಲಾದ ಮೈಸೂರು ಸ್ಯಾಂಡಲ್ ಸೋಪ್ ಅನ್ನು ಮಾನಸಗಂಗೋತ್ರಿ ಆವರಣದಲ್ಲಿರುವ ಜಾನಪದ ವಸ್ತುಸಂಗ್ರಹಾಲಯದಲ್ಲಿ ಇಡಲಾಗಿದೆ.

ನಂಜನಗೂಡಿಗೆ ಮಹಾತ್ಮನ ಭೇಟಿ

ಅಚಿದು ಮೈಸೂರಿನ ಗಾಂಧಿ ಎಂದೇ ಪ್ರಖ್ಯಾತರಾಗಿದ್ದ ತಗಡೂರು ರಾಮಚಂದ್ರರಾವ್ ಅವರ ಕರೆಗೆ ಓಗೊಟ್ಟು ಗಾಂಧೀಜಿ ನಂಜನಗೂಡಿಗೆ ಭೇಟಿ ನೀಡಿದ್ದರು. ನಂಜನಗೂಡಿನಲ್ಲಿ ಹರಿಜನ ಉದ್ಧಾರದ ಬಗ್ಗೆ ಸಾರ್ವಜನಿಕ ಸಭೆಯಲ್ಲಿ ಅವರು ಮಾತನಾಡಿದ್ದರು. ನಂಜನಗೂಡು ಪಟ್ಟಣದಿಂದ 10 ಕಿ.ಮಿ ದೂರದಲ್ಲಿರುವ ಚಾಮರಾಜನಗರ ರಸ್ತೆಯಲ್ಲಿ ಬರುವ ಬದನವಾಳು ಗ್ರಾಮಕ್ಕೂ ಗಾಂಧೀಜಿ 2 ಬಾರಿ ಭೇಟಿ ಕೊಟ್ಟಿದ್ದರು.

ತಗಡೂರಿನಲ್ಲಿ ತಂಗಿದ್ದ ಗಾಂಧೀಜಿ

ತಗಡೂರು ಹಳ್ಳಿಗೆ ಗಾಂಧಿ ಅವರು ಭೇಟಿ ನೀಡಿದ್ದರು. ಇದು ತಗಡೂರು ರಾಮಚಂದ್ರರಾವ್ ಅವರು ಹುಟ್ಟೂರು. ಗಾಂಧೀಜಿ ಅವರು 1934ರಲ್ಲಿ ಫ್ಲೇಗ್ ಪೀಡಿತವಾಗಿದ್ದ ಸಂಧರ್ಭದಲ್ಲಿ ಈ ಗ್ರಾಮಕ್ಕೆ ಭೇಟಿ ನೀಡಿದ್ದರು. ಆಗ ಇಲ್ಲಿನ ಸತ್ಯಾಗ್ರಹ ಆಶ್ರಮದಲ್ಲಿ ತಂಗಿದ್ದರು. ತಗಡೂರಿನ ಆಶ್ರಮದಲ್ಲಿ ಅಂದಿನ ಖಾದಿ ಗ್ರಾಮೋದ್ಯೋಗ ಗತವೈಭವವನನ್ನು ನೆನಪಿಸುವ ಯಂತ್ರಗಳು, ಚರಕಗಳ ಪಳೆಯುಳಿಕೆಗಳನ್ನು ಕಾಣಬಹುದಾಗಿದೆ.

ಗಾಂಧಿ ಭೇಟಿ ನೀಡಿದ ಸ್ಮರಣಾರ್ಥವಾಗಿ ಆಶ್ರಮದ ಸಭಾಂಗಣದಲ್ಲಿ ಗಾಂಧಿ ಪುತ್ಥಳಿಯೊಂದನ್ನು ಪ್ರತಿಷ್ಠಾಪಿಸಲಾಗಿದೆ. ಸದ್ಯ ಇಲ್ಲಿ 50ಕ್ಕೂ ಹೆಚ್ಚು ಮಹಿಳೆಯರು ಖಾದಿ ಉತ್ಪಾದನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಕರ್ನಾಟಕ ಸರ್ವೋದಯ ಸಂಘದ ಸುಪರ್ದಿಯಲ್ಲಿರುವ ಈ ಆಶ್ರಮದಲ್ಲಿಯೇ ಮೊದಲು ಮಹಿಳೆಯರು ಖಾದಿ ನೇಯುತ್ತಿದ್ದರು. ಈಗ ಸಮೀಪದಲ್ಲಿಯೇ ಹೊಸ ಕಟ್ಟಡವೊಂದನ್ನು ನಿರ್ಮಿಸಲಾಗಿದ್ದು, ಖಾದಿ ಉತ್ಪಾದನೆ ಮುಂದುವರೆದಿದೆ. ಗಾಂಧೀಜಿ ಭೇಟಿಯಿಂದ ಪ್ರಭಾವಿತವಾಗಿರುವ ನಂಜನಗೂಡಿನ ಜನತೆ ಸಮೀಪದ ಹಳ್ಳಿಯೊಂದಕ್ಕೆ 'ಗಾಂಧಿ ಗ್ರಾಮ' ಎಂಬ ಹೆಸರನ್ನಿಟ್ಟಿರುವುದು ವಿಶೇಷ. ಇನ್ನಾದರೂ ಸರ್ಕಾರ ಗಾಂಧೀಜಿ ಭೇಟಿ ನೀಡಿರುವ ಈ ಸ್ಥಳಗಳನ್ನು ಅಭಿವೃದ್ಧಿಪಡಿಸಿ ಪ್ರವಾಸಿ ತಾಣಗಳನ್ನಾಗಿ ಪರಿವರ್ತಿಸಬೇಕು. ಮುಂದಿನ ಪೀಳಿಗೆಗೆ ಗಾಂಧೀಜಿಯ ಆದರ್ಶಗಳನ್ನು ನೆನಪಿಸಿಕೊಡುವ ಕೆಲಸವಾಗಬೇಕು.

Downloaded From:www.kpscvaani.com

ಮೂರು ಶತಮಾನಗಳ ಇತಿಹಾಸದ

ಸಾಣಿಕಟ್ಟಾ ಕಂದು ಉಪ್ಪು

ಬಿ.ಶಿವಕುಮಾರ್



ಉತ್ತರ ಕನ್ನಡ ಜಿಲ್ಲೆಯ ಕುಮಟಾ ಸಮೀಪದ ಸಾಣಿಕಟ್ಟಾದಲ್ಲಿನ ಸವಳು ಭೂಮಿಯಲ್ಲಿ ಭತ್ತವಾಗಲಿ ಅಥವಾ ಅಡಿಕೆಯಾಗಲಿ ಬೆಳೆಯುವುದಿಲ್ಲ. ಬದಲಿಗೆ, ಇಲ್ಲಿ ನೈಸರ್ಗಿಕವಾಗಿ ಉಪ್ಪು ತಯಾರಾಗುತ್ತದೆ. ಪಶ್ಚಿಮಘಟ್ಟಗಳಿಂದ ಹರಿದುಬರುವ ಅಘನಾಶಿನಿ ನದಿಯು ತನ್ನ ದಾರಿಯಲ್ಲಿ ಅನೇಕ ಔಷಧೀಯ ಸಸ್ಯಗಳ ಸಾರವನ್ನು ಹೊತ್ತು ತರುತ್ತದೆ. ಅದೇ ನೀರನ್ನು ಬಳಸಿಕೊಂಡು ಸಾಣಿಕಟ್ಟಾದಲ್ಲಿ ವಿಶಿಷ್ಟ ಕಂದು ಬಣ್ಣದ ಉಪ್ಪನ್ನು ತಯಾರಿಸಲಾಗುತ್ತದೆ.

ಈ ಉದ್ಯಮಕ್ಕೆ ಮುನ್ನೂರು ವರ್ಷಗಳಿಗೂ ಹೆಚ್ಚಿನ ಸುದೀರ್ಘ ಇತಿಹಾಸವಿದೆ. ಕ್ರಿ.ಶ. 1720ರಲ್ಲೇ ಇಲ್ಲಿ ಉಪ್ಪು ಉತ್ಪಾದನೆ ಆರಂಭಗೊಂಡಿತ್ತು ಎಂದು ಸ್ಥಳೀಯ ದಾಖಲೆಗಳು ಹಾಗೂ ಅಧ್ಯಯನಗಳು ಸೂಚಿಸುತ್ತವೆ. ಅಘನಾಶಿನಿ ಹಿನ್ನೀರಿಗೆ ತೊರ್ಕೆ, ಗೋಕರ್ಣದ ಗುಡ್ಡಗಳ ನಡುವೆ ಒಡ್ಡು ನಿರ್ಮಾಣವಾದ ಬಳಿಕ ಈ ಪ್ರದೇಶಕ್ಕೆ ಸಾಣಿಕಟ್ಟಾ ಎಂದು ಹೆಸರು ಬಂದಿದೆ. ಆರಂಭದಲ್ಲಿ ಕೇವಲ 50 ಎಕರೆ ಪ್ರದೇಶದಲ್ಲಿದ್ದ ಈ ಕಸುಬು, ಕಾಲಕ್ರಮೇಣ 400–450 ಎಕರೆಗಳಿಗೆ ವಿಸ್ತರಿಸಿತು. ನೂರಾರು ಕುಟುಂಬಗಳು ತಮ್ಮ ಗದ್ದೆಗಳಲ್ಲಿ ಸ್ವತಂತ್ರವಾಗಿ ಉಪ್ಪು ತಯಾರಿಕೆಯಲ್ಲಿ ನಿರತವಾದವು. ಒಂದು ಕಾಲದಲ್ಲಿ ಇಲ್ಲಿ ಸಾಂಪ್ರದಾಯಿಕವಾಗಿ ತೆಗೆಯಲ್ಪಡುತ್ತಿದ್ದ ಉಪ್ಪು ಈಗ ವೈಜ್ಞಾನಿಕ ವಿಧಾನದೊಂದಿಗೆ ಸಿದ್ಧಗೊಳ್ಳುತ್ತಿದೆ.

ಐತಿಹಾಸಿಕವಾಗಿ, ಈ ಪ್ರದೇಶವು ಬೈಂದೂರು ಅರಸರ ಅಧೀನದಲ್ಲಿದ್ದು, ನಂತರ ಹೈದರಾಲಿ ಹಾಗೂ ಟಿಪ್ಪು ಸುಲ್ತಾನ್ ಆಳ್ವಿಕೆಗೆ ಒಳಪಟ್ಟಿತ್ತು. ಟಿಪ್ಪು ಕಾಲದಲ್ಲೇ ಉಪ್ಪಿನ ಮೇಲೆ ತೆರಿಗೆ ವಿಧಿಸಲಾಗಿತ್ತು. ಬ್ರಿಟಿಷರ ಆಳ್ವಿಕೆಯಲ್ಲಿ ಈ ತೆರಿಗೆ ಮತ್ತಷ್ಟು ಹೆಚ್ಚಾದಾಗ, 1930ರಲ್ಲಿ ಮಹಾತ್ಮ ಗಾಂಧೀಜಿಯವರ

Downloaded From:www.kpscvaani.com



ಉಪ್ಪಿನ ಸತ್ಯಾಗ್ರಹದಿಂದ ಪ್ರೇರಿತವಾಗಿ ಇಲ್ಲೂ ಹೋರಾಟಗಳು ನಡೆದವು. ಇದರ ಪರಿಣಾಮವಾಗಿಯೇ ಪಕ್ಕದ ಅಂಕೋಲಾ ತಾಲೂಕು 'ಕರ್ನಾಟಕದ ಬಾರ್ಡೋಲಿ' ಎಂದು ಪ್ರಸಿದ್ದಿಗೆ ಬಂದಿತು.

ಇಲ್ಲಿ ಉಪ್ಪು ತಯಾರಿಸುವ ವಿಧಾನ ಸಂಪೂರ್ಣ ನೈಸರ್ಗಿಕವಾಗಿದೆ. ಅರಬ್ಬೀ ಸಮುದ್ರ ಮಿಶ್ರಿತ ಅಘನಾಶಿನಿ ನದಿಯ ನೀರು ಮತ್ತು ಶಾಖ ಇವೆರಡನ್ನೇ ಬಳಸಿಕೊಂಡು ಉಪ್ಪು ಸಿದ್ದಗೊಳ್ಳುತ್ತದೆ. ನೀರು ಮತ್ತು ಶಾಖ ಇವೇ ಇಲ್ಲಿ ಕಚ್ಚಾವಸ್ತುಗಳು. ಉತ್ಪಾದನೆಯ ಯಾವ ಹಂತದಲ್ಲೂ ಯಂತ್ರಗಳ ಬಳಕೆ ಆಗುವುದಿಲ್ಲ. ಸಿದ್ದಗೊಂಡ ಉಪ್ಪನ್ನು ಸಾಗಿಸುವ ವಾಹನಗಳಷ್ಟೇ ಇಡೀ ಉತ್ಪಾದನೆ ಪ್ರಕ್ರಿಯೆಯಲ್ಲಿ ಬಳಕೆ ಆಗುವ ಯಂತ್ರಗಳು. ಅಘನಾಶಿನಿ ಅಳಿವೆಯ ಕಾಲುವೆಗೆ ಅಳವಡಿಸಿದ ಕಬ್ಬಿಣದ ಗೇಟುಗಳನ್ನು ಸಮುದ್ರ ಉಬ್ಬರದ ಸಮಯದಲ್ಲಿ ತೆರೆದು ಉಪ್ಪಿನ ಆಗರದ ಪಕ್ಕದಲ್ಲಿನ ಕಿರು ಜಲಾಶಯಕ್ಕೆ ನೀರು ಹರಿಸಿಕೊಂಡು, ನೀರಿನಲ್ಲಿ ಉಪ್ಪಿನ ಅಂಶದ ಸಾಂದ್ರತೆ ನಿರ್ದಿಷ್ಟ ಮಟ್ಟ ತಲುಪುತ್ತಿದ್ದಂತೆ ಉಪ್ಪಿನ ಆಗರದ ಸಮೀಪದ ಬಫರ್ ಪ್ರದೇಶಗಳಿಗೆ ನೀರು ಹರಿಸಲಾಗುತ್ತದೆ. ಸೂರ್ಯನ ಬಿಸಿಲಿಗೆ ನೀರು ನಿಧಾನವಾಗಿ ಆವಿಯಾಗುತ್ತಾ, ಕೊನೆಗೆ ಉಪ್ಪಿನ ಅಂಶ ಮಾತ್ರ ಉಳಿಯುತ್ತದೆ. ಸುಮಾರು 25 ದಿನಗಳ ನಂತರ ಉಪ್ಪು ಕಾಣಿಸಿಕೊಳ್ಳಲು ಪ್ರಾರಂಭವಾಗುತ್ತದೆ. ಬಳಿಕ ಅದನ್ನು ಕೈಯಿಂದ ಸಂಗ್ರಹಿಸಿ, ಅಗತ್ಯ ಪ್ರಮಾಣದಲ್ಲಿ ಅಯೋಡಿನ್ ಸೇರಿಸಿ ಪ್ಯಾಕ್ ಮಾಡಲಾಗುತ್ತದೆ.

ಈ ಪ್ರಕ್ರಿಯೆಯು ವಾತಾವರಣ ಮತ್ತು ಹವಾಮಾನದ ಮೇಲೆ ಸಂಪೂರ್ಣ ಅವಲಂಬಿತವಾಗಿದೆ. ಫೆಬ್ರವರಿಯಿಂದ ಮೇ ತಿಂಗಳ ವರೆಗೆ ಸುಮಾರು 100 ದಿನಗಳು ಉಪ್ಪಿನ ಸೀಸನ್ ಆಗಿರುತ್ತದೆ. ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಅತ್ಯಧಿಕ ಉತ್ಪಾದನೆಯಾಗುತ್ತದೆ. ಅಂದಂತೆ, ಈ ಉಪ್ಪಿನ ಉದ್ಯಮದ ಹಿಂದೆ ನಿಂತಿರುವುದು 'ಆಗೇರ' ಸಮುದಾಯ; ತಲೆಮಾರುಗಳಿಂದ ಈ ಕಸುಬನ್ನು ಮುಂದುವರಿಸಿಕೊಂಡು ಬಂದಿರುವ ಈ ಸಮುದಾಯದವರು, ಗದ್ದೆ ತಯಾರಿಕೆಯಿಂದ ಹಿಡಿದು ಉಪ್ಪು ಸಂಗ್ರಹಿಸುವವರೆಗೂ ಎಲ್ಲಾ ಹಂತಗಳಲ್ಲಿ ಪರಿಣತಿ ಹೊಂದಿದ್ದಾರೆ.

ಸಾಣಿಕಟ್ಟಾ ಉಪ್ಪು ತನ್ನದೇ ಆದ ವಿಶಿಷ್ಟ ರುಚಿ ಮತ್ತು ಗುಣವನ್ನು ಹೊಂದಿದೆ. ಅಘನಾಶಿನಿ ನದಿಯು ಪಶ್ಚಿಮಘಟ್ಟದ ಔಷಧೀಯ ಸಸ್ಯಗಳ ನಡುವೆ ಹರಿಯುವುದರಿಂದ, ಅದರ ನೀರಿನಲ್ಲಿ ಖನಿಜಾಂಶಗಳಿರುತ್ತವೆ ಎಂಬುದು ಸ್ಥಳೀಯರ ನಂಬಿಕೆ. ಉಪ್ಪಿನಕಾಯಿ, ಒಣಮೀನು ತಯಾರಿಕೆ ಮತ್ತು ಅಡುಗೆಯಲ್ಲಿ ಇದನ್ನು ಹೆಚ್ಚಾಗಿ ಬಳಸಲಾಗುತ್ತದೆ. ಆಯುಷ್ ಚಿಕಿತ್ಸೆಯಲ್ಲಿ, ವಿಶೇಷವಾಗಿ ಸೂರ್ಯಸ್ನಾನ ಮತ್ತು ನೈಸರ್ಗಿಕ ಚಿಕಿತ್ಸಾ ವಿಧಾನಗಳಲ್ಲಿಯೂ ಇದರ ಬಳಕೆ ಕಂಡುಬರುತ್ತದೆ.

ಇಲ್ಲಿ ಈ ಮೂರುವರೆ ತಿಂಗಳಲ್ಲಿ ತಯಾರಾಗಲಿದ್ದು, ಸರಾಸರಿ 10 ಸಾವಿರದಿಂದ 12 ಸಾವಿರ ಟನ್ ಉಪ್ಪು ಉತ್ಪಾದನೆ ನಡೆಯುತ್ತದೆ. ಈ ಉಪ್ಪು ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲದೆ ಪಕ್ಕದ ಗೋವಾ ರಾಜ್ಯಕ್ಕೂ ಸರಬರಾಜಾಗುತ್ತದೆ. ಉತ್ಪಾದನಾ ವೆಚ್ಚ ಹಾಗೂ ಬೇಡಿಕೆಯ ಪರಿಣಾಮವಾಗಿ ಪ್ರಸ್ತುತ ಮಾರುಕಟ್ಟೆಯಲ್ಲಿ ಕಿ.ಲೋ.ಗೆ 35ರಿಂದ 50 ರವರೆಗೆ ಮಾರಾಟವಾಗುತ್ತಿದೆ.

ಈ ಹಿಂದೆ ಉದ್ಯೋಗಕ್ಕಾಗಿ ಹೊರ ಊರುಗಳಿಗೆ ಇಲ್ಲಿನ ಜನರ ವಲಸೆ ಹೆಚ್ಚಾದಂತೆ ಈ ಉದ್ಯಮ ಕುಸಿಯುವ ಹಂತ ತಲುಪಿತ್ತು. ಈ ಸಂದರ್ಭದಲ್ಲಿ, 'ನಾಗರಬೈಲ್ ಉಪ್ಪಿನ ಸಹಕಾರಿ ಸಂಘ' ಸ್ಥಾಪನೆಯಾಗಿ ಉಪ್ಪು ಉತ್ಪಾದನೆಗೆ ಹೊಸ ಜೀವ ನೀಡಿತು. ಸಹಕಾರಿ ಪದ್ಧತಿಯಲ್ಲಿ ಎಲ್ಲಾ ಗದ್ದೆಗಳನ್ನು ಒಟ್ಟುಗೂಡಿಸಿ, ಉತ್ಪಾದನೆ, ಸಂಗ್ರಹ ಮತ್ತು ಮಾರಾಟವನ್ನು ವ್ಯವಸ್ಥಿತಗೊಳಿಸಲಾಯಿತು. ಇಂದಿಗೂ ಈ ಸಂಘವು ಸಾಣಿಕಟ್ಟಾ ಉಪ್ಪಿನ ಬೆನ್ನೆಲುಬಾಗಿ ಕಾರ್ಯನಿರ್ವಹಿಸುತ್ತಿದೆ.

ಸಹಕಾರ ಸಂಘವು ರೈತರಿಂದ ಪಡೆದ ಭೂಮಿಯಲ್ಲಿ ಉಪ್ಪು ಉತ್ಪಾದಿಸಿ, ಅದರಿಂದ ಬಂದ ಲಾಭಾಂಶವನ್ನು ಸಮನಾಗಿ ಹಂಚಿಕೆ ಮಾಡುವ ಬೈಲಾ ಹೊಂದಿರುವ ದೇಶದ ಅಪರೂಪದ ಸಹಕಾರ ಸಂಸ್ಥೆ ಇದಾಗಿದೆ. ಇಲ್ಲಿ ಒಮ್ಮೆ ಸದಸ್ಯತ್ವ ಪಡೆದವರು ಶಾಶ್ವತ ಸದಸ್ಯರಾಗಿರುತ್ತಾರೆ. ಪ್ರಸ್ತುತ ಇರುವ ಸದಸ್ಯರ ಸಂಖ್ಯೆ 359 ಆಗಿದೆ. ಭೂಮಿಯನ್ನು ಶಾಶ್ವತವಾಗಿ ಸಹಕಾರ ಸಂಘದ ಹೆಸರಿಗೆ ನೀಡಲಾಗಿದ್ದು, ಪಹಣಿಯು ಭೂಮಾಲೀಕರ ಹೆಸರಿನಲ್ಲಿದ್ದರೂ ಅದರ ಬಳಕೆಯನ್ನು ಸಂಸ್ಥೆಯೇ ನಿರ್ವಹಿಸುತ್ತಿದೆ.

ಇಂದಿಗೂ ಸಾಣಿಕಟ್ಟಾದಲ್ಲಿ ನೂರಾರು ಕುಟುಂಬಗಳು ಉಪ್ಪು ತಯಾರಿಕೆ ಮೇಲೆ ಅವಲಂಬಿತವಾಗಿವೆ. ನೈಸರ್ಗಿಕ ವಿಧಾನ, ಪಾರಂಪರಿಕ ಜ್ಞಾನ ಮತ್ತು ಸಹಕಾರಿ ವ್ಯವಸ್ಥೆಯ ಸಂಗಮವು ಈ ಉದ್ಯಮವನ್ನು ಇಂದಿಗೂ ಜೀವಂತವಾಗಿರಿಸಿದೆ. ಈ ವಿಶಿಷ್ಟ ಉಪ್ಪಿಗೆ ಭೌಗೋಳಿಕ ಸೂಚ್ಯಂಕ (ಜಿ.ಐ.ಟ್ಯಾಗ್) ಪಡೆಯಲು ಪ್ರಯತ್ನಗಳು ಸಾಗಿವೆ. ಸಾಣಿಕಟ್ಟಾದ ಉಪ್ಪು ಕೇವಲ ಅಡುಗೆ ಮನೆಯ ಒಂದು ಪದಾರ್ಥವಾಗಿರದೇ, ಪಶ್ಚಿಮಘಟ್ಟದ ನೈಸರ್ಗಿಕ ಸೊಗಡು, ತಲೆಮಾರಿನ ಶ್ರಮ ಹಾಗೂ ಸ್ಥಳೀಯ ಸಂಸ್ಕೃತಿಯ ಜೀವಂತ ಕುರುಹಾಗಿದೆ. ■

Downloaded From:www.kpscvaani.com



ಮಾಜಿ ಮುಖ್ಯಮಂತ್ರಿ ದಿ.ರಾಮಕೃಷ್ಣ ಹೆಗಡೆ ಜನ್ಮಶತಮಾನೋತ್ಸವ ವರ್ಷಾಚರಣೆ

ಮೌಲ್ಯಾಧಾರಿತ ರಾಜಕಾರಣದ ಮೇರು ನಾಯಕ



ವೀರನಾರಾಯಣ

ರಾಜ್ಯದ ಮಾಜಿ ಮುಖ್ಯಮಂತ್ರಿ ದಿ.ರಾಮಕೃಷ್ಣ ಹೆಗಡೆಯವರ ಜನ್ಮಶತಮಾನೋತ್ಸವ ವರ್ಷವನ್ನು ಅರ್ಥಪೂರ್ಣವಾಗಿ ಆಚರಿಸಲು ಸರ್ಕಾರವು ಒಂದು ವರ್ಷದ ಅವಧಿಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ನಡೆಸಲಿದೆ. ಹೆಗಡೆಯವರು ಅನುಸರಿಸಿದ ತತ್ವಗಳು, ನಾಯಕತ್ವ, ಮುತ್ಸದ್ದಿತನ, ಸವಾಲುಗಳು ಎದುರಾದಾಗ ರಚನಾತ್ಮಕ ಪರಿಹಾರ ಕಂಡುಕೊಳ್ಳಲು ಅವರ ಮಾಡುತ್ತಿದ್ದ ಪ್ರಯತ್ನ, ರಾಜನೈತಿಕ ಕಾರ್ಯತಂತ್ರಗಳು ಇತ್ಯಾದಿಗಳಿಂದ ಪ್ರೇರಣೆ ಪಡೆಯುವುದು ಅವರಿಗೆ ಸಲ್ಲಿಸುವ ನಿಜವಾದ ಶ್ರದ್ಧಾಂಜಲಿಯಾಗುತ್ತದೆ.

ರಾಮಕೃಷ್ಣ ಹೆಗಡೆಯವರ ಜನ್ಮಶತಮಾನೋತ್ಸವದ ನಿಮಿತ್ತ ಕಳೆದ ಆಗಸ್ಟ್ 29ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ ನಲ್ಲಿ ನಡೆದ ಕಾರ್ಯಕ್ರಮವನ್ನು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ಉದ್ಘಾಟಿಸಿದರು. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತಿತರರು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಗಣ್ಯರು, ಹೆಗಡೆ ಅವರು ತಮ್ಮ ವ್ಯಕ್ತಿತ್ವ, ನಿಲುವುಗಳು, ನಿರ್ಧಾರಗಳು, ತತ್ವಗಳು, ನಡೆಗಳಿಂದ ನೀಡಿದ ಕೊಡುಗೆಗಳು ಹಾಗೂ ಇತರರ ಮೇಲೆ ಬೀರಿದ ಸಕಾರಾತ್ಮಕ ಪ್ರಭಾವಗಳನ್ನು ಸ್ಮರಿಸಿದರು.

Downloaded From:www.kpscvaani.com



ಮುತ್ಸದ್ದಿತನ, ಮೌಲ್ಯಾಧಾರಿತ ರಾಜಕಾರಣ, ಅಧಿಕಾರ ವಿಕೇಂದ್ರೀಕರಣ, 2ನೇ ಹಂತದ ನಾಯಕರಿಗೆ ಉತ್ತೇಜನ ಎಂಬೆಲ್ಲಾ ಮಾತುಗಳನ್ನು ಹೇಳುತ್ತಿದ್ದಂತೆಯೇ ಥಟ್ಟನೆ ಕಣ್ಣ ಮುಂದೆ ಬರುವ ಚಿತ್ರಣ – ಸದಾ ನಗುಮುಖದ, ಸಹಜ ಗಾಂಭೀರ್ಯದ, ಗಡ್ಡದ ಮೇಲೆ ಬೆರಳು ನುರುಕಿಸಿ ಚಿಂತನಾಶೀಲರಾಗಿರುತ್ತಿದ್ದ ರಾಮಕೃಷ್ಣ ಹೆಗಡೆಯವರದ್ದು.

ಉತ್ತರ ಕನ್ನಡ ಜಿಲ್ಲೆಯ ಈ ಸುಸಂಸ್ಕೃತ ನಾಯಕ ರಾಜ್ಯದ ಮುಖ್ಯಮಂತ್ರಿಯಾಗಿ ಮೂರು ಐತಿಹಾಸಿಕ ಅವಧಿಗಳಲ್ಲಿ, ಕೇವಲ ಆಡಳಿತವನ್ನಷ್ಟೇ ನಡೆಸಲಿಲ್ಲ, ಬದಲಿಗೆ ದಕ್ಷಿಣ ಭಾರತದ ಪ್ರಜಾಪ್ರಭುತ್ವದ ಕಾರ್ಯವೈಖರಿಯನ್ನೇ ಮರುವಿನ್ಯಾಸಗೊಳಿಸಿದರು. ಶಕ್ತಿಕೇಂದ್ರದ ಸಾಂಪ್ರದಾಯಿಕ ರಾಜಕಾರಣಿಯ ಚೌಕಟ್ಟನ್ನು ಮೀರಿ, ಜನರ ನಾಯಕ ಎನಿಸಿದರು.

ಭಾರತೀಯ ರಾಜಕೀಯ ವಲಯವು ಕೇಂದ್ರೀಕೃತ ಅಧಿಕಾರ ಮತ್ತು ಜನಪ್ರಿಯತೆಯ ರಾಜಕಾರಣದಿಂದ ಆವೃತವಾಗಿದ್ದ ಕಾಲದಲ್ಲಿ, ಹೆಗಡೆಯವರು ಸಂಪೂರ್ಣ ಭಿನ್ನ ಹಾದಿ ಹಿಡಿದರು: ಮೌಲ್ಯಾಧಾರಿತ ರಾಜಕಾರಣ, ಅತ್ಯುತ್ತಮ ಆಡಳಿತ ಶೈಲಿ ಮತ್ತು ತಳಮಟ್ಟದ ಸಬಲೀಕರಣದ ಮಾದರಿ ಹಾಕಿಕೊಟ್ಟರು. ಉದ್ಯಾನ ನಗರಿ ಬೆಂಗಳೂರು ಜಾಗತಿಕ ತಂತ್ರಜ್ಞಾನದ ಕೇಂದ್ರವಾಗಿ ಹೊರಹೊಮ್ಮುವ ಬಹುಕಾಲದ ಮುಂಚೆಯೇ, ಹೆಗಡೆಯವರು ತಮ್ಮ ದೂರದೃಷ್ಟಿಯ ನಿರ್ಧಾರಗಳ ಮೂಲಕ ನಗರದ ಬೆಳವಣಿಗೆಗೆ ಸಾಂಸ್ಥಿಕ ಮತ್ತು ರಾಜನೈತಿಕ ಅಡಿಪಾಯ ಹಾಕಿಕೊಟ್ಟರು.

ಸ್ವಾತಂತ್ರ್ಯ ಹೋರಾಟದ ಪ್ರೇರಣೆ

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದಲ್ಲಿ 1926ರ ಆಗಸ್ಟ್ 29ರಂದು ಹವ್ಯಕ ಬ್ರಾಹ್ಮಣ ಕೃಷಿಕ ಕುಟುಂಬದಲ್ಲಿ, ಮಹಾಬಲೇಶ್ವರ ಹೆಗಡೆ ಮತ್ತು ಸರಸ್ವತಿ ದಂಪತಿಯ ಪುತ್ರನಾಗಿ ಜನಿಸಿದ ರಾಮಕೃಷ್ಣ ಹೆಗಡೆಯವರ ಬಾಲ್ಯದ ದಿನಗಳು ಗ್ರಾಮೀಣ ಬದುಕಿನ ನೈಜತೆಯೊಂದಿಗೆ ಬೆಸೆದುಕೊಂಡಿದ್ದವು.

ಬಳಿಕ ವಾರಣಾಸಿಯ ಪಾರಂಪರಿಕ ಕಾಶಿ ವಿದ್ಯಾಪೀಠದಲ್ಲಿನ ವಿದ್ಯಾರ್ಥಿ ಜೀವನವು ಅವರ ರಾಜಕೀಯ ದೃಷ್ಟಿಕೋನವನ್ನು ಗಟ್ಟಿಗೊಳಿಸಿತು. ಬ್ರಿಟಿಷ್ ವಸಾಹತುಶಾಹಿ ಆಡಳಿತದಲ್ಲಿ ಯುವಕ ರಾಮಕೃಷ್ಣ ಹೆಗಡೆಯವರನ್ನು ಪ್ರಭಾವಿಸಿದ್ದು, ಮಹಾತ್ಮ ಗಾಂಧಿಯವರ ಸ್ವಾವಲಂಬಿ ಭಾರತ ಮತ್ತು ಗ್ರಾಮ ಸ್ವರಾಜ್ ತತ್ವಗಳು. ಹೆಗಡೆಯವರ ಅಕ್ಕ ಅರ್ಥಾತ್ ಸೋದರಸಂಬಂಧಿಯಾದ ದೊಡ್ಡಮನೆ ಮಹಾದೇವಿ ಹೆಗಡೆಯವರು ಅದಾಗಲೇ ಸ್ವಾತಂತ್ರ್ಯ ಹೋರಾಟದಲ್ಲಿ ಸಂಪೂರ್ಣ ತೊಡಗಿಸಿಕೊಂಡು, ಗಾಂಧಿಯವರ ವಾರ್ಧಾ ಆಶ್ರಮದಲ್ಲಿದ್ದರು. ಆಚಾರ್ಯ ವಿನೋಬಾ ಭಾವೆ ಅವರ ಆಪ್ತ ಸಮೂಹದಲ್ಲಿದ್ದ ಮಹಾದೇವಿ ಹೆಗಡೆಯವರು ಸರ್ವೋದಯ ಚಳವಳಿಯ ಮುಂಚೂಣಿಯಲ್ಲಿದ್ದರು. ಈ ಎಲ್ಲ ಪ್ರಭಾವಗಳ ಫಲವಾಗಿ ತರುಣ ರಾಮಕೃಷ್ಣ ಹೆಗಡೆ 1942ರ 'ಕ್ವಿಟ್ ಇಂಡಿಯಾ' ಚಳವಳಿಗೆ ಧುಮುಕಿದರು. ಹಿರಿಯ ಸ್ವಾತಂತ್ರ್ಯ ಹೋರಾಟಗಾರರೊಂದಿಗೆ ಸೆರೆವಾಸವನ್ನೂ ಅನುಭವಿಸಿದರು.

ಲಖನೌ ವಿಶ್ವವಿದ್ಯಾನಿಲಯದಿಂದ ಕಾನೂನು ಪದವಿ ಪಡೆದ ಹೆಗಡೆಯವರು ತಾಯ್ನಾಡಿಗೆ ಮರಳಿ, ಅಂದಿನ ಅಖಂಡ ಮೈಸೂರು ರಾಜ್ಯದ ರಾಜಕಾರಣ ವಲಯದಲ್ಲಿ ತಮ್ಮ ಬುದ್ಧಿಮತ್ತೆ, ಜ್ಞಾನ, ಶಾಂತಚಿತ್ತತೆ, ಎಲ್ಲವನ್ನೂ ಅಳೆದು ತೂಗುವ ಗುಣದಿಂದಾಗಿ ಕ್ಷಿಪ್ರವಾಗಿ ಪ್ರವರ್ಧಮಾನಕ್ಕೆ ಬಂದರು.

1954ರಲ್ಲಿ ಉತ್ತರ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಹೆಗಡೆ, 1957ರಲ್ಲಿ ಮೊದಲ ಬಾರಿಗೆ ಶಾಸಕರಾಗಿ ವಿಧಾನಸಭೆ ಪ್ರವೇಶಿಸಿದರು. ಮಾಜಿ ಮುಖ್ಯಮಂತ್ರಿಗಳಾದ ಎಸ್. ನಿಜಲಿಂಗಪ್ಪ ಮತ್ತು ವೀರೇಂದ್ರ ಪಾಟೀಲ್ ಅವರಂತಹ ರಾಜಕೀಯ ಧುರೀಣರ ಮಾರ್ಗದರ್ಶನದಲ್ಲಿ ಮುನ್ನಡೆದ ಅವರು, 1960ರ ದಶಕದಲ್ಲಿ ಸಂಪುಟ ಸಚಿವರಾಗಿ ಹಣಕಾಸು,

Downloaded From:www.kpscvaani.com



ಕೈಗಾರಿಕೆ, ಸಹಕಾರ, ಪಂಚಾಯತ್ ರಾಜ್, ವಾರ್ತಾ ಮತ್ತು ಪ್ರಸಾರ ಹಾಗೂ ಯೋಜನಾ ಇಲಾಖೆಗಳಂತಹ ಪ್ರಮುಖ ಖಾತೆಗಳನ್ನು ನಿರ್ವಹಿಸಿದರು. ಹಣಕಾಸು ಸಚಿವರಾಗಿ, ಅವರು ಜನಪ್ರಿಯ ಉಚಿತ ಕೊಡುಗೆಗಳಿಗಿಂತ ದೀರ್ಘಕಾಲೀನ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡುವ ಸಮತೋಲಿತ ಮತ್ತು ದೂರದೃಷ್ಟಿಯ ಬಜೆಟ್ ಮಂಡಿಸಿದರು.

1969ರ ಕಾಂಗ್ರೆಸ್ ವಿಭಜನೆಯ ನಂತರ ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ, ಹೆಗಡೆಯವರು ಅಧಿಕಾರಕ್ಕಿಂತ ತತ್ವಾದರ್ಶಗಳಿಗೆ ಆದ್ಯತೆ ನೀಡಿ ತಮ್ಮ ನಾಯಕ ಎಸ್. ನಿಜಲಿಂಗಪ್ಪ ಅವರ ಹಾದಿಯಲ್ಲಿ ನಡೆದರು. ಅಂದಿನ ಪ್ರಧಾನ ಮಂತ್ರಿ ಇಂದಿರಾ ಗಾಂಧಿ ವಿರುದ್ಧದ ಸಂಸ್ಥಾ ಕಾಂಗ್ರೆಸ್ (ಒ) ಬಣ ಸೇರಿದರು. ಇದೇ ವೇಳೆ ವಿಧಾನ ಪರಿಷತ್‌ನ ಪ್ರತಿ ಪಕ್ಷ ನಾಯಕರಾಗಿಯೂ ಸೇವೆ ಸಲ್ಲಿಸಿದರು. 1975ರ ರಾಷ್ಟ್ರೀಯ ತುರ್ತು ಪರಿಸ್ಥಿತಿಯ ಸಮಯದಲ್ಲಿ ಸರ್ವಾಧಿಕಾರಿ ಧೋರಣೆಯ ವಿರುದ್ಧದ ಬಹಿರಂಗ ಪ್ರತಿಭಟನೆಯಿಂದಾಗಿ ಬಂಧನಕ್ಕೊಳಗಾಗಿ, ಹಲವು ನಾಯಕರೊಂದಿಗೆ ಸುಮಾರು 18 ತಿಂಗಳ ಕಾಲ ಸೆರೆವಾಸ ಅನುಭವಿಸಬೇಕಾಯಿತು. ಈ ಕಠಿಣ ಅನುಭವವು ಅವರನ್ನು ಪ್ರಾದೇಶಿಕ ನಾಯಕನಿಂದ ರಾಷ್ಟ್ರಮಟ್ಟದ ಪ್ರಮುಖ ನಾಯಕನನ್ನಾಗಿ ಎತ್ತರಕ್ಕೆ ಬೆಳೆಸಿತು. ಇದರ ಫಲವಾಗಿ ತುರ್ತು ಪರಿಸ್ಥಿತಿಯ ನಂತರ ಜನತಾ ಪಕ್ಷ ಕರ್ನಾಟಕ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಂಡರು.

1983ರ ಚುನಾವಣಾ ಜಯ

1983ರ ಜನವರಿ ವೇಳೆಗೆ, ಕರ್ನಾಟಕದ ರಾಜಕಾರಣ ಬದಲಾವಣೆಗೆ ಸಜ್ಜುಗೊಂಡಿತ್ತು. ಐತಿಹಾಸಿಕ ಚುನಾವಣಾ ತೀರ್ಪಿನಲ್ಲಿ, ಹೊಸದಾಗಿ ರೂಪುಗೊಂಡ ಜನತಾ ಪಕ್ಷವು ದಶಕಗಳ ಕಾಂಗ್ರೆಸ್ ಆಡಳಿತವನ್ನು ಅಂತ್ಯಗೊಳಿಸಿತು. ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸದ, ಆಗಷ್ಟೇ ಸಂಸದರಾಗಿದ್ದ ಹೆಗಡೆ, ವಿವಿಧ ಪಕ್ಷಗಳ ಬೆಂಬಲದೊಂದಿಗೆ, ಜನತಾ ಪರಿವಾರದ ಮೈತ್ರಿಕೂಟ ಮುನ್ನಡೆಸಲು ಸರ್ವಾನುಮತದಿಂದ ಆಯ್ಕೆಯಾದರು.

ಹೀಗೆ ಕರ್ನಾಟಕದ ಮೊದಲ ಕಾಂಗ್ರೆಸ್ಸೇತರ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಹೆಗಡೆ, ಹೊಸ ಮಾದರಿಯ ನಾಯಕತ್ವವನ್ನು ಪರಿಚಯಿಸಿದರು. ಮಾಧ್ಯಮಗಳಿಗೆ ಸುಲಭವಾಗಿ ಲಭ್ಯವಾಗುವ, ಬೌದ್ಧಿಕ ವಲಯಕ್ಕೆ ಆಪ್ತವಾಗುವ ಹಾಗೂ ಶಾಸಕಾಂಗ ನಿಯಮಗಳಿಗೆ ಗೌರವ ನೀಡುವ ಅಪರೂಪದ ರಾಜಕಾರಣಿ ಎನಿಸಿದರು. ಹಲವು ಪಕ್ಷಗಳನ್ನೊಳಗೊಂಡ ಮೈತ್ರಿಕೂಟ ಸರ್ಕಾರವೂ ಸುಸ್ಥಿರ, ದಕ್ಷ ಮತ್ತು ದೂರದೃಷ್ಟಿಯ ಆಡಳಿತವನ್ನು ನೀಡಬಲ್ಲದು ಎಂದು ಸಾಬೀತುಪಡಿಸಿದರು.

ವಿಕೇಂದ್ರೀಕರಣದ ಕರ್ನಾಟಕ ಮಾದರಿ

ಹೆಗಡೆಯವರ ರಾಜಕೀಯ ಜೀವನದ ಅತ್ಯಂತ ಮಹತ್ವದ ಸಾಧನೆ ಎಂದರೆ ತಳಮಟ್ಟದ ಪ್ರಜಾಪ್ರಭುತ್ವಕ್ಕೆ ಅವರು ನೀಡಿದ ಕ್ರಾಂತಿಕಾರಿ ಕೊಡುಗೆ. ತಮ್ಮ ಸಂಪಟದ ಗ್ರಾಮೀಣ ಅಭಿವೃದ್ಧಿ ಸಚಿವ ಅಬ್ದುಲ್ ನಜೀರ್ ಸಾಬ್ (ನೀರು ಸಾಬ್ ಎಂದೇ ಖ್ಯಾತ) ಮೂಲಕ ಹಳ್ಳಿಗಳ ಪ್ರಗತಿಗೆ ಅಡಿಪಾಯ ಹಾಕಿದರು. ನಿಜವಾದ ಪ್ರಜಾಪ್ರಭುತ್ವವು ವಿಧಾನಸೌಧದ ಹವಾನಿಯಂತ್ರಿತ ಕೊಠಡಿಗಳಲ್ಲಿ ಇಲ್ಲ. ಬದಲಿಗೆ ಹಳ್ಳಿಗಾಡಿನಲ್ಲಿ, ಜನರ ಬಳಿ ತೆರಳುವುದರಲ್ಲಿ ಇದೆ ಎಂಬುದನ್ನು ಹೆಗಡೆ ಪ್ರತಿಪಾದಿಸಿದರು.

1983ರಲ್ಲಿ ಹೆಗಡೆ ನೇತೃತ್ವದ ಸರ್ಕಾರವು 'ಕರ್ನಾಟಕ ಜಿಲ್ಲಾ



Downloaded From:www.kpscvaani.com

ಪರಿಷತ್ತು, ತಾಲೂಕು ಪಂಚಾಯತ್ ಸಮಿತಿ, ಮಂಡಲ ಪಂಚಾಯತ್ ಮತ್ತು ನ್ಯಾಯ ಪಂಚಾಯತ್‌ಗಳ ಕಾಯ್ದೆ'ಯನ್ನು ಅಂಗೀಕರಿಸಿತು. ಇದು ಕೇವಲ ಹೆಸರಿಗಷ್ಟೇ ಮಾಡಿದ ಸುಧಾರಣೆಯಾಗಿರಲಿಲ್ಲ; ಬದಲಿಗೆ ನೈಜ ಅಧಿಕಾರದ ವಿಕೇಂದ್ರೀಕರಣವಾಗಿತ್ತು:

ಕಾಯ್ದೆ ಅನುಸಾರ ಆಡಳಿತ ಶ್ರೇಣಿ ಹೀಗಿತ್ತು:

- ಜಿಲ್ಲಾ ಪರಿಷತ್ (ಜಿಲ್ಲಾ ಮಟ್ಟ – ಅಧ್ಯಕ್ಷರ ನೇತೃತ್ವದಲ್ಲಿ)
- ತಾಲೂಕು ಪಂಚಾಯತ್ ಸಮಿತಿ (ತಾಲೂಕು ಮಟ್ಟ)
- ಮಂಡಲ ಪಂಚಾಯತ್ (ಗ್ರಾಮಗಳ ಸಮೂಹ ಮಟ್ಟ)
- ಗ್ರಾಮ ಸಭೆ (ಗ್ರಾಮೀಣ ಮಟ್ಟದ ಸಮಿತಿಗಳು)

ಅಧಿಕಾರ ವಿಕೇಂದ್ರೀಕರಣದ ಜತೆಗೆ ಹಣಕಾಸು ಸ್ವಾಯತ್ತತೆ ದೊರಕಿಸಿದ್ದು ಗ್ರಾಮೀಣಾಭಿವೃದ್ಧಿಯಲ್ಲಿ ಮಹತ್ವದ ಬದಲಾವಣೆಗೆ ಕಾರಣವಾಯಿತು. ರಾಜ್ಯದ ಒಟ್ಟು ಅಭಿವೃದ್ಧಿ ಬಜೆಟ್‌ನ ಸುಮಾರು ಮೂರನೇ ಒಂದು ಭಾಗವನ್ನು ನೇರವಾಗಿ ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸಲಾಯಿತು.

ರಾಜಕೀಯದಲ್ಲಿ ಮಹಿಳಾ ಪ್ರಾತಿನಿಧ್ಯದ ಮೂಲಕ ಮಹಿಳಾ ಸಬಲೀಕರಣದ ಬಗ್ಗೆ ಈಗಲೂ ನಾವು ಪ್ರತಿಪಾದಿಸುತ್ತೇವೆ. ಆದರೆ ನಾಲ್ಕು ದಶಕಗಳಷ್ಟು ಹಿಂದೆಯೇ ಸ್ಥಳೀಯ ಆಡಳಿತ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇಕಡಾ 25ರಷ್ಟು ಮೀಸಲಾತಿ ದೊರಕಿಸಿದವರು ರಾಮಕೃಷ್ಣ ಹೆಗಡೆ. ಇದು ಹತ್ತಾರು ಸಾವಿರ ಗ್ರಾಮೀಣ ಮಹಿಳೆಯರನ್ನು ಮೊದಲ ಬಾರಿಗೆ ಆಡಳಿತಾತ್ಮಕ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಗೆ ಅವಕಾಶ ದೊರಕಿಸಿದ ಕ್ರಾಂತಿಕಾರಿ ಹೆಜ್ಜೆಯಾಗಿತ್ತು.

ಕುಡಿಯುವ ನೀರು, ಪ್ರಾಥಮಿಕ ಶಾಲೆಗಳು ಮತ್ತು ರಸ್ತೆ–ಸಂಪರ್ಕದಂತಹ ಸ್ಥಳೀಯ ಅಗತ್ಯಗಳಿಗೆ ಆದ್ಯತೆ ನೀಡಲು ಗ್ರಾಮಸಭೆಗಳಿಗೆ ಅಧಿಕಾರ ನೀಡುವ ಮೂಲಕ, ಹೆಗಡೆ ಸರ್ಕಾರ ಸಾಮಾನ್ಯ ನಾಗರಿಕರನ್ನು ತಮ್ಮ ಆಡಳಿತದ ಸಕ್ರಿಯ ಪಾಲುದಾರರನ್ನಾಗಿ ಮಾಡಿದರು. ಆ ಮೂಲಕ ಜನ ಭಾಗೀದಾರಿಕೆ ಆಡಳಿತಕ್ಕೆ ನಾಂದಿ ಹಾಡಿದರು.

1992ರಲ್ಲಿ ಭಾರತೀಯ ಸಂಸತ್ತು ದೇಶಾದ್ಯಂತ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತರಲು ಸಂವಿಧಾನದ 73ನೇ ಮತ್ತು 74ನೇ ತಿದ್ದುಪಡಿಗಳನ್ನು ಅಂಗೀಕರಿಸಿದಾಗ, ಹೆಗಡೆಯವರ 'ಕರ್ನಾಟಕ ಮಾದರಿ'ಯೇ ಪ್ರಮುಖ ನೀಲನಕ್ಷೆಯಾಗಿ ಕಾರ್ಯನಿರ್ವಹಿಸಿತು.

ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಸರ್ಕಾರಿ ನಿವಾಸ ಬಳಸದೆ ಸ್ವಂತ ನಿವಾಸದಲ್ಲಿಯೇ ಇದ್ದ ರಾಮಕೃಷ್ಣ ಹೆಗಡೆ ಅವರು ರಾಜ್ಯದಲ್ಲಿ ನ್ಯಾಯಾಂಗ ಕ್ಷೇತ್ರದ ಸುಧಾರಣೆಗೂ ದೊಡ್ಡ ಮಟ್ಟದ ಕೊಡುಗೆ ನೀಡಿದರು.

ಮೌಲ್ಯಾಧಾರಿತ ರಾಜಕಾರಣ

ಇಂದಿನ ರಾಜಕೀಯ ವಾತಾವರಣದಲ್ಲಿ, "ಮೌಲ್ಯಾಧಾರಿತ ರಾಜಕಾರಣ" ಎಂಬ ಪದವನ್ನು ಕೇವಲ ಭಾಷಣದಲ್ಲಿ ಕೇಳಬಹುದು ಅಥವಾ ಕಾಗದದ ಮೇಲೆ ಕಾಣಬಹುದು. ಆದರೆ ಹೆಗಡೆ ಅದನ್ನು ಪ್ರಾಯೋಗಿಕವಾಗಿ ಜಾರಿಗೆ ತಂದರು. ಆಡಳಿತದಲ್ಲಿ ಪಾರದರ್ಶಕತೆಗೆ ಒತ್ತು ನೀಡಿದ ಅವರು ನ್ಯಾಯಾಂಗ ಸುಧಾರಣೆಗೆ ಆದ್ಯತೆ ನೀಡಿದರು. 1984ರಲ್ಲಿ ಅವರು 'ಕರ್ನಾಟಕ ಲೋಕಾಯುಕ್ತ'ವನ್ನು ಸ್ಥಾಪಿಸಿದರು. ಸಾರ್ವಜನಿಕ ಸೇವಕರು ಮತ್ತು ರಾಜಕಾರಣಿಗಳ ವಿರುದ್ಧದ ಭ್ರಷ್ಟಾಚಾರದ ಆರೋಪಗಳನ್ನು ತನಿಖೆ ಮಾಡಲು ಸ್ವತಂತ್ರವಾದ ಶಾಸನಬದ್ಧ ಸಂಸ್ಥೆ ಅದಾಗಿತ್ತು. ಇಷ್ಟೇ ಅಲ್ಲದೆ, ಮುಖ್ಯಮಂತ್ರಿ ಕಚೇರಿಯನ್ನೂ ಸ್ವಯಂಪ್ರೇರಿತರಾಗಿ ಲೋಕಾಯುಕ್ತದ ವ್ಯಾಪ್ತಿಗೆ ತಂದರು. ಇದು ಅಭೂತಪೂರ್ವ ರಾಜಕೀಯ ದಿಟ್ಟತನದ ಕಾರ್ಯವಾಗಿತ್ತು.

ನೈತಿಕ ಮಾದರಿ: ಅಧಿಕಾರಕ್ಕೆ ಅಂಟಿಕೊಳ್ಳುವ ಜಾಯಮಾನದ ರಾಜಕಾರಣಿಗಳ ಮಧ್ಯೆ ಹೆಗಡೆಯವರು ವಿಭಿನ್ನ ಮಾದರಿಯಾಗಿ ನಿಲ್ಲುತ್ತಾರೆ. 1986ರ ಸಾರಾಯಿ ಬಾಟ್ಲಿಂಗ್ ಪರವಾನಗಿ ಹಂಚಿಕೆಗೆ ಸಂಬಂಧಿಸಿದಂತೆ ಹೈಕೋರ್ಟ್ ಆಕ್ಷೇಪಾರ್ಹ ಅಭಿಪ್ರಾಯ ವ್ಯಕ್ತಪಡಿಸಿದಾಗ, ಹೆಗಡೆಯವರು ನೈತಿಕ ಹೊಣೆ ಹೊತ್ತು ತಕ್ಷಣ ರಾಜೀನಾಮೆ ನೀಡಿದರು. ನಂತರ ಅವರ ನಾಯಕತ್ವಕ್ಕೆ ಸರ್ವಾನುಮತದ ವಿಶ್ವಾಸ ದೊರೆತ ಮೇಲಷ್ಟೇ ಹುದ್ದೆಗೆ ಮರಳಿದರು.

ಹಾಗೆಯೇ 1988ರ ಟೆಲಿಫೋನ್ ಟ್ಯಾಪಿಂಗ್ ಪ್ರಕರಣದಲ್ಲೂ ಮಾದರಿಯ ಮೇಲ್ಪಂಕ್ತಿ ಹಾಕಿದರು. ರಾಜ್ಯ ಗುಪ್ತಚರ ವಿಭಾಗವು ಫೋನ್ ಲೈನ್‌ಗಳನ್ನು ಕದ್ದಾಲಿಕೆ ಮಾಡಿದೆ ಎಂಬ ಆರೋಪ ಕೇಳಿಬಂದಾಗ, ವೈಯಕ್ತಿಕವಾಗಿ ಭಾಗಿಯಾಗದಿದ್ದರೂ ಅದರ ಪೂರ್ಣ ನೈತಿಕ ಹೊಣೆ ಹೊತ್ತು ಹೆಗಡೆ ತಕ್ಷಣ ರಾಜೀನಾಮೆ ನೀಡಿದರು. "ನೈತಿಕ ಬಲವಿಲ್ಲದ ಅಧಿಕಾರವು ಕೇವಲ ಆಡಳಿತಾತ್ಮಕ ದಬ್ಬಾಳಿಕೆಯಾಗುತ್ತದೆ. ಸಾರ್ವಜನಿಕರ ವಿಶ್ವಾಸ ಕುಸಿದ ತಕ್ಷಣ ನಾಯಕನಾದವನು ಪಕ್ಕಕ್ಕೆ ಸರಿಯಲು ಸಿದ್ಧನಿರಬೇಕು" ಎಂಬುದು ರಾಮಕೃಷ್ಣ ಹೆಗಡೆಯವರ ನೀತಿಯಾಗಿತ್ತು.

ಆರ್ಥಿಕ ಪ್ರಗತಿ: ಜಾಗತಿಕ ಐಟಿ ಕ್ರಾಂತಿಗಿಂತ ಸಾಕಷ್ಟು ಮುಂಚೆಯೇ ತಂತ್ರಜ್ಞಾನದ ಸಾಮರ್ಥ್ಯವನ್ನು ಗುರುತಿಸಿದ ಹೆಗಡೆಯವರು,

ಹೆಗಡೆ ಬದುಕಿನ ಒಂದು ನೋಟ

ಜನನ: ಆಗಸ್ಟ್ 29, 1926

ಜನ್ಮಸ್ಥಳ: ಸಿದ್ಧಾಪುರ, ಉತ್ತರ ಕನ್ನಡ ಜಿಲ್ಲೆ.

ಶಿಕ್ಷಣ: ಕಾಶಿ ವಿದ್ಯಾಪೀಠ (ವಾರಣಾಸಿ), ಲಖನೌ ವಿಶ್ವವಿದ್ಯಾಲಯ (ಎಂ.ಎ., ಎಲ್.ಎಲ್.ಬಿ.)

ಸಾಂವಿಧಾನಿಕ ಹುದ್ದೆ: ಕರ್ನಾಟಕದ 10ನೇ ಮುಖ್ಯಮಂತ್ರಿ (1983–1988)

ಮುಖ್ಯ ಕೊಡುಗೆ: ಪಂಚಾಯತ್ ರಾಜ್ ಸುಧಾರಣೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ, ಸ್ಥಳೀಯ ಆಡಳಿತದಲ್ಲಿ ಮಹಿಳೆಯರಿಗೆ ಶೇ. 25 ಮೀಸಲಾತಿ, ಪ್ರಥಮ ವಿಶ್ವ ಕನ್ನಡ ಸಮ್ಮೇಳನ ಆಯೋಜನೆ.

Downloaded From:www.kpscvaani.com

ಹೆಗಡೆಯವರ ಆಡಳಿತದ ನಾಲ್ಕು ಸ್ತಂಭಗಳು:

ವಿಕೇಂದ್ರೀಕರಣ ಮತ್ತು ಪಂಚಾಯತ್ ರಾಜ್: ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ಹಸ್ತಾಂತರ ಮತ್ತು ಮಹಿಳೆಯರಿಗೆ ಶೇ. 25ರಷ್ಟು ಮೀಸಲಾತಿ.

ಮೌಲ್ಯಾಧಾರಿತ ರಾಜಕಾರಣ: ಕರ್ನಾಟಕ ಲೋಕಾಯುಕ್ತ ಸ್ಥಾಪನೆ ಮತ್ತು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡುವ ಸಂಸ್ಕೃತಿ.

ಆರ್ಥಿಕ ಮತ್ತು ಐಟಿ ಆಧುನಿಕೀಕರಣ: ಎಲೆಕ್ಟ್ರಾನಿಕ್ ಸಿಟಿಗೆ ಅಡಿಪಾಯ ಮತ್ತು ಪ್ರಮುಖ ನಗರಗಳಲ್ಲಿ ಕೈಗಾರಿಕಾ ಅಭಿವೃದ್ಧಿ.

ಪ್ರಜಾಸತ್ತಾತ್ಮಕ ಬಹುತ್ವ ಮತ್ತು ಮಾಧ್ಯಮ ಸ್ವಾತಂತ್ರ್ಯ.

ಬೆಂಗಳೂರಿನ ಹೊರವಲಯದಲ್ಲಿ 'ಎಲೆಕ್ಟ್ರಾನಿಕ್ ಸಿಟಿ' ಸ್ಥಾಪಿಸಲು ಸರ್ಕಾರದ ಪೂರ್ಣ ಬೆಂಬಲ ನೀಡಿದರು. ಹುಬ್ಬಳ್ಳಿ, ಬೆಳಗಾವಿ ಮತ್ತು ಮಂಗಳೂರಿನಂತಹ 2ನೇ ಸ್ತರದ ನಗರಗಳಿಗೂ ಕೈಗಾರಿಕಾ ಹೂಡಿಕೆಯನ್ನು ವಿಸ್ತರಿಸಿದರು. ಜೊತೆಗೆ ಇಂದು ರಾಜ್ಯದ ಪ್ರಗತಿಗೆ ಶಕ್ತಿಯಾಗಿರುವ ನುರಿತ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸಲು ವೃತ್ತಿಪರ ಮತ್ತು ತಾಂತ್ರಿಕ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದರು.

ಕಲೆ, ಸಾಹಿತ್ಯ, ಸಂಸ್ಕೃತಿಗೆ ಮಹತ್ವದ ಕೊಡುಗೆ:

ಸದಾ ರಾಜಕಾರಣವನ್ನೇ ಹಾಸಿ-ಹೊದೆಯುವ ರಾಜಕಾರಣಿಗಳ ಮಧ್ಯೆ ರಾಮಕೃಷ್ಣ ಹೆಗಡೆಯವರು ವಿಭಿನ್ನವಾಗಿ ನಿಲ್ಲುತ್ತಾರೆ. ನಾಡು-ನುಡಿ, ಕಲೆ-ಸಾಹಿತ್ಯ-ಸಿನಿಮಾ-ಸಂಸ್ಕೃತಿಗಳ ಪೋಷಣೆಯಲ್ಲಿ ಇವರದ್ದು ಮಹತ್ವದ ಕೊಡುಗೆ. 1984ರಲ್ಲಿ ಮೈಸೂರಿನಲ್ಲಿ ಪ್ರಥಮ ವಿಶ್ವ ಕನ್ನಡ ಸಮ್ಮೇಳನ ಆಯೋಜಿಸಿದರು. ಜ್ಞಾನಪೀಠ ಪುರಸ್ಕೃತ ಸಾಹಿತಿ ಕುವೆಂಪು ಅವರು ಈ ಸಮ್ಮೇಳನಕ್ಕೆ ಚಾಲನೆ ನೀಡಿದ್ದರು. ಸಾಹಿತಿಗಳು, ಕಲಾವಿದರು, ಅನಿವಾಸಿ ಕನ್ನಡಿಗರು ಸೇರಿದಂತೆ ನಾಡು-ನುಡಿ ಕಾಳಜಿಯುಳ್ಳ ಅಸಂಖ್ಯಾತ ಜನರು ಸಮ್ಮೇಳನಕ್ಕೆ ಸಾಕ್ಷಿಯಾದರು.

ಕನ್ನಡ ಚಿತ್ರರಂಗದೆಡೆಗೆ ಅದರಲ್ಲೂ ಕಲಾತ್ಮಕ ಚಿತ್ರಗಳೆಡೆಗೆ ಆಸಕ್ತಿ ಹೊಂದಿದ್ದ ಹೆಗಡೆಯವರು ಚಿತ್ರೀಕರಣ ಮೂಲಸೌಕರ್ಯ ನಿರ್ಮಾಣ, ತೆರಿಗೆ ವಿನಾಯಿತಿ, ಸಹಾಯಧನ ಹೆಚ್ಚಳ ಮುಂತಾದ ಸೌಲಭ್ಯ ಒದಗಿಸಲು ಅಗತ್ಯ ಕ್ರಮ ಕೈಗೊಂಡರು. ಬೆಂಗಳೂರಿನ ಹೆಸರಘಟ್ಟದಲ್ಲಿ ಚಿತ್ರ ನಗರಿ ನಿರ್ಮಾಣಕ್ಕೆ ರೂಪುರೇಷೆ ತಯಾರಿಸಿದರು. ಕೆಲವು ಕನ್ನಡ ಚಿತ್ರಗಳಲ್ಲೂ ಹೆಗಡೆಯವರು ನಟಿಸಿದ್ದರು.

ಯುವ ನಾಯಕರ ಸೃಷ್ಟಿ:

ರಾಜಕಾರಣದಲ್ಲಿ ಯುವ ಪ್ರತಿಭೆಗಳನ್ನು ಪ್ರೋತ್ಸಾಹಿಸುವಲ್ಲಿ ಹೆಗಡೆಯವರದ್ದು ಅಗ್ರ ಸ್ಥಾನ. ಹೊಸ ಶಕ್ತಿಯಿಲ್ಲದೆ ಪ್ರಜಾಸತ್ತಾತ್ಮಕ ಸಂಸ್ಥೆಗಳು ನಿಸ್ಸಾರಗೊಳ್ಳುತ್ತವೆ ಎಂಬುದನ್ನು ಅರಿತ ಅವರು, ಯುವ ನಾಯಕರ ಪೀಳಿಗೆಯನ್ನು ಸಕ್ರಿಯವಾಗಿ ಬೆಳೆಸಿದರು. ಎಚ್.ಡಿ. ದೇವೇಗೌಡ, ಜೆ.ಎಚ್. ಪಟೇಲ್, ಸಿದ್ದರಾಮಯ್ಯ, ಎಂ.ಪಿ. ಪ್ರಕಾಶ್, ಜೀವರಾಜ ಆಳ್ವ, ಪಿ.ಜಿ.ಆರ್ ಸಿಂಧ್ಯಾ, ಆರ್.ವಿ. ದೇಶಪಾಂಡೆ ಸೇರಿದಂತೆ ದಶಕಗಳ ಕಾಲ ರಾಜ್ಯ ಮತ್ತು ರಾಷ್ಟ್ರೀಯ ರಾಜಕೀಯವನ್ನು ಮುನ್ನಡೆಸಿದ ನಾಯಕರು ಮಾರ್ಗದರ್ಶನ ಪಡೆದದ್ದು ಹೆಗಡೆಯವರಲ್ಲಿ. ತಮ್ಮ ಸರ್ಕಾರದಲ್ಲಿ ಹೆಗಡೆಯವರು ಯುವ ಮತ್ತು ಮೊದಲ ಬಾರಿಗೆ ಶಾಸಕರಾದವರಿಗೂ ಪ್ರತಿಭೆ ಅನುಸಾರ ಪ್ರಮುಖ ಸಂಪುಟ ಖಾತೆಗಳನ್ನು ವಹಿಸಿಕೊಟ್ಟು, ಆಡಳಿತಾತ್ಮಕ ದಕ್ಷತೆಯ ಸಂಸ್ಕೃತಿಯನ್ನು ಬೆಳೆಸಿದರು. ಅಲ್ಲದೇ, ತಮ್ಮ ಸಚಿವ ಸಂಪುಟ ಸಹೋದ್ಯೋಗಿಗಳ ಖಾತೆಗಳಲ್ಲಿ ಯಾವುದೇ ಹಸ್ತಕ್ಷೇಪ ಮಾಡದೆ, ಅವರುಗಳಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡುತ್ತಿದ್ದ ಹೆಗಡೆ ಅವರ ಗುಣದ ಬಗ್ಗೆ ಮೆಚ್ಚುಗೆ ಮಾತುಗಳು ಇಂದಿಗೂ ಕೇಳಿಬರುತ್ತವೆ.

ರಾಷ್ಟ್ರ ಮಟ್ಟದಲ್ಲಿ ಮೂಡಿಸಿದ ಛಾಪು

ಬದಲಾದ ರಾಜಕೀಯ ಸಂದರ್ಭದಲ್ಲಿ, ಹೆಗಡೆ ತಮ್ಮ ತೀಕ್ಷ್ಣ ಬುದ್ಧಿಮತ್ತೆಯನ್ನು ರಾಷ್ಟ್ರೀಯ ವೇದಿಕೆಯಲ್ಲಿ ಪ್ರದರ್ಶಿಸಿದರು. 1998-99ರಲ್ಲಿ ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಸಂಪುಟದಲ್ಲಿ ವಾಣಿಜ್ಯ ಸಚಿವರಾಗಿ ಸೇವೆ ಸಲ್ಲಿಸಿದ ಅವರು, ಜಾಗತಿಕ ಮಾರುಕಟ್ಟೆಗಳ ಸಂಕೀರ್ಣ ಬದಲಾವಣೆಯ ಯುಗದಲ್ಲಿ ಭಾರತದ ಅಂತಾರಾಷ್ಟ್ರೀಯ ವಾಣಿಜ್ಯ ನೀತಿಗಳನ್ನು ಮುನ್ನಡೆಸಿದರು. ರಫ್ತು ಉದಾರೀಕರಣ ಮತ್ತು ಆರ್ಥಿಕ ಆಧುನಿಕೀಕರಣಕ್ಕೆ ಒತ್ತು ನೀಡಿದರು.

2004ರ ಜನವರಿ 12ರಂದು ರಾಮಕೃಷ್ಣ ಹೆಗಡೆಯವರು ತಮ್ಮ 77ನೇ ವಯಸ್ಸಿನಲ್ಲಿ ನಿಧನರಾದಾಗ, ಕರ್ನಾಟಕವು ಕೇವಲ ಒಬ್ಬ ಮಾಜಿ ಮುಖ್ಯಮಂತ್ರಿಯನ್ನಷ್ಟೇ ಕಳೆದುಕೊಳ್ಳಲಿಲ್ಲ; ಬದಲಿಗೆ ಒಬ್ಬ ಅಪರೂಪದ ರಾಜತಾಂತ್ರಿಕ, ಮುತ್ಸದ್ದಿಯನ್ನು ಕಳೆದುಕೊಂಡಿತು. ವಿಕೇಂದ್ರೀಕೃತ ಆಡಳಿತದೊಂದಿಗೆ ಪರಿವರ್ತನೆ ಕಂಡ ರಾಜ್ಯ; ಅಸಂಖ್ಯಾತ 2ನೇ ಹಂತದ ಯುವನಾಯಕರ ಪೀಳಿಗೆ ಮತ್ತು ಸಾರ್ವಜನಿಕ ಜೀವನದಲ್ಲಿ ನಾಗರಿಕರು ಬಯಸುವ ಉನ್ನತ ಮಟ್ಟದ ಮಾನದಂಡಗಳನ್ನು ಹೆಗಡೆಯವರು ಪರಂಪರೆಯಾಗಿ ಬಿಟ್ಟುಹೋದರು.

ಅಲ್ಪಾವಧಿಯ ರಾಜಕೀಯ ಲಾಭಗಳೇ ಪ್ರಾಬಲ್ಯ ಸಾಧಿಸುತ್ತಿರುವ ಪ್ರಸಕ್ತ ಕಾಲಘಟ್ಟದಲ್ಲಿ, ಪ್ರತಿ ಭಾನುವಾರದಂದು ಮೌನವ್ರತ ಆಚರಿಸುತ್ತಿದ್ದ ಹೆಗಡೆಯವರ ಮೌಲ್ಯಾಧಾರಿತ ಪರಂಪರೆಯು ಮಹತ್ವದ ಮಾದರಿಯಾಗಿ ಉಳಿದಿದೆ. ನಿಜವಾದ ನಾಯಕತ್ವ ಎಂದರೆ ಕೇವಲ ಅಧಿಕಾರವನ್ನು ಅನುಭವಿಸುವುದಲ್ಲ ಅದನ್ನು ವಿಕೇಂದ್ರೀಕರಿಸಿ ಹಂಚಿಕೆ ಮಾಡುವುದು ಎಂಬ ಹೆಗಡೆಯವರ ತತ್ವಾದರ್ಶ ರಾಜಕಾರಣದಲ್ಲಿ ಸಾರ್ವಕಾಲಿಕ ಮಾದರಿಯಾಗಿದೆ. ■

Downloaded From:www.kpscvaani.com



ವಿಶ್ವ ವಿಖ್ಯಾತ ಮೈಸೂರು ದಸರಾ

ಬನ್ನೂರು ಕೆ. ರಾಜು

ಹೆಜ್ಜೆಯ ಹಾಕುತ ಬನ್ನಿರಿ ಮುಂದೆ
ನೋಡಲು ದಸರೆಯ ಹಬ್ಬವನು
ಉತ್ಸಾಹದ ಕಿರುಗೆಜ್ಜೆಯ ಕಟ್ಟಿ
ಹಾಡಿರಿ ನಾಡಿನ ಕಬ್ಬವನು...

ಹೀಗೆ ದಸರೆಯ ಉತ್ಸಾಹ-ಹುಮ್ಮಸ್ಸು, ಸಂತಸ-ಸಂಭ್ರಮಗಳ ಬಗ್ಗೆ ಖ್ಯಾತ ಕವಿ ಚುಟುಕು ಬ್ರಹ್ಮ ದಿನಕರ ದೇಸಾಯಿ ಅವರು ತಮ್ಮದೊಂದು ಅಪರೂಪದ ದೀರ್ಘ ಕವಿತೆಯಲ್ಲಿ ಬರೆಯುತ್ತಾ ಇಡೀ ಕವನದ ತುಂಬಾ ದಸರೆಯ ಬೆಳಕನ್ನು ಚೆಲ್ಲಿ ಅದರ ಮಹತ್ವವನ್ನು ಅಕ್ಷರಗಳಲ್ಲಿ ಕಟ್ಟಿ ಕೊಡುತ್ತಾ ತಮ್ಮ ಮಧುರ ಕಾವ್ಯವನ್ನು ಹೀಗೆ ಮುಕ್ತಾಯಗೊಳಿಸುತ್ತಾರೆ-

ಅಂದು ಮೂಡುವನು ದಸರೆಯ ಅರುಣ
ಅಜ್ಞಾನದ ಕತ್ತಲೆಗದು ಮರಣ
ಮಾನವ ಧರ್ಮದ ದಸರೆಯ ಮಾಡಿ
ಕನ್ನಡ ನಾಡಿನ ಹಾಡನು ಹಾಡಿ

ಹೌದು, ಮೈಸೂರು ದಸರಾ ಎಂದರೆ ಹಾಗೆಯೇ. ಅದು ತುದಿ ಮೊದಲಿಲ್ಲದ ಸಂಭ್ರಮೋಲ್ಲಾಸದ ನವರಾತ್ರಿಯ ಬೆಳಕಿನ ಮಹಾಪರ್ವ. ಅಜ್ಞಾನದ ಕತ್ತಲನ್ನು ದಹಿಸುವ ಸುಜ್ಞಾನದ ಮಹಾಮಾರ್ಗ. ಕವಿ ದಿನಕರದೇಸಾಯಿ ಅವರ ಮಾನವ ಧರ್ಮದ ದಸರೆಯ ಮಾಡಿ..... ಎಂಬ ಮಾತುಗಳ ಹಿನ್ನೆಲೆಯಲ್ಲೇ ಹೇಳುವುದಾದರೆ ಮೈಸೂರು ದಸರಾ ಭಾವೈಕ್ಯದ ಪ್ರಭಾವಳಿಯಲ್ಲಿ ಅರಳುತ್ತಾ ಬಂದಿರುವ ಈ ನೆಲದ ಮಹಾಹಬ್ಬ. ಸರ್ವ ಧರ್ಮೀಯರೂ, ಸರ್ವ ಜನಾಂಗದವರೂ ಸಂಗಮಿಸಿ ಸಂಭ್ರಮಿಸುವ ಸಂತಸದ ರಸಸಾಗರ.

ದಸರೆ, ದಸರಾ, ದಶಹರ, ದಶಹರ್..... ಮುಂತಾಗಿ ಕರೆಯಲ್ಪಡುವ ಹತ್ತು ದಿನಗಳು ಬಹು ವೈಭವೋಪೇತವಾಗಿ ಆಚರಿಸಲ್ಪಡುವ ಮಹಾ ಮಹೋತ್ಸವವಿದು. ನಾಡಷ್ಟೇ ಅಲ್ಲದೆ ರಾಷ್ಟ್ರವ್ಯಾಪಿ, ಅಷ್ಟೇ ಏಕೆ ವಿಶ್ವವ್ಯಾಪಿ ಜನಾಕರ್ಷಣೆ ಹೊಂದಿರುವ ಮೈಸೂರು ದಸರಾಕ್ಕೆ ಎರಡು ಭಾಗ ಉಂಟು. ಮೊದಲನೆಯದು ಒಂಬತ್ತು ದಿನಗಳ 'ನವರಾತ್ರಿ' ಯಾದರೆ ಎರಡನೆಯದು ಹತ್ತು ದಿನಗಳ 'ವಿಜಯದಶಮಿ'. ಮೊದಲನೆಯದು

Downloaded From:www.kpscvaani.com



ರಾಜವಂಶಸ್ಥರ ಅರಮನೆಯೊಳಗಿನ ಸಾಂಪ್ರದಾಯಕ ವಿಧಿ-ವಿಧಾನವಾದರೆ, ಎರಡನೆಯದು ಸರ್ವರಿಗೂ ಮುಕ್ತವಾಗಿ ಅನಾವರಣಗೊಳ್ಳುವ ಸಾರ್ವಜನಿಕರದು. ನಮ್ಮ ಸಾಂಸ್ಕೃತಿಕ-ಧಾರ್ಮಿಕ ಪರಂಪರೆಯ ಶಕ್ತಿರೂಪದ ಸಂಕೇತವಾದ ಈ ನವರಾತ್ರಿ ಉತ್ಸವವು ವಿಜಯದಶಮಿಯೂ ಹೌದಾದರೂ ಮೈಸೂರು ದಸರಾ ಎಂದೇ ಲೋಕಪ್ರಸಿದ್ಧಿ.

ಧರೆಗಿಳಿದ ದೇವಲೋಕದಂತೆ ಮೈಸೂರು ದಸರಾ. ದೇವೇಂದ್ರನ ಅಮರಾವತಿಯಂತೆ ಮೈಸೂರಿಗೆ ಮೈಸೂರೇ ಮಿರಮಿರನೆ ಮಿಂಚುವ ಮಹಾಸಡಗರ. ಮೈಮನ ಪುಳಕಿತವಾಗುವಂತೆ ನಿತ್ಯ ಬದುಕಿನ ಜಂಜಡ ಮರೆಸುವ ಸಂತಸದ ಆಗರ. ಕಣ್ಣು ಕೋರೈಸುವಂತೆ ಮೈಸೂರೆಂಬೋ ಸ್ವರ್ಗದ ಬಾಗಿಲು ತೆರೆದುಕೊಳ್ಳುವ ಸಂಭ್ರಮದ ಚಿತ್ತಾರ. ಮೈಸೂರು ದಸರೆಯೇ ಹಾಗೆ. ಇದಕ್ಕಾಗಿ ಇಡೀ ಮೈಸೂರು ಮದುವಣಗಿತ್ತಿಯಂತೆ ಸಿಂಗರಿಸಿಕೊಂಡು ನಿಲ್ಲುವ ಪರಿ ಇದೆಯಲ್ಲ ವಾಹ್ವ್, ಮಹದದ್ಭುತ! ಇದಕ್ಕಿಲ್ಲ ಮತ್ತೊಂದು ಸರಿಸಮ. ಅದಕ್ಕೇನೆ ಇದು ಅಷ್ಟೊಂದು ಜಗದ್ವಿಖ್ಯಾತ. ದೇಶದ ಹಲವು ಕಡೆ ದಸರಾ ಉತ್ಸವಗಳು ನಡೆಯುವುದುಂಟು. ಆದರೆ, ಮೈಸೂರು ದಸರಾದ ವೈಭವವೇ ಬೇರೆ. ಇಡೀ ವಿಶ್ವವೇ ಇತ್ತ ತಿರುಗಿ ನೋಡುವಂಥದ್ದು. ಯಾರೇ ಆಗಲಿ ಈ ಕ್ಷಣಕ್ಕೂ ಮೈಸೂರು ದಸರಾ ಎಂದಾಕ್ಷಣ ಏನೋ ಒಂಥರಾ ಆನಂದ. ಮೈಮನವೆಲ್ಲಾ ರೋಮಾಂಚನ. ಕಣ್ಮುಂದೆ ಚೆಂದದ ಮೈಸೂರು, ಅಂದದ ಅರಮನೆ, ಸುಂದರ ಚಿನ್ನದ ಅಂಬಾರಿ, ಮನಸೆಳೆವ ರತ್ನ ಸಿಂಹಾಸನ, ಸಿಂಹಾಸನಾಧೀಶರಾಗಿ ಮೆರೆದ ಮಹಾರಾಜರ ವೈಭವ-ವೈಭೋಗಗಳೆಲ್ಲವೂ ನೆನಪುಗಳ ಮೆರವಣಿಗೆಯಾಗಿ ತೇಲಿ ಬರುತ್ತದೆ. ಇದರ ಜೊತೆಗೆ ಮೈಸೂರು ದಸರೆಯ ಜಂಬೂ ಸವಾರಿ ಮತ್ತೆ ಮತ್ತೆ ಕಣ್ಣಿಗೆ ಕಟ್ಟಿದಂತೆ ನೆನಪಿನ ಪರದೆಯಲ್ಲಿ ಹಾದು ಹೋಗುತ್ತದೆ. ಇದೇ ನೋಡಿ ಮೈಸೂರು ದಸರಾದ ವೈಶಿಷ್ಟ್ಯ.

ಒಂದು ಕಾಲದಲ್ಲಿ ಆಳರಸರ ಮಹೋತ್ಸವವಾಗಿ ಮೆರೆದು ಇಂದು ಬದಲಾದ ಕಾಲಘಟ್ಟದಲ್ಲಿ ನಾಡಹಬ್ಬವೆಂದು ಕರೆಯಲ್ಪಡುತ್ತಿರುವ ಮೈಸೂರು ದಸರಾ ಮಹೋತ್ಸವಕ್ಕೆ ನಾಲ್ಕು ಶತಮಾನಗಳಿಗೂ ಹೆಚ್ಚಿನ ಇತಿಹಾಸವಿದೆ. ನಮ್ಮ ಭಾರತೀಯ ಸಂಸ್ಕೃತಿಯ ಚರಿತ್ರೆಯಲ್ಲೇ ಇಷ್ಟೊಂದು ಸುದೀರ್ಘ ಕಾಲ ನಡೆದು ಬಂದಿರುವ ಮತ್ತೊಂದು ಹಬ್ಬ ಕಾಣಸಿಗುವುದು ಬಹಳ ಅಪರೂಪ. ಮೈಸೂರಿನ ಅಧಿದೇವತೆ ಶ್ರೀಚಾಮುಂಡೇಶ್ವರಿಯ ಆರಾಧನೆಯೊಡನೆ ಆರಂಭವಾಗುವ ನವರಾತ್ರಿ ವೈಭವದ ವಿಜಯ ದಶಮಿಯ ಈ ಮೈಸೂರು ದಸರಾ ಮಹೋತ್ಸವಕ್ಕೆ ಅದರದೇ ಆದ ಐತಿಹಾಸಿಕ ಪರಂಪರೆ ಹಾಗೂ ಸಾಂಸ್ಕೃತಿಕ ಹಿರಿಮೆಯುಂಟು. ಕರ್ನಾಟಕದ ಇತಿಹಾಸದಲ್ಲಿ ಸುವರ್ಣ ಯುಗವನ್ನು ಸೃಷ್ಟಿಸಿ ವಿಜಯನಗರ ಸಾಮ್ರಾಜ್ಯ ಕಟ್ಟಿ ವೈಭವದಿಂದ ಮೆರೆದವರು ವಿಜಯನಗರ ಅರಸರು. ಅವರ ಕಾಲದಲ್ಲಿ ಆರಂಭಗೊಂಡು ಆಚರಿಸಲ್ಪಡುತ್ತಿದ್ದ ನವರಾತ್ರಿ ಉತ್ಸವದ ವಿಜಯ ದಶಮಿಯ ದಸರಾ ಹಬ್ಬಕ್ಕೆ ಇನ್ನೂ ಹೆಚ್ಚಿನ ವೈಭವದ ವರ್ಣಮಯ ಕಳೆ ತಂದುಕೊಟ್ಟವರು ವಿಜಯನಗರ ಅರಸರಲ್ಲೇ ಅತ್ಯಂತ ಪ್ರಖ್ಯಾತರಾಗಿದ್ದ ಶ್ರೀ ಕೃಷ್ಣದೇವರಾಯರು. ಆಗ ಹಂಪೆಯಲ್ಲಿರುವ ಮಹಾನವಮಿ ದಿಬ್ಬ ಮತ್ತು ವಿಜಯ ವಿಠಲ ದೇವಾಲಯಗಳು ಈ ಮಹೋತ್ಸವದ ಕೇಂದ್ರಗಳಾಗಿದ್ದವು. ತಮ್ಮ ಸಾಮ್ರಾಜ್ಯದ ಶಕ್ತಿ-ಸಾಮರ್ಥ್ಯ, ಸಂಪತ್ತು-ಸಮೃದ್ಧಿ, ವೈಭವ-ವೈಭೋಗ, ವೀರತ್ವ-ಧೀರತ್ವ, ಕಲೆ-ಸಾಹಿತ್ಯ, ಸಂಗೀತ-ನೃತ್ಯ, ಸಂಸ್ಕೃತಿ-ಸಂಪನ್ನತೆ ..... ಹೀಗೆ ಸಕಲ ವಿಧಗಳಲ್ಲೂ ತಮ್ಮ ಹಿರಿಮೆ-ಗರಿಮೆಗಳನ್ನು ತೋರ್ಪಡಿಸಿಕೊಳ್ಳುವ ಹಿನ್ನೆಲೆಯಲ್ಲಿ ಬಹುಮುಖ್ಯವಾಗಿ ವಿಜಯದ ದ್ಯೋತಕವಾಗಿ ವಿಜಯದಶಮಿಯ ಈ ದಸರಾ ಮಹೋತ್ಸವವನ್ನು ವಿಜಯನಗರ ಅರಸರು ಆಚರಿಸುತ್ತಿದ್ದರು. ಈ ಉತ್ಸವವನ್ನು ವೀಕ್ಷಿಸಲು ದೇಶ-ವಿದೇಶಗಳ ಗಣ್ಯಾತಿಗಣ್ಯರು, ಪ್ರವಾಸಿಗರು ಇಲ್ಲಿಗೆ ಭೇಟಿ ನೀಡಿದ ದಾಖಲೆಗಳುಂಟು. ಅಷ್ಟೇ ಅಲ್ಲ 11ನೇ ಶತಮಾನದಲ್ಲೇ ಇಲ್ಲಿಗೆ ಭೇಟಿ ನೀಡಿದ್ದ ವಿದೇಶಿ ಪ್ರವಾಸಿಗರಾದ ಅಲ್ಬೆರೋನಿ, 15-16 ನೇ ಶತಮಾನದಲ್ಲಿ ಬಂದಿದ್ದ ಪರ್ಷಿಯಾದ ಅಬ್ದುಲ್ ರಜಾಕ್, ಇಟಲಿಯ ನಿಕೋಲಕೊಂಟಿ, ಪೋರ್ಚುಗೀಸಿನ ಡೊಮಿಂಗೋಪಾಯಸ್ (1520-1522) ಮೊದಲಾದವರು ವಿಜಯನಗರ ಸಾಮ್ರಾಜ್ಯದ ವೈಭವೋಪೇತವಾದ ಈ ಮಹೋತ್ಸವವನ್ನು ಕೊಂಡಾಡಿ ತಮ್ಮ

Downloaded From:www.kpscvaani.com

ಪ್ರವಾಸ ಕಥನಗಳಲ್ಲಿ ದಾಖಲಿಸಿದ್ದಾರೆ.

ಇಂಥ ವಿಜಯದಶಮಿಯ ದಸರಾ ಮಹೋತ್ಸವವನ್ನು ವಿಜಯನಗರ ಸಾಮ್ರಾಜ್ಯದ ಪತನದ ನಂತರ ಮುಂದುವರಿಸಿಕೊಂಡು ಬಂದವರು ಯದುವಂಶದ ಮೈಸೂರು ಒಡೆಯರು. ಇವರಲ್ಲಿನ 9ನೇ ಆಳ್ವಿಕೆಯ ರಾಜ ಒಡೆಯರು (1578–1617) ಅಂದು ತಮ್ಮ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣದಲ್ಲಿ 1610ರಲ್ಲಿ ವಿಜಯನಗರದ ರಾಜಪರಂಪರೆಯಂತೆ ನವರಾತ್ರಿ ಉತ್ಸವದ ವಿಜಯದಶಮಿಯ ದಸರಾ ಮಹೋತ್ಸವವನ್ನು ಮೊದಲಿಗೆ ಆರಂಭಿಸಿದರು. ಥೇಟ್ ವಿಜಯನಗರ ಅರಸರ ಸಂಪ್ರದಾಯದಂತೆಯೇ ದಸರಾಕ್ಕೆ ಸಂಬಂಧಿಸಿದ ಎಲ್ಲಾ ರೀತಿಯ ಶಾಸ್ತ್ರ ಹಾಗೂ ವಿಧಿ–ವಿಧಾನಗಳನ್ನು ಅತ್ಯಂತ ಶ್ರದ್ಧಾ ಭಕ್ತಿಯಿಂದ ಅಳವಡಿಸಿಕೊಂಡರು. ಈ ಪ್ರಕಾರ ಅಶ್ವಯುಜ ಶುದ್ಧ ಪ್ರಥಮೆಯಂದು ನವರಾತ್ರಿ ಉತ್ಸವ ಶುರುವಾಗಿ ಮಹಾನವಮಿಯ ಕಡೇ ದಿನದವರೆವಿಗೂ ಪ್ರತಿನಿತ್ಯ ಪೂಜೆ–ಪುನಸ್ಕಾರ, ಪೂರ್ವಾಹ್ನ ಮತ್ತು ಮಧ್ಯಾಹ್ನ ಸಿಂಹಾಸನಾರೋಹಣ, ಒಡ್ಡೋಲಗ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಬೇಕೆಂದು ಪಕ್ಕಾ ವಿಧೇಯಕವನ್ನೇ ಮಾಡಿ ದಸರಾ ಹಬ್ಬವನ್ನು ಆಚರಣೆಗೆ ತಂದರು.

1798 ರವರೆಗೂ ಮೈಸೂರು ರಾಜ್ಯದ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣದಲ್ಲೇ ದಸರಾ ನಡೆಯುತ್ತಿತ್ತು. ಹೈದರಾಲಿ ಮತ್ತು ಟಿಪ್ಪುವಿನ ಆಳ್ವಿಕೆಯ ನಂತರ ಮತ್ತೆ ಅಧಿಕಾರಕ್ಕೆ ಬಂದ ಯದುಕುಲತಿಲಕ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ಆಳ್ವಿಕೆ ಕಾಲಕ್ಕೆ (1799–1868) ರಾಜ್ಯದ ರಾಜಧಾನಿ ಶ್ರೀರಂಗಪಟ್ಟಣದಿಂದ 1799 ಜೂನ್ 30 ರಂದು ಮೈಸೂರಿಗೆ ವರ್ಗವಾಯಿತು. ಅಲ್ಲಿಂದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಅತೀವ ಕಾಳಜಿಯಿಂದ ಮತ್ತಷ್ಟು ವಿಜೃಂಭಣೆಯಿಂದ 1799 ರ ಆಕ್ಟೋಬರ್‌ನಲ್ಲಿ ಮೈಸೂರಿನಲ್ಲಿ ದಸರಾ ಪ್ರಾರಂಭವಾಗಿ ಮೈಸೂರು ದಸರಾ ಎಂದುವಿಶ್ವವಿಖ್ಯಾತಿಯಾಯಿತು. ವಿಜಯದಶಮಿಯಂದು ಮಧ್ಯಾಹ್ನ ಮಹಾರಾಜರು ಅಲಂಕೃತ ಆನೆಯ ಮೇಲಿನ ಚಿನ್ನದ ಅಂಬಾರಿಯನ್ನೇರಿ ವೈಭವದ ಜಂಬೂಸವಾರಿಯಲ್ಲಿ ಅಂಬಾ ವಿಲಾಸ ಅರಮನೆಯಿಂದ ಹೊರಟು ಬನ್ನಿಮಂಟಪಕ್ಕೆ ತೆರಳಿ ಬನ್ನಿಪೂಜೆ ಮಾಡಿ ಧ್ವಜ ಹಾರಿಸಿ, ಸೈನಿಕರಿಂದ ವಂದನೆ ಸ್ವೀಕರಿಸಿ, ನಂತರ ತಾವು ಬಂದ ರಾಜ ಮಾರ್ಗದಲ್ಲೇ ಅರಮನೆಗೆ ವಾಪಸ್ಸಾಗುವ ಈ ಜಂಬೂ ಸವಾರಿಯೇ ಮೈಸೂರು ದಸರೆಯ ಪ್ರಮುಖ ಆಕರ್ಷಣೆ.



ಈ ರೀತಿ ರಾಜ ಒಡೆಯರಿಂದ ಶ್ರೀರಂಗಪಟ್ಟಣದಲ್ಲಿ ಪ್ರಾರಂಭವಾದ ವಿಜಯನಗರ ಪರಂಪರೆಯ ನವರಾತ್ರಿ ಪೂಜೆಯ ದಸರಾ ಮಹೋತ್ಸವ ಮೈಸೂರಿನಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಮತ್ತಷ್ಟು ಭವ್ಯಗೊಂಡು, ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆ (1902–1940) ಕಾಲಕ್ಕೆ ಮಗದಷ್ಟು ವೈಭವದ ಉತ್ತುಂಗಕ್ಕೇರಿ ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವವಾಗಿ ವಿಜೃಂಭಿಸಿತು. ನಾಲ್ವಡಿಯವರ ನಂತರ ಯದುವಂಶದ 25ನೆಯ ಹಾಗೂ ಕಟ್ಟಕಡೆಯ ದೊರೆಯಾಗಿ ಅಧಿಕಾರಕ್ಕೆ ಬಂದ ಶ್ರೀ ಜಯಚಾಮರಾಜ ಒಡೆಯರ್ ಆಳ್ವಿಕೆ ಕಾಲದಲ್ಲಿ (1940–1947) ಇನ್ನಷ್ಟು ವೈಭವ ಪಡೆದುಕೊಂಡು ಜಾಗತಿಕ ಆಕರ್ಷಣೆ ಪಡೆಯಿತು. ಆದರೆ, 1947 ಆಗಸ್ಟ್ 15 ರಂದು ಭಾರತ ಸ್ವಾತಂತ್ರ್ಯಗಳಿಸಿದ ನಂತರ ರಾಜ ಮಹಾರಾಜರ ಸಂಸ್ಥಾನಗಳೆಲ್ಲವೂ ಭಾರತ ಸರ್ಕಾರದಲ್ಲಿ ವಿಲೀನವಾದವು. ಆದರೂ ಸಹ ಯಾವುದೇ ಅಡ್ಡಿಯಿಲ್ಲದೆ ಮೈಸೂರು ದಸರಾ ಆಚರಣೆ ನಡೆದುಕೊಂಡು ಬರುತ್ತಿತ್ತು. ಶ್ರೀ ಜಯಚಾಮರಾಜ ಒಡೆಯರು ರಾಜ ಪ್ರಮುಖರಾಗಿ ಹಿಂದಿನಂತೆ ಜಂಬೂಸವಾರಿಯಲ್ಲಿ ಭಾಗವಹಿಸುತ್ತಿದ್ದರು. 1962ರಲ್ಲಿ ರಾಜಧನ ಮತ್ತು ರಾಜತ್ವ ರದ್ದಾದಾಗ ಮೂರ್ನಾಲ್ಕು ವರ್ಷಗಳ ಕಾಲ ದಸರಾ ನಿಂತು ಹೋಗಿತ್ತು. ಆದರೆ, ಮೈಸೂರಿನ ಪ್ರಮುಖ ಕೈಗಾರಿಕೋದ್ಯಮಿ ಎಫ್.ಕೆ. ಇರಾನಿ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿ ಸರಳವಾಗಿ ದಸರಾ ಹಬ್ಬವನ್ನು ನಡೆಸಿಕೊಂಡು ಬರಲಾಯಿತು. 1980ರಲ್ಲಿ ಆರ್. ಗುಂಡೂರಾವ್ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾದಾಗ ಭವ್ಯ ಪರಂಪರೆಯ ಮೈಸೂರು ದಸರಾ ಮಹೋತ್ಸವವನ್ನು ಬಹು ವಿಜೃಂಭಣೆಯಿಂದ ಆಚರಿಸಲು ನಿರ್ಧರಿಸಿ ಅದರ ಉಸ್ತುವಾರಿಯನ್ನು ಸರ್ಕಾರವೇ ವಹಿಸಿಕೊಂಡಿತು. ಹಾಗಾಗಿ

Downloaded From:www.kpscvaani.com

ಅಂದಿನಿಂದ ಇಂದಿನ ತನಕವೂ ನಾಡಹಬ್ಬವಾಗಿ ರಾಜ್ಯ ಸರ್ಕಾರದಿಂದಲೇ ಪ್ರತಿವರ್ಷ ಮೈಸೂರು ದಸರಾ ನಡೆಯುತ್ತಾ ಬಂದಿದೆ.

ರಾಜ ಪ್ರತ್ಯಕ್ಷ ದೈವವೆಂಬ ಭಾವನೆಯಿದ್ದ ಆ ಕಾಲದಲ್ಲಿ ಆಳರಸರದೇ ದರ್ಬಾರು. ಅಂದು ಅಂಬಾರಿಯಲ್ಲಿ ಸ್ವತಃ ಮಹಾರಾಜರೇ ಕೂರುತ್ತಿದ್ದರೆ ಇಂದು ಮೈಸೂರಿನ ಅಧಿದೇವತೆ ನಾಡದೇವಿ ಶ್ರೀಚಾಮುಂಡೇಶ್ವರಿ ಅಂಬಾರಿಯಲ್ಲಿ ಅಲಂಕೃತವಾಗಿ ಪೂಜಿಸಲ್ಪಡುತ್ತಾಳೆ. 750 ಕೆ.ಜಿ. ಭಾರದ ಬಂಗಾರದ ಅಂಬಾರಿಯಲ್ಲಿ ತಾಯಿ ಚಾಮುಂಡೇಶ್ವರಿಯ ಸುಂದರ ಮೂರ್ತಿಯನ್ನು ಹೊತ್ತ ಗಜರಾಜನ ಗಾಂಭೀರ್ಯ ನಡಿಗೆಯಲ್ಲಿ ಮೈಸೂರು ರಾಜ ಬೀದಿಯಲ್ಲಿ ಸಾಗುವ ಮೈಸೂರು ದಸರೆಯ ಜಂಬೂ ಸವಾರಿಯನ್ನು ನೋಡುವುದೇ ಒಂದು ಮಹಾಹಬ್ಬ. ಹಾಗಾಗಿ ಈ ಮಹಾದೃಶ್ಯ ಕಾವ್ಯವನ್ನು ಕಣ್ತುಂಬಿಕೊಳ್ಳಲು ದೇಶ ವಿದೇಶಿಯರೆಲ್ಲಾ ಸಾಗರದೋಪಾದಿಯಲ್ಲಿ ಮೈಸೂರಿನತ್ತ ಹರಿದು ಬರುತ್ತಾರೆ. ವಿಜಯದಶಮಿಯಂದು ಈ ಚಿನ್ನದ ಅಂಬಾರಿಯನ್ನು ದರ್ಶಿಸುವುದು ಮಹಾ ಪುಣ್ಯವೆಂಬ ಭಾವನೆ ಇಲ್ಲಿ ಬೇರೂರಿರುವುದರಿಂದ ಇದಕ್ಕೆ ದೈವೀಕಶಕ್ತಿಯದ್ದೆಂದು ಹೆಚ್ಚಿನ ಮಹತ್ವವುಂಟು.

ವಿಜಯದಶಮಿ ವೈಭವದ ನವರಾತ್ರಿಯ ಮೈಸೂರು ದಸರಾ ಎಂದರೆ ಅದು ಜಂಬೂ ಸವಾರಿಯಷ್ಟೇ ಅಲ್ಲ. ಸಮಸ್ತ ನಾಡಿನ ಸಾಂಸ್ಕೃತಿಕ ಸಿರಿ ಸಂಪತ್ತಿನ ಮತ್ತು ನಾಡನ್ನಾಳಿದ ರಾಜ ಪರಂಪರೆಯ ಅನಾವರಣ. ಮೈಸೂರು ದಸರಾ ಉತ್ಸವದ ಉದ್ದಕ್ಕೂ ಇದರದ್ದೇ ಮಹಾದರ್ಶನ. ಆಶ್ವಯುಜ ಶುದ್ಧ ಪ್ರಥಮೆಯಂದು ದೇವಿ ಚಾಮುಂಡಿ ಪೂಜೆಯೊಡನೆ ಚಾಮುಂಡಿ ಬೆಟ್ಟದಲ್ಲಿ ನವರಾತ್ರಿ ಉತ್ಸವ ಆರಂಭಗೊಳ್ಳುವ ಮೊದಲ ದಿನದಿಂದ ಹಿಡಿದು ಮಹಾನವಮಿಯ ಒಂಭತ್ತು ದಿನಗಳೂ ದಸರಾ ಸಂಗೀತೋತ್ಸವ, ದಸರಾ ಚಲನಚಿತ್ರೋತ್ಸವ, ದಸರಾ ಕಾವ್ಯೋತ್ಸವ, ದಸರಾ ರಂಗೋತ್ಸವ, ದಸರಾ ಕ್ರೀಡೋತ್ಸವ, ಯುವ ದಸರಾ, ಯೋಗ ದಸರಾ, ಗ್ರಾಮೀಣ ದಸರಾ, ಜನಪದ ದಸರಾ, ರೈತ ದಸರಾ, ಮಹಿಳಾ ಮತ್ತು ಮಕ್ಕಳ ದಸರಾ, ದಸರಾ ಗೊಂಬೆ ಪ್ರದರ್ಶನ, ದಸರಾ ವೈಮಾನಿಕ ಪ್ರದರ್ಶನ, ದಸರಾ ಆಹಾರ ಮೇಳ..... ಹೀಗೆ ಮೈಸೂರಿನ ತುಂಬಾ ವಿವಿಧ ದಸರಾ ಉತ್ಸವಗಳ, ಮೇಳಗಳ, ಪ್ರದರ್ಶನಗಳ ಮಹಾ ಸುಗ್ಗಿಯೇ ಜರುಗುತ್ತದೆ. ನವರಾತ್ರಿಯ ಸಮಾರೋಪವಾಗಿ ವಿಜಯ ದಶಮಿಯಂದು ರಾಜ್ಯದ ಮುಖ್ಯಮಂತ್ರಿಯಿಂದ ನಂದಿ ಕಂಬ ಪೂಜೆಯೊಡನೆ ಆನೆ ಮೇಲಿನ ಅಂಬಾರಿಯಲ್ಲಿ ಆಸೀನಳಾಗಿರುವ ತಾಯಿ ಚಾಮುಂಡೇಶ್ವರಿ ಮೂರ್ತಿಗೆ ಪುಷ್ಪಾರ್ಚನೆ ಮಾಡಿ ಚಾಲನೆಗೊಂಡು ನಡೆಯುವ ಜಂಬೂ ಸವಾರಿಯ ಮಹಾ ಮೆರವಣಿಗೆಯಲ್ಲಂತೂ ಇಡೀ ನಾಡಿನ ಸಾಂಸ್ಕೃತಿಕ ಸಂಪತ್ತು ತೆರೆದುಕೊಳ್ಳುತ್ತದೆ. ಮಿಂಚಿ ಮೆರೆಯುತ್ತದೆ.

ನಂದೀಧ್ವಜ ಕುಣಿತ, ನಾದಸ್ವರ ವಾದನ, ಪ್ಯಾಲೇಸ್ ಬ್ಯಾಂಡ್, ಪೊಲೀಸ್ ಬ್ಯಾಂಡ್, ಆನೆ ಸಾರೋಟು, ಕುದುರೆ ಸಾರೋಟು, ಪಿರಂಗಿಗಳು, ಬೆಳ್ಳಿ ರಥ, ವಿವಿಧ ಪಲ್ಲಕ್ಕಿಗಳು, ಭಜನೆ ಮೇಳ, ಕರಗ, ವೀರಭದ್ರನ ಕುಣಿತ, ಕೀಲು ಕುದುರೆ, ಮಲ್ಲಗಂಬ, ವೇಷಗಾರರು, ಅಲಾವಿ ಕುಣಿತ, ವೀರಗಾಸೆ, ಝೂಂಜ್ ಪಥಕ್, ಗೊರವರ ಕುಣಿತ, ಜಗ್ಗಲಗೆ ಮೇಳ, ಹೆಜ್ಜೆ ಮೇಳ, ಗಾರುಡಿಗೊಂಬೆ, ಟಿಬೇಟಿಯನ್ ನೃತ್ಯ, ಚಿಟ್ ಮೇಳ, ಕೋಲಾಟ, ಮಲೆನಾಡು ಸುಗ್ಗಿಕುಣಿತ, ಕೊಡವ ಕುಣಿತ, ಪೂಜಾ ಕುಣಿತ, ಕಂಸಾಳೆ, ತಮಟೆ ವಾದನ, ಮರಗಾಲು ಕುಣಿತ, ಸೋಮನಕುಣಿತ, ಚಂಡೆ ಮೇಳ, ಹಾಲಕ್ಕಿ ಸುಗ್ಗಿ ಕುಣಿತ, ನಗಾರಿ ಮೇಳ, ಪಟಾ ಕುಣಿತ, ಕೊಂಬು ಕಹಳೆ, ಕರಡಿ ಮಜಲು, ಪಾಳೇಗಾರನ ವೇಷ, ದೊಣ್ಣೆವರಸೆ, ಕಂಗಿಲು ಕುಣಿತ, ಯಕ್ಷಗಾನ ವೇಷಧಾರಿಗಳು, ಜಡೆಕೋಲಾಟ, ಧ್ವಜ ಕುಣಿತ, ಚಿಟಿಕಿ ಭಜನೆ, ಒನಕೆ ನೃತ್ಯ, ಭೂತ ನೃತ್ಯ ಇವುಗಳೆಲ್ಲದರ ಮಹಾ ಸಂಗಮವಾಗಿ ರಾಜ್ಯದ ಪ್ರತಿಯೊಂದು ಜಿಲ್ಲೆಯನ್ನೂ ಪ್ರತಿನಿಧಿಸುವ 40ಕ್ಕೂ ಹೆಚ್ಚು ವೈವಿಧ್ಯಮಯ ಸ್ತಬ್ದಚಿತ್ರಗಳೊಡನೆ ಮೈಸೂರಿನ ಸಯ್ಯಾಜಿ ರಾವ್ ರಸ್ತೆಯಲ್ಲಿ ಸಾಗುವ 'ಮೈಸೂರು ದಸರಾ' ಎಂಬ ಈ ಮಹಾ ಮೆರವಣಿಗೆ ಲಕ್ಷಾಂತರ ಜನರ ಕಣ್ಮನ ಸೆಳೆಯುತ್ತಾ ನಗರದಿಂದ ನಾಲ್ಕೈದು ಕಿ.ಮೀ. ದೂರವಿರುವ ಬನ್ನಿಮಂಟಪ ತಲುಪುತ್ತದೆ.

ಆಕರ್ಷಕ ಟಾರ್ಚ್‌ಲೈಟ್ ಪೆರೇಡ್: ಆಗ ಅಲ್ಲಿ ಪೊಲೀಸ್ ದಳದಿಂದ ಮನಮೋಹಕ, ಬಹುರೋಚಕವಾದ ಟಾರ್ಚ್‌ಲೈಟ್ ಪೆರೇಡ್ (ಪಂಜಿನ ಕವಾಯಿತು)



Downloaded From:www.kpscvaani.com



ಆರಂಭವಾಗುತ್ತದೆ. ಹಿಂದೆ ಮಹಾರಾಜರು ಸೈನಿಕರಿಂದ ಧ್ವಜ ವಂದನೆ ಸ್ವೀಕರಿಸುತ್ತಿದ್ದ ಮಾದರಿಯಲ್ಲೇ ಈಗ ಟಾರ್ಚ್ಲೈಟ್ ಪೆರೇಡ್ನಲ್ಲಿ ರಾಜ್ಯದ ರಾಜ್ಯಪಾಲರು ಧ್ವಜವಂದನೆ ಗೌರವ ಸ್ವೀಕರಿಸುತ್ತಾರೆ. ಟಾರ್ಚ್ಲೈಟ್ ಪೆರೇಡ್‌ನ ಚಿತ್ತಾಕರ್ಷಕ ಸಾಹಸಮಯ ವರ್ಣ ದೃಶ್ಯಗಳಂತೂ ವರ್ಣಿಸಲಸದಳ. ಲೇಸರ್ ಪ್ರದರ್ಶನ, ಅಶ್ವಾರೋಹಿಗಳ ಸಾಹಸ ಕಸರತ್ತು, ಹೊನಲು ಬೆಳಕಿನ ಮಾಯಾಲೋಕ, ಬಣ್ಣ ಬಣ್ಣದ ಬಾಣ ಬಿರುಸುಗಳ ಯಕ್ಷಲೋಕಗಳೆಲ್ಲವೂ ಒಮ್ಮೆಗೇ ಸೃಷ್ಟಿಗೊಂಡು ಇವುಗಳೊಂದಿಗೆ ಹತ್ತು ದಿನಗಳ ಒಟ್ಟಾರೆ ದಸರಾ ಕಾರ್ಯಕ್ರಮಗಳಿಗೆ ಮಂಗಳ ಹಾಡಲಾಗುತ್ತದೆ. ಈ ದಸರಾ ಸಂದರ್ಭದಲ್ಲಿ ಮೈಸೂರು ನಗರದ ದೊಡ್ಡಕೆರೆ ಮೈದಾನದಲ್ಲಿ ಸೃಷ್ಟಿಗೊಳ್ಳುವ 'ದಸರಾ ವಸ್ತು ಪ್ರದರ್ಶನ' ಕೂಡ ಪ್ರವಾಸಿಗರನ್ನು ಆಕರ್ಷಿಸುವ ಕಿನ್ನರ ಲೋಕವಾಗಿ ಕಂಗೊಳಿಸುತ್ತದೆ. ಹಾಗೆಯೇ ಇವೆಲ್ಲಕ್ಕೂ ಕೇಂದ್ರ ಬಿಂದುವಾದ ಜಗದ್ವಿಖ್ಯಾತ ಅಂಬಾ ವಿಲಾಸ ಅರಮನೆಯೊಳಗಿನ ದರ್ಬಾರ್ ಹಾಲ್‌ನಲ್ಲಿ ಇದೇ ನವರಾತ್ರಿಯ ವೇಳೆ ರಾಜವಂಶಸ್ಥ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ರತ್ನಖಚಿತ ಸ್ವರ್ಣ ಸಿಂಹಾಸನಾರೂಢರಾಗಿ ಖಾಸಗಿ ದರ್ಬಾರ್ ನಡೆಸುತ್ತಾರೆ. ಬೇರೆಲ್ಲೂ ಕಾಣಸಿಗದ, ಎಲ್ಲರಿಗೂ ಪ್ರವೇಶವಿರದ ಜಗತ್ತಿನ ಬಹು ಅಪರೂಪದ ಖಾಸಗಿ ದರ್ಬಾರ್ ಇದು!

ಖಾಸಗಿ ದರ್ಬಾರ್ : ಅರಮನೆ ಸಂಪ್ರದಾಯದಂತೆ ಪೂಜಾಕಾರ್ಯವನ್ನು ನೆರವೇರಿಸಿ ರಾಜವಂಶಜ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ನವರಾತ್ರಿ ಸಂದರ್ಭದಲ್ಲಿ ರತ್ನ ಖಚಿತ ಚಿನ್ನದ ಸಿಂಹಾಸನವನ್ನೇರಿ ದರ್ಬಾರ್ ನಡೆಸುವ ಮೂಲಕ ಅರಸರ ಗತಕಾಲದ ವೈಭವವನ್ನು ಮರುಕಳಿಸಸುವಂತೆ ಮಾಡುತ್ತಾರೆ, ಇದು ಹೆಸರೇ ಹೇಳುವಂತೆ ರಾಜವಂಶಸ್ಥರಿಗೆ ಮಾತ್ರ ಮೀಸಲಾದ ಖಾಸಗಿ ದರ್ಬಾರು.

ಒಡೆಯರ್ ಕುಟುಂಬದವರು, ಬಂಧು ಮಿತ್ರರು ಮಾತ್ರ ಪಾಲ್ಗೊಳ್ಳುವ ಇಲ್ಲಿಗೆ ಗಣ್ಯವ್ಯಕ್ತಿಗಳಿಗೆ ಮಾತ್ರ ಪ್ರವೇಶವಿರುತ್ತದೆ.

ನವರಾತ್ರಿಯ ಮೊದಲ ದಿನದಿಂದಲೇ ಮಡದಿ ತ್ರಿಷಿಕಾ ಕುಮಾರಿ ಸಿಂಗ್ ಸಮೇತ ಕಂಕಣಧಾರಿಯಾಗಿ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಅರಮನೆಯ ಎಲ್ಲಾ ರೀತಿಯ ಪೂಜೆ ಪುನಸ್ಕಾರ ವಿಧಿ-ವಿಧಾನಗಳಿಗೆ ಒಳಪಟ್ಟ ಮಡದಿ ಹಾಗೂ ಮುತ್ತೈದೆಯರಿಂದ ಆರತಿ ಮತ್ತು ಪಾದ ಪೂಜೆ ಮಾಡಿಸಿಕೊಂಡು ಎಲ್ಲಾ ಕಠಿಣ ವ್ರತಗಳನ್ನೂ ಮಾಡಿ ಮಹಾರಾಜರಾಗಿ ಸಿಂಹಾಸನವನ್ನೇರುವರು. ಈ ಸಂದರ್ಭದಲ್ಲಿ ಹೊಗಳು ಭಟ್ಟರ ಬಹು ಪರಾಕ್‌ಗಳ ಸುರಿಮಳೆಯೇ ಆಗುವುದು. ಹೀಗೆ ನವರಾತ್ರಿ ಪೂರ್ತಿ ಪ್ರತಿದಿನ ಸಂಜೆ ವೇಳೆ ಜಗಮಗಿಸುವ ಸಿಂಹಾಸನದ ಮೇಲೆ ರಾಜವಂಶಸ್ಥರ ಸಾಂಪ್ರಾದಯಿಕ ಖಾಸಗಿ ದರ್ಬಾರ್ ಜರುಗುವುದು.

ಮೈಸೂರು ಅರಸರ ಕುಲದೇವತೆ ಚಾಮುಂಡೇಶ್ವರಿಯ ವಿವಿಧ ದಿವ್ಯ ಸ್ವರೂಪಗಳ ಆರಾಧನೆ, ವಿವಿಧ ದೇವತೆಗಳ ಪ್ರಜಾನುಷ್ಠಾನ, ಚಂಡಿಕಾಹೋಮ, ದೇವಿಭಾಗವತ ಪಾರಾಯಣ, ರಾಮಾಯಣ ಪಾರಾಯಣ, ಸಿಂಹಾಸನಪೂಜೆ, ನಿತ್ಯ ರಾಜ ದರ್ಬಾರು, ಪರಾಕುಗಳು,

ಆಯುಧಪೂಜೆ, ವ್ರಜಮುಷ್ಟಿಕಾಳಗ, ಶಮೀಪೂಜೆ, ಮುಂತಾದವನ್ನೆಲ್ಲಾ ಅತ್ಯಂತ ಶ್ರದ್ಧಾಭಕ್ತಿಯಿಂದ ಶಾಸ್ತ್ರೋಕ್ತವಾಗಿ ಖಾಸಗಿ ದರ್ಬಾರ್ನಲ್ಲಿ ನೆರೆವೇರಿಸುವರು, ಹಾಗೆಯೇ ಈ ಸಂದರ್ಭದಲ್ಲಿ ವಿಶೇಷವಾಗಿ ಅಲಮೇಲಮ್ಮನ ಶಾಪ ಶಮನಕ್ಕಾಗಿ ನವಮಿಯ ರಾತ್ರಿ ಅಲಮೇಲಮ್ಮನನ್ನು ಪೂಜಿಸಲಾಗುವುದು. ಈ ಖಾಸಗಿ ದರ್ಬಾರ್ನ ಖದರ್ಗೆ ಮತ್ತೊಂದಿಲ್ಲ ಸಮ, ಇದರ ಮುಖ್ಯ ಆಕರ್ಷಣೆ ಯದುವಂಶಸ್ಥರು ಅಲಂಕರಿಸುವ ಚಿನ್ನದ ಸಿಂಹಾಸನ.

ರತ್ನ ಖಚಿತ ಸ್ವರ್ಣ ಸಿಂಹಾಸನ: ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರನ್ನು ಉದ್ದೇಶಿಸಲಾದ ಒಂದು ಶಾಸನದ ಪ್ರಕಾರ ಮೈಸೂರು ಅರಸರಿಗೆ ಪರಂಪರಾಗತವಾಗಿ ಬಂದ ಈ ರತ್ನ ಖಚಿತ ಸುವರ್ಣ ಸಿಂಹಾಸನವೊಂದು ಅಪೂರ್ವ ಕಲಾಕೃತಿ. ದಸರೆಯ ಸಂದರ್ಭದಲ್ಲಿ ಮಾತ್ರ ಸಾರ್ವಜನಿಕರ ವೀಕ್ಷಣೆಗೆ ತೆರೆದಿಡಿವ ಬಂಗಾರದ ಈ ದಿವ್ಯ ಪುತ್ಥಳಿಯನ್ನು ಮಿಕ್ಕ ದಿನಗಳಲ್ಲಿ ಕಾಣಲಾಗುವುದಿಲ್ಲ. ದಸರಾ ಸಮಯದಲ್ಲಿ ಕೆಲವು ಸಾಂಪ್ರದಾಯಿಕ ಪೂಜೆ ಪುನಸ್ಕಾರದೊಂದಿಗೆ ಜೋಡಿಸುವ ಈ ಸಿಂಹಾಸನವನ್ನು ಆ ನಂತರ ಕಳಚಿ ಸಕಲ ಭದ್ರತೆಗಳೊಂದಿಗೆ ಸಂರಕ್ಷಿಸಿಡಲಾಗುವುದು. ಪ್ರಪಂಚದಲ್ಲೇ ಕಾಣಸಿಗದಂತಹ ಮಹದದ್ಭುತ ಸಿಂಹಾಸನವಿದು. ಒಂದು ನಂಬಿಕೆಯ ಪ್ರಕಾರ ಇದು ಮಹಾಭಾರತದ ಪಾಂಡವರಿಗೆ ಸೇರಿದ್ದೆಂದು ಹೇಳಲಾಗುತ್ತದೆ. ಈ ಸಿಂಹಾಸನವನ್ನು ದಂತದ ಕುಸುರಿ ಕಲೆಯಿಂದ ಅಲಂಕರಿಸಿ ಚಿನ್ನದ ತಗಡುಗಳನ್ನು

Downloaded From:www.kpscvaani.com

ತೊಡಿಸಲಾಗಿದೆ. ಇದಕ್ಕೆ ಆಮೆಯ ಆಕಾರದ ಆಸನವಿದ್ದು ಯಾಳಿಗಳು, ಬಳ್ಳಿಗಳು, ಬಾಳೆಯ ಕಂಬ, ಮಾವಿನ ಎಲೆ, ಆನೆ, ಕುದುರೆ, ರಥ, ಚತುರಂಗದಳ, ತ್ರಿಮೂರ್ತಿಗಳು, ಅಷ್ಟದಿಕ್ಪಾಲಕರು, ನಾಗದೇವತೆ ಮುಂತಾದವೆಲ್ಲವನ್ನು ಚಿನ್ನದ ಚಿತ್ತಾರದಲ್ಲಿ ಬಿಡಿಸಲಾಗಿದೆ. ಸಿಂಹಾಸನ ಏರಲು ಏಳು ಮೆಟ್ಟಿಲುಗಳಿದ್ದು ಎರಡೂ ಕಡೆಗಳಲ್ಲೂ ರಮಣೀಯ ಸ್ತ್ರೀಪುತ್ಥಳಿಗಳಿದ್ದು ಸಿಂಹಾಸನದ ಮೇಲೆ ಮೈಸೂರು ರಾಜಲಾಂಛನವಾದ ಗಂಡಭೇರುಂಡವನ್ನು ಮುತ್ತಿನ ಹರಳುಗಳಿಂದ ನಿರ್ಮಿಸಿದ್ದು ಚಿನ್ನದ ಛತ್ರಿಯೊಂದನ್ನು ತುದಿಯಲ್ಲಿ ಅಳವಡಿಸಲಾಗಿದೆ. 1859 ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಬರೆದಿರುವ "ದೇವತಾನಾಮ ಕುಸುಮಾಂಜರಿ" ಕೃತಿಯಲ್ಲಿ ಈ ಭವ್ಯ ಸಿಂಹಾಸನದ ವಿವರಗಳಿವೆ.

ಶಮಿವೃಕ್ಷ ಮತ್ತು ವಿಜಯ ದಶಮಿ: ಮೈಸೂರು ದಸರಾ ಎಂದರೆ ಆದು ಮಹಾಸಂಭ್ರಮದ ನಾಡಹಬ್ಬ, ಧರ್ಮ ಸಂಸ್ಕೃತಿಗಳು ಸಂಗಮಿಸಿ ಮೆರೆಯುವ ಮಹಾಪರ್ವ, ಶಕ್ತಿ ದೇವತೆಯನ್ನು ಪೂಜಿಸುವ ದಿವ್ಯೋತ್ಸವ. ಆಶ್ವಯುಜ ಮಾಸದ ಪಾಡ್ಯದಿಂದ ಪ್ರಾರಂಭಿಸಿ ದಶಮಿಯವರೆಗೆ ಹತ್ತುದಿನಗಳು ಒಳಗೊಂಡಿರುವ ಈ ಸುಧೀರ್ಘ ಮಹೋತ್ಸವದ ಮೊದಲ ಒಂಭತ್ತು ದಿನಗಳು 'ನವರಾತ್ರಿ' ಎನಿಸಿದರೆ ಹತ್ತನೆಯ ದಿನವು ಸಂಭ್ರಮದ ಸಮಾರೋಪವಾಗಿ 'ವಿಜಯದಶಮಿ' ಎನಿಸಿಕೊಂಡಿದೆ. ಇದು ವಿಜಯ+ದಶಮಿಯೂ ಹೌದು. ಹಾಗೆಯೇ ವಿಜಯದಶಮಿಯೂ ಹೌದು, ಶಮೀವೃಕ್ಷದ ಅರ್ಥಾತ್ ಬನ್ನಿ ಮರದ ಕೊಂಬೆಯೊಂದನ್ನು ಕಡಿದು ವಿಜಯದ ಸಂಕೇತವಾಗಿ ಸೀಮೋಲ್ಲಂಘನ ಮಾಡುವುದೇ ವಿಜಯ ದಶಮಿ, ಶಮೀಪೂಜೆಗೆ ಇಲ್ಲಿ ವಿಶೇಷ ಮಹತ್ವ. ಮೈಸೂರು ದಸರಾದಲ್ಲಿ ಅರಮನೆಯಿಂದ ಹೊರಡುವ 'ಜಂಬೂಸವಾರಿ' ಬನ್ನಿ ಮಂಟಪವನ್ನು ತಲುಪಿ ಬನ್ನಿಮರವನ್ನು ಪೂಜಿಸುವುದರೊಂದಿಗೆ ದಸರೆಗೆ ಮಂಗಳ ಹಾಡಲಾಗುತ್ತದೆ ಹಾಗೆಯೇ ಮೈಸೂರಿನ ಯದುವಂಶಸ್ಥರು ವಿಜಯದಶಮಿಯಂದು ಶಮೀವೃಕ್ಷ ಪೂಜಿಸುವುದರೊಂದಿಗೆ ಪಾಡ್ಯದಂದು ಕಟ್ಟಿಸಿಕೊಂಡಿದ್ದ ಕಂಕಣವನ್ನು ಬಿಚ್ಚಿ ತಮ್ಮ ಖಾಸಗಿ ದರ್ಬಾರನ್ನು ಮುಗಿಸುತ್ತಾರೆ.

ಚಿನ್ನದ ಅಂಬಾರಿ

ಮೈಸೂರು ದಸರೆಯ ಕೇಂದ್ರ ಬಿಂದುವಾದ 750 ಕೆ.ಜಿ. ತೂಕದ ಚಿನ್ನದ ಅಂಬಾರಿಯನ್ನು ಬೀಟೆ ಮರದಿಂದ ದೇವತಾ ಮಂಟಪದಂತೆ ರಚನೆಯಾಗಿರುವ ಚಿನ್ನದ ತಗಡಿನಿಂದ ಆವೃತ್ತವಾಗಿರುವ ಒಂದು ಸುಂದರ ಕಲಾಕೃತಿ. ಇದು ಪರ್ಣ ಮತ್ತು ಪುಷ್ಪಗಳಿಂದ ಕೂಡಿದ್ದು ವಿನ್ಯಾಸಗಳು ಉಬ್ಬು ಚಿತ್ರ ತಂತ್ರದಿಂದ ರೂಪಿಸಲಾಗಿದೆ.ಇದರ ಗೋಪುರ ಆಕರ್ಷಕ ಪಂಚಕಳಶಗಳನ್ನು ಒಳಗೊಂಡಿದ್ದು ಸಂಪೂರ್ಣವಾಗಿ ದಂತದಿಂದಲೇ ಬಿಡಿಸಿರುವ ಎರಡು ಚಾಮರಗಳು ಮನಮೋಹಕವಾಗಿವೆ. 80 ಕೆ.ಜಿ. ಚಿನ್ನದಿಂದ ತಯಾರಿಸಲಾಗಿರುವ ಈ ಅದ್ಭುತವಾದ ಅಂಬಾರಿಯನ್ನು ಅರಮನೆಯ ಗೊಂಬೆತೊಟ್ಟಿಯ ಉತ್ತರ ತುದಿಯಲ್ಲಿ ಇಡಲಾಗಿದ್ದು ಪ್ರತೀವರ್ಷ ವಿಜಯದಶಮಿಯಂದು ಜಂಬೂಸವಾರಿಗೆ ಇದನ್ನು ಬಳಸಲಾಗುತ್ತದೆ. ಅಂದು ತಾಯಿ ಚಾಮುಂಡೇಶ್ವರಿ ಅಲಂಕೃತಳಾದ ಈ ಅಂಬಾರಿಯನ್ನು ನೋಡಿ ಧನ್ಯರಾಗುವುದೇ ಒಂದು ಸೌಭಾಗ್ಯ.

ಅಲಮೇಲಮ್ಮನ ಶಾಪ

ಶ್ರೀರಂಗರಾಯನು ವಿಜಯನಗರದ ಅರಸರ ಪ್ರತಿನಿಧಿಯಾಗಿ ಶ್ರೀರಂಗಪಟ್ಟಣ ಪ್ರದೇಶದ ಆಳ್ವಿಕೆ ನಡೆಸುತ್ತಿದ್ದ ಕಾಲವದು. ಆತನ ಮಡದಿ ಅಲಮೇಲಮ್ಮ. ಮೈಸೂರಿನ ರಾಜಒಡೆಯರು ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡ ನಂತರ ಅಲ್ಲಿದ್ದ ಶ್ರೀರಂಗರಾಯ ತಲಕಾಡಿಗೆ ಓಡಿಹೋಗಿ ಅಲ್ಲಿಯೇ ಪತ್ನಿಯೊಡನೆ ವಾಸಿಸುತ್ತಿದ್ದು, ಕೆಲದಿನಗಳ ನಂತರ ಬೆನ್ನುಪಣಿಯಿಂದ ನಿಧನ ಹೊಂದಿದ. ಆ ಸಮಯದಲ್ಲಿ ನವರಾತ್ರಿ ಉತ್ಸವಕ್ಕೆ ಶ್ರೀರಂಗನಾಥ ಸ್ವಾಮಿಯನ್ನು ಅಲಂಕರಿಸಲು ತಲಕಾಡಿನಲ್ಲಿದ್ದ ಅಲಮೇಲಮ್ಮನಿಗೆ ಅವಳಲಿದ್ದ ಒಡವೆಗಳನ್ನು ತಂದು ತಮಗೊಪ್ಪಿಸುವಂತೆ ರಾಜಾಜ್ಞೆ ಹೋಯಿತು. ಅಲಮೇಲಮ್ಮ ರಾಜಾಜ್ಞೆಯನ್ನು ತಿರಸ್ಕರಿಸಿದಳು. ಪರಿಣಾಮ ಆಕೆಯಿಂದ ಬಲವಂತವಾಗಿ ಒಡವೆಗಳನ್ನು ಕಿತ್ತುಕೊಳ್ಳಲು ರಾಜಧಾನಿ ಶ್ರೀರಂಗಪಟ್ಟಣದಿಂದ ರಾಜದೂತರು ತಲಕಾಡಿಗೆ ಬರುತ್ತಿರುವ ಸುದ್ದಿ ಅಲಮೇಲಮ್ಮನ ಕಿವಿಗೆ ಬಿತ್ತು. ತಕ್ಷಣ ಅವಳು ತಲಕಾಡಿನಿಂದ ಮಾಲಂಗಿಗೆ ಓಡಿಹೋದಳು. ರಾಜಭಟರು ಬಿಡದೆ ಅವಳನ್ನು ಅಟ್ಟಿಸಿಕೊಂಡು ಹಿಂಬಾಲಿಸುತ್ತಿದ್ದರು, ಆ ಪರಿಸ್ಥಿತಿಯಲ್ಲಿ ಅಲಮೇಲಮ್ಮ ಆಕ್ರೋಶದಿಂದ "ಮಾಲಂಗಿ ಮಡುವಾಗಿ, ತಲಕಾಡು ಮರಳಾಗಿ, ಮೈಸೂರು ಅರಸರಿಗೆ ಮಕ್ಕಳಾಗದಿರಲಿ ಎಂದು ಶಾಪ ನೀಡಿ ತನ್ನಲಿದ್ದ ಒಡವೆಗಂಟನ್ನು ಉಡಿಯಲ್ಲಿ ಕಟ್ಟಿಕೊಂಡು ಮಾಲಂಗಿ ಸಮೀಪದ ಕಾವೇರಿ ನದಿಗೆ ಹಾರಿ ಪ್ರಾಣ ಬಿಡುತ್ತಾಳೆ. ಅಲಮೇಲಮ್ಮನ ಶಾಪದ ಪ್ರಭಾವವೆಂಬಂತೆ ಅಂದಿನಿಂದ ಇಂದಿನ ತನಕವೂ ತಲಕಾಡು ಮರಳು ತುಂಬಿದ ಪ್ರದೇಶವಾಗಿದೆ. ಹಾಗೆಯೇ ಇದರ ಸಮೀಪದ ಮಾಲಂಗಿ ಕೂಡ ಮಡುವಾಗಿ ಭಯಂಕರ ಪ್ರಪಾತವಾಗಿದೆ. ಅಂತೆಯೇ ಸಾಮಾನ್ಯವಾಗಿ ಆ ಕಾಲದಿಂದಲೂ ಮೈಸೂರು ಅರಸರಿಗೆ ಮಕ್ಕಳಾಗದೆ ಅವರು ದತ್ತುಪಡೆದವರಿಗೆ ಮಾತ್ರ ಸಂತಾನ ಪ್ರಾಪ್ತವಾಗಿದೆ. ಹಾಗಾಗಿ ಅಲಮೇಲಮ್ಮನ ಶಾಪ ನಿವಾರಣೆಗಾಗಿ ರಾಜ ಒಡೆಯರು ಅಲಮೇಲಮ್ಮನ ಚಿನ್ನದ ವಿಗ್ರಹವೊಂದನ್ನು ಮಾಡಿಸಿ ಅವರ ಕಾಲದಲ್ಲೇ ನವರಾತ್ರಿ ಹಬ್ಬದಲ್ಲಿ ಅದಕ್ಕೆ ವಿಶೇಷಪೂಜೆ ಸಲ್ಲಿಸುತ್ತಿದ್ದರು, ಆದು ನಿರಂತರವಾಗಿ ಅಂದಿನಿಂದ ಇಂದಿನ ತನಕವೂ ಮುಂದುವರಿದುಕೊಂಡು ಬಂದಿದ್ದು ಇವತ್ತಿಗೂ ಯದುಕುಲ ವಂಶಸ್ಥರು ನವರಾತ್ರಿಯಲ್ಲಿ ಅಲಮೇಲಮ್ಮನನ್ನು ವಿಶೇಷವಾಗಿ ಪೂಜಿಸುತ್ತಾರೆ. ■

Downloaded From:www.kpscvaani.com



ಮೈಸೂರು ಗಜಪಯಣ:

ದಸರಾ ವೈಭವಕ್ಕೆ ಮುನ್ನುಡಿ


ವಿನೋದ್ ಚಂದ್ರ

ಐತಿಹಾಸಿಕ ಹಿರಿಮೆ ಹಾಗೂ ಪರಂಪರೆಯ ನೆಲವಾದ ಮೈಸೂರಿನಲ್ಲಿ ಪ್ರತಿವರ್ಷ ನಡೆಯುವ ದಸರಾ ಸಂಭ್ರಮದ ವೈಭವವನ್ನು ಕಣ್ತುಂಬಿಕೊಳ್ಳಲು ತವಕಿಸದವರೇ ಇಲ್ಲ. ಶತಶತಮಾನಗಳ ಇತಿಹಾಸ ಹೊಂದಿರುವ ಇಲ್ಲಿನ ನವರಾತ್ರಿ ಉತ್ಸವ ಹಾಗೂ ವಿಜಯದಶಮಿಯ ಸಾಂಪ್ರದಾಯಿಕ ಆಚರಣೆಗಳು ವಿಶ್ವವಿಖ್ಯಾತಿ ಪಡೆದಿದ್ದು, ಜಗತ್ತಿನಾದ್ಯಂತದ ಪ್ರವಾಸಿಗರನ್ನು ಮೈಸೂರಿನತ್ತ ಕೈಬೀಸಿ ಕರೆಯುತ್ತವೆ.

ದಸರಾ ವೈಭವಕ್ಕೆ ಅದೆಷ್ಟು ಮಜಲುಗಳು; ಅಂಬಾರಿ ಮೆರವಣಿಗೆ, ಗಜಪಯಣ, ಕಲಾ ತಂಡಗಳ ಮೆರವಣಿಗೆ, ಶಬ್ದ-ಚಿತ್ರ ಕಾರ್ಯಕ್ರಮಗಳು, ಪಂಜಿನ ಕವಾಯತು ಸೇರಿದಂತೆ ಹಲವು ಕಾರ್ಯಕ್ರಮಗಳು ಮೈಸೂರು ದಸರಾವನ್ನು ವಿಶಿಷ್ಟವಾಗಿ ಕಳೆಗಟ್ಟಿಸುತ್ತವೆ. ಇವುಗಳಲ್ಲಿ ಗಜಪಯಣವು ಪ್ರಮುಖ ಆಕರ್ಷಣೆಗಳಲ್ಲಿ ಒಂದಾಗಿದೆ.

ಈ ವರ್ಷದ ಗಜಪಯಣಕ್ಕೆ ಈಗಾಗಲೇ ಸಾಂಪ್ರದಾಯಿಕ ಚಾಲನೆ ದೊರೆತಿದೆ. ಪ್ರತಿವರ್ಷದಂತೆ ಈ ವರ್ಷ ಆಗಸ್ಟ್ 26 ರಂದು ನಾಗರಹೊಳೆ ಅಭಯಾರಣ್ಯದ ಮುಂಭಾಗದ ವೀರನಹೊಸಹಳ್ಳಿ ಬಳಿ ಸಾಂಪ್ರದಾಯಿಕ ಪೂಜೆ ಸಲ್ಲಿಸುವ ಮೂಲಕ ಗಜಪಯಣಕ್ಕೆ ಚಾಲನೆ ನೀಡಲಾಯಿತು. ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ನಗರಾಭಿವೃದ್ಧಿ ಸಚಿವರಾದ ಡಾ. ಯತೀಂದ್ರ ಸಿದ್ದರಾಮಯ್ಯ ಸೇರಿದಂತೆ

Downloaded From:www.kpscvaani.com



ಜನಪ್ರತಿನಿಧಿಗಳು ಹಾಗೂ ಜಿಲ್ಲಾಡಳಿತದ ಅಧಿಕಾರಿಗಳು ಪೂಜೆ ಸಲ್ಲಿಸಿ ಗಜಪಡೆಯನ್ನು ಅರಮನೆ ನಗರಿಗೆ ಬರಮಾಡಿಕೊಂಡರು.

ತದನಂತರದಲ್ಲಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ಪ್ರಭು ಗೌಡ ಅವರ ನೇತೃತ್ವದಲ್ಲಿ ಗಜ ಪಯಣ ಮತ್ತು ಜಂಬುಸವಾರಿಯ ವ್ಯವಸ್ಥೆ ಕಚ್ಚುಕಟ್ಟಾಗಿ ಸಾಗುತಿದೆ. ಮೈಸೂರಿನ ಅರಮನೆ ಆವರಣದಲ್ಲಿ ಗಜಪಡೆ ವಾಸ್ತವ್ಯಕ್ಕೆ ಅಗತ್ಯ ವ್ಯವಸ್ಥೆಗಳನ್ನು ಕಲ್ಪಿಸಲಾಗಿದೆ. ಆನೆಗಳ ಆರೋಗ್ಯ, ಆಹಾರ, ವಿಶ್ರಾಂತಿ ಹಾಗೂ ಆರೈಕೆಗೆ ವಿಶೇಷ ಗಮನ ನೀಡಲಾಗುತ್ತಿದ್ದು, ದಸರಾ ಮೆರವಣಿಗೆಗಾಗಿ ಅವುಗಳನ್ನು ಹಂತ ಹಂತವಾಗಿ ಸಜ್ಜುಗೊಳಿಸಲಾಗುತ್ತಿದೆ.

ಅಭಿಮನ್ಯುವಿಗೆ ಭಾವುಕ ಬೀಳ್ಕೊಡುಗೆ

ಎರಡು ದಶಕಗಳ ಕಾಲ ಕಾಲ ಮೈಸೂರು ದಸರಾ ಮೆರವಣಿಗೆಯ ಅವಿಭಾಜ್ಯ ಅಂಗವಾಗಿ ವಿವಿಧ ಜವಾಬ್ದಾರಿ ನಿರ್ವಹಿಸಿದ 5 ಬಾರಿ ಚಿನ್ನದ ಅಂಬಾರಿ ಹೊತ್ತಿದ್ದ ಅಭಿಮನ್ಯುವಿಗೆ 60 ವರ್ಷವಾಗಿರುವ ಕಾರಣಕ್ಕೆ ಆ ಹೊಣೆಯಿಂದ ಬಿಡುಗಡೆ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ, ಈ ಬಾರಿಯ ಗಜಪಯಣಕ್ಕೆ ಚಾಲನೆ ನೀಡಿದ ಸಂದರ್ಭದಲ್ಲಿ ಅಭಿಮನ್ಯುವಿಗೆ ಬೀಳ್ಕೊಡುಗೆ ನೀಡಿದ

ವಿವಿಧ ಶಿಬಿರಗಳಿಂದ ಆಗಮಿಸಿದ ಗಜಪಡೆ

ಈ ಬಾರಿಯ ಗಜಪಯಣದಲ್ಲಿ ರಾಜ್ಯದ ವಿವಿಧ ಆನೆ ಶಿಬಿರಗಳಿಂದ ಆಗಮಿಸಿರುವ ಗಜಪಡೆ ಪ್ರಮುಖ ಆಕರ್ಷಣೆಯಾಗಿದೆ. ಬಂಡೀಪುರ, ದುಬಾರೆ, ಭದ್ರಾವತಿ, ರಾಮನಗರ, ಬಳ್ಳೆ, ದಾಂಡೇಲಿ ಹಾಗೂ ಮತ್ತಿಗೋಡು ಶಿಬಿರಗಳಿಂದ ಆನೆಗಳು ಆಗಮಿಸಿವೆ.

ಗಜಪಯಣದಲ್ಲಿ ಭಾಗವಹಿಸುತ್ತಿರುವ ಆನೆಗಳು ಮತ್ತು ಅವುಗಳ ಶಿಬಿರಗಳು:

1. ಗೋಪಿ – ಬಂಡೀಪುರ ಆನೆ ಶಿಬಿರ
2. ಶ್ರೀರಾಮ – ದುಬಾರೆ ಆನೆ ಶಿಬಿರ
3. ಅಚಲಮ್ಮ – ಭದ್ರಾವತಿ ಆನೆ ಶಿಬಿರ
4. ಪ್ರಶಾಂತ – ದುಬಾರೆ ಆನೆ ಶಿಬಿರ
5. ಭೈರವ – ರಾಮನಗರ ಆನೆ ಶಿಬಿರ
6. ಧನಂಜಯ – ದುಬಾರೆ ಆನೆ ಶಿಬಿರ
7. ಲಕ್ಷ್ಮಿ – ಬಳ್ಳೆ ಆನೆ ಶಿಬಿರ
8. ದ್ರೋಣ – ದಾಂಡೇಲಿ ಆನೆ ಶಿಬಿರ
9. ಸುಗ್ರೀವ – ದುಬಾರೆ ಆನೆ ಶಿಬಿರ
10. ಕಾವೇರಿ – ದುಬಾರೆ ಆನೆ ಶಿಬಿರ
11. ಮಹೇಂದ್ರ – ಬಳ್ಳೆ ಆನೆ ಶಿಬಿರ
12. ಶ್ರೀರಾಮ – ಮತ್ತಿಗೋಡು ಆನೆ ಶಿಬಿರ

Downloaded From:www.kpscvaani.com

ಕ್ಷಣಗಳು ಭಾವುಕವಾಗಿದ್ದವು. ವೀರನಹೊಸಹಳ್ಳಿಯಲ್ಲಿ ಗಜಪಯಣಕ್ಕೆ ಚಾಲನೆ ನೀಡಿದ ಸಂದರ್ಭದಲ್ಲಿ ಗಜಪಡೆಯ ಇತರ ಆನೆಗಳು ಸೊಂಡಿಲು ಎತ್ತಿ ಪುಷ್ಪಾರ್ಚನೆ ಮಾಡುವ ಮೂಲಕ ತಮ್ಮ ಹಿರಿಯ ಸಂಗಾತಿಗೆ (ಒಡನಾಡಿಗೆ) ಗೌರವ ಸಲ್ಲಿಸಿದ ದೃಶ್ಯ ನೆರೆದಿದ್ದವರ ಮನಮುಟ್ಟಿತು.

ಮರೆಯಲಾಗದ ಅರ್ಜುನನ ನೆನಪು

ದಸರಾ ಗಜಪಡೆಯ ಮತ್ತೊಂದು ಅಚ್ಚುಮೆಚ್ಚಿನ ಆನೆ ಅರ್ಜುನನನ್ನೂ ಈ ಸಂದರ್ಭದಲ್ಲಿ ಸ್ಮರಿಸಲಾಯಿತು. ಮೈಸೂರು ದಸರಾ ಮೆರವಣಿಗೆಯ ಅವಿಭಾಜ್ಯ ಅಂಗವಾಗಿದ್ದ ಅರ್ಜುನ, ಕಾಡಾನೆ ಸೆರೆ ಕಾರ್ಯಾಚರಣೆ ವೇಳೆ ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಯಸಳೂರು ಅರಣ್ಯ ವಿಭಾಗದಲ್ಲಿ ಮೃತಪಟ್ಟಿದ್ದು ಹಾಗೂ ಅವನ ಸೇವೆಯನ್ನು ಗೌರವಿಸಿ ಅಲ್ಲಿ ಸ್ಮಾರಕ ನಿರ್ಮಿಸಿರುವುದು ಇಲ್ಲಿ ನೆನಪಾಗುತ್ತದೆ.

ಹೊಸ ಆನೆಗೆ ಅಂಬಾರಿ ಹೊತ್ತು ಸಾಗುವ ಜವಾಬ್ದಾರಿ

ಅಭಿಮನ್ಯುವಿನ ನಿವೃತ್ತಿಯ ಹಿನ್ನೆಲೆಯಲ್ಲಿ ಈ ಬಾರಿ ಅಂಬಾರಿ ಹೊರುವ ಮಹತ್ವದ ಜವಾಬ್ದಾರಿ ಯಾವ ಆನೆಯ ಹೆಗಲೇರಲಿದೆ ಎಂಬುದು ಕುತೂಹಲ ಮೂಡಿಸಿದೆ.ಹೆಚ್ಚಿನ ತೂಕವನ್ನು ಹೊರುವ, ಸಮರ್ಥ ಆನೆಯನ್ನು ಅರಣ್ಯ ಇಲಾಖೆಯುಆಯ್ಕೆ ಮಾಡಿ ತಾಲೀಮು ನೀಡಲಿದೆ. ದಸರಾ ಜಂಬೂಸವಾರಿಯ ದಿನ ಲಕ್ಷಾಂತರ ಜನರ ಸಮ್ಮುಖದಲ್ಲಿ ಅಂಬಾರಿಯನ್ನು ಹೊತ್ತು ಸಾಗುವ ಆನೆ ಯಾವುದೆಂದು ನೋಡಲು ಈ ಬಾರಿ ಎಲ್ಲರೂ ವಿಶೇಷ ಕುತೂಹಲದಿಂದ ಕಾಯುತಿದ್ದಾರೆ.

ತಾಲೀಮು ವೀಕ್ಷಿಸಲು ಜನಸಾಗರ.

ಪ್ರತಿ ದಿನ ಬೆಳಿಗ್ಗೆ 7.30 ಹಾಗೂ ಸಂಜೆ 5.30 ಕ್ಕೆ ತಾಲೀಮು ನಡೆಸಲಾಗುತ್ತಿದೆ. ಗಜಪಯಣ ಆರಂಭವಾಗುತ್ತಿದ್ದಂತೆಯೇ ಮೈಸೂರಿನಲ್ಲಿ ದಸರಾ ಸಂಭ್ರಮದ ಕಳೆ ಮತ್ತಷ್ಟು ಹೆಚ್ಚಾಗಿದೆ. ಆನೆಗಳನ್ನು ಕಣ್ತುಂಬಿಕೊಳ್ಳಲು ಪ್ರತಿದಿನ ನೂರಾರು ಮಂದಿ ಅರಮನೆ ಆವರಣಕ್ಕೆ ಆಗಮಿಸುತ್ತಿದ್ದಾರೆ. ಆನೆಗಳ ತಾಲೀಮನ್ನು ವೀಕ್ಷಿಸಲು ಕೂಡ ಜನಸಂದಣಿ ಸೇರುತ್ತಿದೆ. ಮಕ್ಕಳಿಂದ ಹಿಡಿದು ಹಿರಿಯರವರೆಗೆ ಎಲ್ಲರಲ್ಲೂ ಗಜಪಡೆಯನ್ನು ನೋಡುವ ಉತ್ಸಾಹ ಕಂಡುಬರುತ್ತಿದೆ.

ಆನೆಗಳಿಗೆ ಪ್ರತಿದಿನ ಉತ್ತಮ ಆಹಾರ, ಆರೈಕೆ ಮತ್ತು ತರಬೇತಿ ನೀಡಲಾಗುತ್ತಿದ್ದು ಅರಣ್ಯ ಇಲಾಖೆ ಅಧಿಕೃತ ಸಿಬ್ಬಂದಿ, ವೈದ್ಯಕೀಯ ಅಧಿಕಾರಿ ಸಿಬ್ಬಂದಿ, ಮಾವುತರು, ಕಾವಾಡಿಗರು ವಿಶೇಷ ಶ್ರಮ ವಹಿಸುತಿದ್ದಾರೆ.

ಅರಮನೆ ಆವರಣದಲ್ಲಿ ನಡೆಯುತ್ತಿರುವ ತಾಲೀಮು, ಆನೆಗಳ ಶಿಸ್ತುಬದ್ಧ ನಡೆ, ಮಹಾವತರು ಮತ್ತು ಕಾವಾಡಿಗಳೊಂದಿಗೆ ಅವುಗಳ ಆತ್ಮೀಯತೆ – ಇವೆಲ್ಲವೂ ಪ್ರವಾಸಿಗರು ಹಾಗೂ ಸ್ಥಳೀಯರಿಗೆ ವಿಶೇಷ ಅನುಭವ ನೀಡುತ್ತಿವೆ.





ಗಜಪಯಣವೆಂದರೆ ಕೇವಲ ಕಾಡಿನಿಂದ ಅರಮನೆಗೆ ಆನೆಗಳ ಆಗಮನವಷ್ಟೇ ಅಲ್ಲ; ಅದು ಮೈಸೂರು ದಸರಾ ಪರಂಪರೆ, ರಾಜವೈಭವ, ಮಾನವ– ಪ್ರಾಣಿ ಬಾಂಧವ್ಯ ಹಾಗೂ ನಾಡಿನ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಸಾರುವ ಅಪೂರ್ವ ಆಚರಣೆಯಾಗಿದೆ.

ಅಭಿಮನ್ಯುವಿನ ನಿವೃತ್ತಿಯ ಭಾವುಕ ಕ್ಷಣ, ಅರ್ಜುನನ ಮರೆಯಲಾಗದ ನೆನಪು, ಹೊಸ ಆನೆಗೆ ಅಂಬಾರಿ ಹೊರುವ ಜವಾಬ್ದಾರಿ ಹಾಗೂ ವಿವಿಧ ಆನೆ ಶಿಬಿರಗಳಿಂದ ಆಗಮಿಸಿರುವ ಗಜಪಡೆಯ ಸಾನ್ನಿಧ್ಯ. ಈ ಎಲ್ಲ ಕಾರಣಗಳಿಂದ ಈ ಬಾರಿಯ ಗಜಪಯಣ ಮತ್ತಷ್ಟು ವಿಶೇಷವಾಗಿದೆ. ದಸರಾ ಮಹೋತ್ಸವದ ಅದ್ಧೂರಿ ಸಂಭ್ರಮಕ್ಕೆ ಗಜಪಯಣ ಮತ್ತೊಮ್ಮೆ ಭವ್ಯ ಮುನ್ನುಡಿ ಬರೆದಿದೆ.

Downloaded From:www.kpscvaani.com



ಸಹಜಾಭಿನಯದ ಶಿಖರಕ್ಕೆ ಸಂದ ಗೌರವ

ಅನಂತ್‌ನಾಗ್‌ಗೆ 'ದಾದಾಸಾಹೇಬ್ ಫಾಲ್ಕೆ' ಗರಿ

ಡಾ. ಎಲ್. ಪಿ. ಗಿರೀಶ್

ಭಾರತೀಯ ಚಿತ್ರರಂಗದ ಅತ್ಯುನ್ನತ ಮತ್ತು ಪರಮೋನ್ನತ ಮನ್ನಣೆಯಾದ 'ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ'ಯು ಕನ್ನಡ ಚಿತ್ರರಂಗದ ಅಪರೂಪದ ಪ್ರತಿಭೆ, ಹಿರಿಯ ನಟ ಅನಂತ್ ನಾಗ್ ಅವರ ಮುಡಿಗೇರಿರುವುದು ಕೇವಲ ಒಬ್ಬ ನಟನಿಗೆ ಸಂದ ವೈಯಕ್ತಿಕ ಗೌರವವಲ್ಲ; ಇದು ಇಡೀ ಕನ್ನಡ ಸಾಂಸ್ಕೃತಿಕ ಲೋಕಕ್ಕೆ ಮತ್ತು ಕನ್ನಡಿಗರ ಅಭಿಮಾನಕ್ಕೆ ಸಂದ ಮಾನ್ಯತೆ.

ಮುಖದಲ್ಲಿ ಯಾವುದೇ ಅತಿರೇಕದ ಭಾವಗಳಿಲ್ಲದೆ, ಕೇವಲ ಕಂಗಳಲ್ಲೇ ಕತೆ ಹೇಳುವ, ಮೌನದಲ್ಲೇ ಭಾವಲೋಕವನ್ನು ತೆರೆದಿಡುವ ಅನಂತ್ ನಾಗ್ ಅವರ ಸುದೀರ್ಘ ಕಲಾ ತಪಸ್ಸಿಗೆ ಸಂದ ಅತ್ಯಂತ ಯೋಗ್ಯ ಪುರಸ್ಕಾರವಿದು.

ರಂಗಭೂಮಿಯಿಂದ ಆರಂಭವಾದ ಕಲಾ ಪಯಣ

ಅನಂತ್ ನಾಗರಕಟ್ಟೆ ಎಂಬ ಯುವಕ ಮುಂಬೈನ ಕೊಂಕಣಿ ಹಾಗೂ ಮರಾಠಿ ಪ್ರಾಯೋಗಿಕ ರಂಗಭೂಮಿಯಲ್ಲಿ ತನ್ನ ಹೆಜ್ಜೆಯಿಟ್ಟಾಗ, ಮುಂದೆ ತಾನೊಬ್ಬ ಭಾರತೀಯ ಚಿತ್ರರಂಗದ ದಿಗ್ಗಜನಾಗುತ್ತೇನೆಂದು ಊಹಿಸಿರಲಿಕ್ಕಿಲ್ಲ. ಸತ್ಯದೇವ್

Downloaded From:www.kpscvaani.com

ದುಬೆ ಅವರ ಗರಡಿಯಲ್ಲಿ ಪಳಗಿದ ಅನಂತ್, ನಾಟಕದ ವೇದಿಕೆಯಿಂದ ಕಲಿತ ಶಿಸ್ತು, ಸಂಯಮ ಮತ್ತು ಪಾತ್ರಪ್ರವೇಶದ ಗುಣಗಳನ್ನು ಕೊನೆಯವರೆಗೂ ಉಳಿಸಿಕೊಂಡು ಬಂದವರು.

ಶ್ಯಾಮ್ ಬೆನೆಗಲ್ ಅವರ 'ಅಂಕುರ್' (1974) ಚಿತ್ರದ ಮೂಲಕ ಭಾರತೀಯ ಸಮಾಂತರ (ಪ್ಯಾರಲಲ್) ಸಿನಿಮಾಗೆ ಪದಾರ್ಪಣೆ ಮಾಡಿದ ಅನಂತ್, ನಂತರ 'ನಿಶಾಂತ್', 'ಮಂಥನ್', 'ಭೂಮಿಕಾ' ಮತ್ತು 'ಕಲಿಯುಗ್' ಮುಂತಾದ ಕಲಾತ್ಮಕ ಚಲನಚಿತ್ರಗಳಲ್ಲಿ ನಿರ್ವಹಿಸಿದ ಪಾತ್ರಗಳು ಇಂದಿಗೂ ಭಾರತೀಯ ನಟನಾ ಅಧ್ಯಯನಕ್ಕೆ ಪಠ್ಯಪುಸ್ತಕಗಳಂತಿವೆ.

ಕನ್ನಡ ಬೆಳ್ಳಿಪರದೆಯ ಅನನ್ಯ ಚೇತನ

ಕನ್ನಡ ಚಿತ್ರರಂಗಕ್ಕೆ ಅನಂತ್ ನಾಗ್ ಅವರ ಆಗಮನ ಒಂದು ಮಹತ್ವದ ತಿರುವು. ಕನ್ನಡ ಚಿತ್ರರಂಗವು ಕಲಾತ್ಮಕ ಚಿತ್ರಗಳ ನಿರ್ಮಾಣದ ಮೂಲಕ ದೇಶದ ಗಮನ ಸೆಳೆಯುತ್ತಿದ್ದ ಕಾಲದಲ್ಲಿ ಪಿ. ವಿ ನಂಜರಾಜ ಅರಸು ಅವರ 'ಸಂಕಲ್ಪ' (1973) ಮೂಲಕ ಕನ್ನಡಕ್ಕೆ ಕಾಲಿಟ್ಟ ಅವರು ತಮ್ಮ ಸಹಜಾಭಿನಯದಿಂದ ಗಮನ ಸೆಳೆದರು. ಅನಂತರ ಜಿ.ವಿ. ಅಯ್ಯರ್ ಅವರ 'ಹಂಸಗೀತೆ '(1975) ಚಿತ್ರದಲ್ಲಿ ಸಂಗೀತಗಾರ ಭೈರವಿ ವೆಂಕಟಸುಬ್ಬಯ್ಯನ ಪಾತ್ರವನ್ನು ಜೀವಿಸುವ ಮೂಲಕ ನಟನೆಯ ಶೈಲಿಗೆ ಹೊಸ ಭಾಷ್ಯ ಬರೆದರು. ನಂತರ ಎಂ.ಎಸ್. ಸತ್ಯು ಅವರ 'ಕನ್ನೇಶ್ವರ ರಾಮ' ಚಿತ್ರದಲ್ಲಿ ತೋರಿದ ತೀಕ್ಷ್ಣತೆ ಚಿತ್ರಪ್ರೇಮಿಗಳನ್ನು ಮಂತ್ರಮುಗ್ಧರನ್ನಾಗಿಸಿತು.



ಅನಂತ್ ನಾಗ್ ಅವರದ್ದು ಎಂದಿಗೂ ಏಕತಾನತೆಯ (stereotyped) ನಟನೆಯಲ್ಲ. ಒಂದು ಕಡೆ ಕಲಾತ್ಮಕ ಸಿನಿಮಾಗಳ ಗಂಭೀರ ಪಾತ್ರಗಳು, ಮತ್ತೊಂದೆಡೆ ಕಮರ್ಷಿಯಲ್ ಚಿತ್ರಗಳಲ್ಲಿ ಲೀಲಾಜಾಲವಾಗಿ ಮುಳುಗೇಳುವ ಜಾಣ್ಮೆ ಅವರಲ್ಲಿತ್ತು:

ಹಾಸ್ಯ ಮತ್ತು ಕೌಟುಂಬಿಕ ಚಿತ್ರಗಳು: 'ಬಯಲು ದಾರಿ', 'ಚಂದನದ ಗೊಂಬೆ', 'ಬೆಳದಿಂಗಳ ಬಾಲೆ', 'ಉದ್ಭವ', 'ಗೌರಿ ಗಣೇಶ', 'ಯಾರಿಗೂ ಹೇಳ್ಬೇಡಿ', 'ಗಣೇಶನ ಮದುವೆ'—ಇವು ಅನಂತ್ ನಾಗ್ ಅವರ ಸಹಜ ಹಾಸ್ಯ ಪ್ರಜ್ಞೆಗೆ ಮತ್ತು ಟೈಮಿಂಗ್ಗೆ ಸಾಕ್ಷಿ. ಅಸಂಬದ್ಧ ಹಾಸ್ಯದ ಸೋಂಕಿಲ್ಲದೆ, ಸನ್ನಿವೇಶ ಮತ್ತು ಸಂಭಾಷಣೆಯ ಏರಿಳಿತದಲ್ಲೇ ನಗೆಯುಕ್ಕಿಸುವ ಅವರ ಶೈಲಿ ಅನನ್ಯ.

ಮಾಲ್ಗುಡಿ ಡೇಸ್ ನೆನಪು: ಶಂಕರ್ ನಾಗ್ ನಿರ್ದೇಶನದ ಜಗತ್ಪ್ರಸಿದ್ಧ ಧಾರಾವಾಹಿ 'ಮಾಲ್ಗುಡಿ ಡೇಸ್'ನಲ್ಲಿ ಆರ್.ಕೆ. ನಾರಾಯಣ್ ಅವರ ಪಾತ್ರಗಳಿಗೆ ಅನಂತ್ ತಮ್ಮ ಅಭಿನಯದಿಂದ ತುಂಬಿದ ಜೀವಂತಿಕೆ ದೇಶದ ಪ್ರತಿಯೊಬ್ಬ ವೀಕ್ಷಕನ ಮನಸ್ಸಿನಲ್ಲಿ ಇಂದಿಗೂ ಹಸಿರಾಗಿದೆ.

ಹೊಸ ತಲೆಮಾರಿನ ಜತೆಗಿನ ನಂಟು: ಬದಲಾದ ಕಾಲಘಟ್ಟದಲ್ಲೂ ತಮ್ಮ ಪ್ರಸ್ತುತತೆಯನ್ನು ಕಳೆದುಕೊಳ್ಳದ ಅನಂತ್, 'ಗೋಧಿ ಬಣ್ಣ ಸಾಧಾರಣ ಮೈಕಟ್ಟು', 'ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ: ಕಾಸರಗೋಡು', 'ಕೆ.ಜಿ.ಎಫ್' ಮುಂತಾದ ಚಿತ್ರಗಳಲ್ಲಿನ ತೂಕಬದ್ಧ ಪಾತ್ರಗಳ ಮೂಲಕ ಇಂದಿನ ಯುವ ಪೀಳಿಗೆಯ ಅಚ್ಚುಮೆಚ್ಚಿನ ನಟನಾಗಿಯೂ ಮಿಂಚಿದ್ದಾರೆ.

ಸರಳ ವ್ಯಕ್ತಿತ್ವ ಮತ್ತು ಸಾಮಾಜಿಕ ಪ್ರಜ್ಞೆ

ಕೇವಲ ನಟನಾಗಿ ಮಾತ್ರವಲ್ಲದೆ, ರಾಜಕೀಯ ರಂಗದಲ್ಲೂ ಸಚಿವರಾಗಿ, ಜನಪ್ರತಿನಿಧಿಯಾಗಿ ಕಾರ್ಯನಿರ್ವಹಿಸಿದ ಅನಂತ್ ನಾಗ್ ಅವರದ್ದು ಎಂದಿಗೂ ನೇರ ನಡೆ, ನುಡಿ. ಆಡಂಬರವಿಲ್ಲದ ಸರಳ ಬದುಕು. ಅಪಾರ ಸಾಹಿತ್ಯಾಭಿರುಚಿ ಮತ್ತು ಸಮಾಜದ ಕುರಿತಾದ ಸ್ಪಷ್ಟ ಚಿಂತನೆಗಳು ಅವರ ವ್ಯಕ್ತಿತ್ವದ ಹೆಗ್ಗುರುತುಗಳು.

ಪ್ರಶಸ್ತಿ, ಪ್ರಚಾರಗಳ ಬೆನ್ನತ್ತಿ ಹೋಗದ ಈ ಕಲಾ ತಪಸ್ವಿಯನ್ನು ಅರಸಿ ಬಂದ ಗೌರವಗಳು ಅನೇಕ. ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಯು ಅನಂತ್ ನಾಗ್ ಅವರ ಸುದೀರ್ಘ ಐದು ದಶಕಗಳ ಕಲಾ ಸೇವೆಗೆ ರಾಷ್ಟ್ರವು ಸಲ್ಲಿಸಿರುವ ಸಾಷ್ಟಾಂಗ ನಮನ. ಪ್ರತಿಯೊಂದು ಪಾತ್ರಕ್ಕೂ ಜೀವದುಂಬಿ ಕನ್ನಡಿಗರ ಮನೆ–ಮನಗಳಲ್ಲಿ ಶಾಶ್ವತ ಸ್ಥಾನ ಪಡೆದಿರುವ ಈ ಮೇರು ನಟನಿಗೆ ಕೋಟಿ ಕೋಟಿ ಅಭಿನಂದನೆಗಳು.

ಅವರ ಕಲಾ ಪಯಣ ನಿರಂತರವಾಗಿ ಸಾಗಲಿ, ಅವರಿಂದ ಇನ್ನಷ್ಟು ಅರ್ಥಪೂರ್ಣ ಪಾತ್ರಗಳು ಹೊರಹೊಮ್ಮಲಿ ಎಂಬುದೇ ಸಮಸ್ತ ಕಲಾಭಿಮಾನಿಗಳ ಹಾರೈಕೆ. ■

Downloaded From:www.kpscvaani.com







ಕುದುರೆಮುಖದ ಬೆಟ್ಟಗಳಲ್ಲಿ ಅರಳಿದ ನೀಲಿ ಸೊಬಗು

ಪಶ್ಚಿಮ ಘಟ್ಟಗಳ ನೈಸರ್ಗಿಕ ಸೌಂದರ್ಯಕ್ಕೆ ಮತ್ತಷ್ಟು ಮೆರುಗು ನೀಡಿದ ನೀಲಕುರಿಂಜಿಯಂತಹ ಅಪರೂಪದ ಹೂವುಗಳು

ಹಸುರು ಹೊದಿಕೆ ಹೊದ್ದ ಕುದುರೆಮುಖದ ಬೆಟ್ಟಗಳು ಇದೀಗ ಅಲ್ಲಲ್ಲಿ ಅರಳಿರುವ ನೀಲಿ-ನೇರಳೆ ಬಣ್ಣದ ಅಪರೂಪದ ಹೂವುಗಳಿಂದ ಮತ್ತಷ್ಟು ಕಂಗೊಳಿಸುತ್ತಿವೆ. ಪಶ್ಚಿಮ ಘಟ್ಟಗಳ ನೈಸರ್ಗಿಕ ಸೌಂದರ್ಯಕ್ಕೆ ವಿಶೇಷ ಮೆರುಗು ನೀಡುತ್ತಿರುವ ಈ ಹೂವುಗಳು ಚಾರಣಪ್ರಿಯರು, ಛಾಯಾಗ್ರಾಹಕರು ಹಾಗೂ ಪ್ರಕೃತಿ ಪ್ರವಾಸಿಗರ ಗಮನ ಸೆಳೆಯುತ್ತಿವೆ.

ಕುದುರೆಮುಖದ ಕೆಲವು ಚಾರಣ ದಾರಿಗಳು ಹಾಗೂ ಬೆಟ್ಟ ಪ್ರದೇಶಗಳಲ್ಲಿ ನೀಲಕುರಿಂಜಿಯಂತಹ ಹೂವುಗಳು ಅಲ್ಲಲ್ಲಿ ಅರಳಿರುವುದು ಕಂಡುಬಂದಿದೆ. 2022-23ನೇ ಸಾಲಿನಲ್ಲಿ ಕುದುರೆಮುಖದ ಕೆಲವು ಬೆಟ್ಟ ಪ್ರದೇಶಗಳಲ್ಲಿ ಇವು ಹೆಚ್ಚಿನ ಪ್ರಮಾಣದಲ್ಲಿ ಕಂಡುಬಂದಿದ್ದರೆ, ಈ ಬಾರಿ ಸೀಮಿತ ಪ್ರಮಾಣದಲ್ಲಿ ಅರಳಿರುವುದು ಕಂಡುಬರುತ್ತಿದೆ. ಹಸಿರು ಹುಲ್ಲುಗಾವಲಿನ ನಡುವೆ ಚದುರಿದಂತೆ ಕಾಣಿಸುವ ನೀಲಿ-ನೇರಳೆ ಹೂವುಗಳು ಕುದುರೆಮುಖದ ಭೂದೃಶ್ಯಕ್ಕೆ ಹೊಸ ಸೊಬಗು ನೀಡಿವೆ.

ಎಂ. ಎಸ್. ಚೈತ್ರ

Downloaded From:www.kpscvaani.com

ನೀಲಿ ಚಿತ್ತಾರ

ಮಳೆಗಾಲದ ನಂತರ ಕುದುರೆಮುಖದ ಬೆಟ್ಟಗಳು ಹಚ್ಚಹಸುರಿನಿಂದ ಕಂಗೊಳಿಸುವುದು ಸಾಮಾನ್ಯ. ಅದರ ನಡುವೆ ನೀಲಿ–ನೇರಳೆ ಬಣ್ಣದ ಹೂವುಗಳು ಅರಳಿದಾಗ ಬೆಟ್ಟದ ಸೌಂದರ್ಯಕ್ಕೆ ಮತ್ತಷ್ಟು ಮೆರುಗು ಮೂಡುತ್ತದೆ. ದೂರದಿಂದ ನೋಡಿದಾಗ ಹಸಿರು ಬೆಟ್ಟದ ಮೇಲೆ ನೀಲಿ ಬಣ್ಣದ ಚಿತ್ತಾರ ಬಿಡಿಸಿದಂತೆ ಭಾಸವಾಗುತ್ತದೆ.

ನೀಲಕುರಿಂಜಿ ಸಾಮಾನ್ಯವಾಗಿ ಪಶ್ಚಿಮ ಘಟ್ಟಗಳ ಎತ್ತರದ ಹುಲ್ಲುಗಾವಲು ಪ್ರದೇಶಗಳೊಂದಿಗೆ ಗುರುತಿಸಿಕೊಂಡಿರುವ ಅಪರೂಪದ ಸಸ್ಯ. Strobilanthes kunthiana ಎಂಬ ವೈಜ್ಞಾನಿಕ ಹೆಸರಿನಿಂದ ಪರಿಚಿತವಾಗಿರುವ ಈ ಸಸ್ಯದ ಹೂಬಿಡುವಿಕೆ ಪ್ರಕೃತಿಯ ವಿಶಿಷ್ಟ ವಿದ್ಯಮಾನಗಳಲ್ಲಿ ಒಂದಾಗಿದೆ.

ನೀಲಕುರಿಂಜಿಯ ಹೂಬಿಡುವ ಚಕ್ರವು ಅತ್ಯಂತ ಕುತೂಹಲಕಾರಿ ಅಂಶವಾಗಿದೆ. ಹೆಚ್ಚು ಪರಿಚಿತವಾಗಿರುವ ನೀಲಕುರಿಂಜಿ ಜಾತಿಯು ಸಾಮಾನ್ಯವಾಗಿ ಸುಮಾರು 12 ವರ್ಷಗಳಿಗೊಮ್ಮೆ ಸಾಮೂಹಿಕವಾಗಿ ಹೂಬಿಡುತ್ತದೆ. ಹಲವು ವರ್ಷಗಳ ಕಾಲ ಬೆಳೆಯುವ ಸಸ್ಯಗಳು ನಿರ್ದಿಷ್ಟ ಅವಧಿಯಲ್ಲಿ ಹೂಬಿಟ್ಟು ತಮ್ಮ ಜೀವನಚಕ್ರವನ್ನು ಪೂರ್ಣಗೊಳಿಸುತ್ತವೆ. ಆದರೆ, ಕುದುರೆಮುಖದಲ್ಲಿ ಕಾಣುತ್ತಿರುವ ನೀಲಿ–ನೇರಳೆ ಹೂವನ್ನು ಖಚಿತವಾಗಿ Strobilanthes kunthiana ಎಂದು ಗುರುತಿಸುವ ಮೊದಲು ಸಸ್ಯಶಾಸ್ತ್ರೀಯ ದೃಢೀಕರಣ ಅಗತ್ಯವಿರುತ್ತದೆ. Strobilanthes ಕುಲದಲ್ಲಿ ವಿವಿಧ ಜಾತಿಗಳಿದ್ದು, ಅವುಗಳ ಹೂಬಿಡುವ ಚಕ್ರ ಒಂದೇ ರೀತಿಯಾಗಿರುವುದಿಲ್ಲ.

ಶೋಲಾ ಕಾಡು–ಹುಲ್ಲುಗಾವಲುಗಳ ಅಮೂಲ್ಯ ಸಂಪತ್ತು

ಕುದುರೆಮುಖ ವ್ಯಾಪ್ತಿಯು ಪಶ್ಚಿಮ ಘಟ್ಟಗಳ ಅತ್ಯಂತ ಪ್ರಮುಖ ಜೀವವೈವಿಧ್ಯ ಪ್ರದೇಶಗಳಲ್ಲಿ ಒಂದಾಗಿದೆ. ಇಲ್ಲಿನ ಶೋಲಾ ಕಾಡುಗಳು, ಎತ್ತರದ ಹುಲ್ಲುಗಾವಲುಗಳು, ಬೆಟ್ಟಗಳು, ಜಲಧಾರೆಗಳು ಹಾಗೂ ವೈವಿಧ್ಯಮಯ ಸಸ್ಯ–ಪ್ರಾಣಿ ಸಂಕುಲ ಪರಿಸರ– ಶ್ರೀಮಂತಿಕೆಯನ್ನು ಸಾರುತ್ತವೆ. ಇಂತಹ ಸೂಕ್ಷ್ಮ ಪರಿಸರ ವ್ಯವಸ್ಥೆಯಲ್ಲಿ ನೀಲಕುರಿಂಜಿಯಂತಹ ಸಸ್ಯಗಳು ಕೇವಲ ಅಲಂಕಾರಿಕ ಹೂವುಗಳಾಗಿರದೆ ಸ್ಥಳೀಯ ಪರಿಸರ ವ್ಯವಸ್ಥೆಯ ಒಂದು ಭಾಗವಾಗಿವೆ. ಹೂಬಿಡುವ ಅವಧಿಯಲ್ಲಿ ಜೇನುನೊಣಗಳು ಹಾಗೂ ಇತರ ಪರಾಗಸ್ಪರ್ಶಕ ಕೀಟಗಳು ಹೂವುಗಳನ್ನು ಎಡತಾಕುವುದರಿಂದ ಪರಿಸರ ವ್ಯವಸ್ಥೆಯಲ್ಲಿನ ಪರಾಗಸ್ಪರ್ಶ ಪ್ರಕ್ರಿಯೆಗೂ ಸಹಕಾರಿಯಾಗುತ್ತವೆ.

ಚಾರಣಪ್ರಿಯರಿಗೆ ಹೊಸ ಆಕರ್ಷಣೆ

ಕುದುರೆಮುಖವು ಚಾರಣ, ಪ್ರಕೃತಿ ವೀಕ್ಷಣೆ ಹಾಗೂ ಪರಿಸರ ಪ್ರವಾಸೋದ್ಯಮಕ್ಕೆ ಮೆಚ್ಚಿನ ಸ್ಥಳವಾಗಿದೆ. ಬೆಟ್ಟದ ದಾರಿಯಲ್ಲಿ ಸಾಗುವಾಗ ಹಸಿರು ಹುಲ್ಲುಗಾವಲಿನ ನಡುವೆ ಕಾಣಿಸುವ ಅಪರೂಪದ ಹೂವುಗಳು ಚಾರಣಿಗರ ಅನುಭವವನ್ನು ಮತ್ತಷ್ಟು ವಿಶೇಷಗೊಳಿಸುತ್ತಿವೆ. ಪ್ರಕೃತಿಯ ಸೌಂದರ್ಯವನ್ನು ಕ್ಯಾಮೆರಾದಲ್ಲಿ ಸೆರೆಹಿಡಿಯಲು ಛಾಯಾಗ್ರಾಹಕರು ಹಾಗೂ ಪ್ರಕೃತಿ ಪ್ರಿಯರ ಉತ್ಸಾಹ ಹೆಚ್ಚುತ್ತದೆ. ಆದರೆ, ಅಪರೂಪದ ಹೂವುಗಳನ್ನು ನೋಡಲು ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸಿದಾಗ ಪರಿಸರದ ಮೇಲೆ ಒತ್ತಡ ಉಂಟಾಗದಂತೆ ಎಚ್ಚರಿಕೆ ವಹಿಸುವುದು ತುಂಬಾ ಅಗತ್ಯವಿರುತ್ತದೆ.

ಪ್ರವಾಸಿಗರ ಜವಾಬ್ದಾರಿ ಮುಖ್ಯ

ಅಪರೂಪದ ಹೂವುಗಳು ಅರಳಿರುವ ಪ್ರದೇಶಗಳಿಗೆ ಭೇಟಿ ನೀಡುವ ಪ್ರವಾಸಿಗರು ಹೂವುಗಳನ್ನು ಕೀಳದಿರುವುದು, ಗಿಡಗಳನ್ನು ತುಳಿಯದಿರುವುದು, ಕಸ ಎಸೆಯದಿರುವುದು ಹಾಗೂ ನಿಗದಿತ ಚಾರಣ ಮಾರ್ಗಗಳಲ್ಲೇ ಸಂಚರಿಸುವುದು ಬಲು ಮುಖ್ಯ. ಕುದುರೆಮುಖದಂತಹ ಸೂಕ್ಷ್ಮ ಪರಿಸರ ಪ್ರದೇಶಗಳಲ್ಲಿ ಪ್ರವಾಸೋದ್ಯಮ ಚಟುವಟಿಕೆಗಳು ಸಂಬಂಧಪಟ್ಟ ಅರಣ್ಯ ಇಲಾಖೆ ಹಾಗೂ ಸ್ಥಳೀಯ ಆಡಳಿತದ ನಿಯಮಗಳು ಮತ್ತು ಅನುಮತಿಗಳಿಗೆ ಅನುಗುಣವಾಗಿಯೇ ನಡೆಯಬೇಕು. ಪ್ರಕೃತಿ ವೀಕ್ಷಣೆಯ ಹೆಸರಿನಲ್ಲಿ ಪರಿಸರ ವ್ಯವಸ್ಥೆಗೆ ಧಕ್ಕೆ ಮಾಡುವಂತಾಗಬಾರದು.

ಸಂರಕ್ಷಣೆ ಮುಖ್ಯ

ನೀಲಕುರಿಂಜಿಯಂತಹ ಅಪರೂಪದ ಹೂವುಗಳ ಅರಳುವಿಕೆಯನ್ನು ಪರಿಸರ ಪ್ರವಾಸೋದ್ಯಮದ ಒಂದು ಆಕರ್ಷಣೆಯಾಗಿ ಬಳಸಿಕೊಳ್ಳುವ ಅವಕಾಶವಿದೆ. ಆದರೆ, ಅದಕ್ಕಿಂತ ಮುಖ್ಯವಾಗಿ ಈ ನೈಸರ್ಗಿಕ ವಿದ್ಯಮಾನವನ್ನು ಸಂರಕ್ಷಣೆಯ ದೃಷ್ಟಿಯಿಂದ ನೋಡುವ ಅಗತ್ಯವಿದೆ. ಪ್ರವಾಸಿಗರಿಗೆ ಹೂವಿನ ಜೈವಿಕ ಹಾಗೂ ಪರಿಸರ ಮಹತ್ವದ ಕುರಿತು ಮಾಹಿತಿ ನೀಡುವುದು, ಸೂಕ್ಷ್ಮ ಪ್ರದೇಶಗಳಿಗೆ ಪ್ರವೇಶವನ್ನು ನಿಯಂತ್ರಿಸುವುದು, ಚಾರಣ ಮಾರ್ಗಗಳಲ್ಲಿ ಕಸ ನಿರ್ವಹಣೆಗೆ ಒತ್ತು ನೀಡುವುದು ಮತ್ತು ಸ್ಥಳೀಯ ಪರಿಸರ ವ್ಯವಸ್ಥೆಗೆ ಹಾನಿಯಾಗದ ರೀತಿಯಲ್ಲಿ ಪ್ರವಾಸೋದ್ಯಮವನ್ನು ರೂಪಿಸುವುದು ಅವಶ್ಯ. ಪ್ರವಾಸೋದ್ಯಮದ ಬೆಳವಣಿಗೆಯ ಜತೆಗೆ ಪರಿಸರ ಸಂರಕ್ಷಣೆಯೂ ನಡೆಯಬೇಕು ಎಂಬುದೇ ತಜ್ಞರ ಅಭಿಪ್ರಾಯವಾಗಿದೆ.

ಪ್ರಕೃತಿಯ ನೀಲಿ ಹಬ್ಬ

ಕುದುರೆಮುಖದ ಬೆಟ್ಟಗಳಲ್ಲಿ ಅಲ್ಲಲ್ಲಿ ಅರಳಿರುವ ನೀಲಿ□ನೇರಳೆ ಹೂವುಗಳು ಪ್ರಕೃತಿಯೇ ಬಿಡಿಸಿರುವ ಅಪರೂಪದ ವರ್ಣಚಿತ್ರವೇನೋ ಎಂದೆನ್ನಿಸುತ್ತದೆ. ಹಸುರಿನ ನಡುವೆ ಮೂಡುವ ಈ ನೀಲಿ ಚಿತ್ತಾರವು ಪಶ್ಚಿಮ ಘಟ್ಟಗಳ ಜೀವವೈವಿಧ್ಯ ಅದೆಷ್ಟು ವೈಭವಯುತವಾಗಿದೆ ಎಂಬುದನ್ನು ಮತ್ತೊಮ್ಮೆ ಮನಗಾಣಿಸುತ್ತದೆ. ನೀಲಕುರಿಂಜಿಯಂತಹ ಹೂವು ನಮಗೆ ನೀಡುವ ಸೌಂದರ್ಯ ಕ್ಷಣಿಕವಾಗಿರಬಹುದು; ಆದರೆ ಅವುಗಳ ಆವಾಸಸ್ಥಾನವನ್ನು ಸಂರಕ್ಷಿಸುವ ಜವಾಬ್ದಾರಿ ದೀರ್ಘಕಾಲಿಕವಾದುದು. ಪ್ರಕೃತಿಯ ಸೌಂದರ್ಯವನ್ನು ಕಣ್ತುಂಬಿಕೊಳ್ಳೋಣ; ಆದರೆ, ಅಲ್ಲಿನ ಪರಿಸರೀಯ ವ್ಯವಸ್ಥೆಗೆ ಧಕ್ಕೆ ತರದಂತೆ ನಡೆದುಕೊಳ್ಳುವ ಜವಾಬ್ದಾರಿ ತೋರಬೇಕಾಗುತ್ತದೆ. ಕುದುರೆಮುಖದ ಹಸುರಿನ ನಡುವೆ ಅರಳುವ ಈ ನೀಲಿ ಸೊಬಗನ್ನು ಮುಂದಿನ ಪೀಳಿಗೆಯವರೂ ಕಣ್ತುಂಬಿಕೊಳ್ಳುವಂತಾಗುವಲ್ಲಿ ನಮ್ಮಗಳ ಇಂದಿನ ಧೋರಣೆ ಮಹತ್ವದ ಪಾತ್ರ ವಹಿಸುತ್ತದೆ. ■

Downloaded From:www.kpscvaani.com

ಮನಸ್ಸು ಕದಡಿ ಮುದುಡಿದರೆ ಮದ್ದುಂಟು



ಟಿ. ಕೆ. ಹರೀಶ್

ಇಂದಿನ ಆಧುನಿಕ ಯುಗದಲ್ಲಿ ನಾವು ಕೇವಲ ಗಾಳಿ, ನೀರು, ಮತ್ತು ಪರಿಸರದ ಮಾಲಿನ್ಯದ ಬಗ್ಗೆ ಮಾತ್ರ ಮಾತನಾಡುತ್ತೇವೆ. ಆದರೆ ಇವೆಲ್ಲದಕ್ಕಿಂತ ಅಪಾಯಕಾರಿಯಾದ ಮತ್ತೊಂದು ಮಾಲಿನ್ಯ ನಮ್ಮನ್ನು ಕಾಡುತ್ತಿದೆ, ಅದೇ ಮನಸ್ಸಿನ ಮಾಲಿನ್ಯ. ಅಸೂಯೆ, ಕ್ರೋಧ, ಅತಿ ಆಸೆ, ನಕಾರಾತ್ಮಕ ಚಿಂತನೆಗಳು, ದ್ವೇಷದಂತಹ ಭಾವನೆಗಳ ಜೊತೆಗೆ ಕೋವಿಡ್ ನಂತರ ಸಮಾಜದಲ್ಲಿ ಉಂಟಾದ ಮಾನಸಿಕ ಬದಲಾವಣೆಗಳಿಂದ ಅಂದರೆ ಖಿನ್ನತೆ, ಒತ್ತಡ, ಅನಾರೋಗ್ಯಕರ ಜೀವನಶೈಲಿ ಮನುಷ್ಯನ ಮಾನಸಿಕ ಆರೋಗ್ಯದ ಮನಸ್ಸನ್ನು ಕಲುಷಿತಗೊಳಿಸುತ್ತವೆ. ಪರಿಸರದ ಮಾಲಿನ್ಯ ದೇಹಕ್ಕೆ ಕಾಯಿಲೆ ತಂದರೆ, ಮನಸ್ಸಿನ ಮಾಲಿನ್ಯ ಇಡೀ ಜೀವನದ ನೆಮ್ಮದಿಯನ್ನೇ ಕಸಿದುಕೊಳ್ಳುತ್ತದೆ.

ಮನುಷ್ಯನಿಗೆ ದೇಹದ ಆರೋಗ್ಯ ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಮಾನಸಿಕ ಆರೋಗ್ಯ ಕೂಡ. ಮನಸ್ಸು ಮತ್ತು ಮನಸ್ಥಿತಿ ಆರೋಗ್ಯವಾಗಿದ್ದರೆ ಮಾತ್ರ ಮನುಷ್ಯ ತನ್ನ ಜೀವನದ ಮೇಲೆ ನಿಯಂತ್ರಣವನ್ನು ಸಾಧಿಸುತ್ತಾನೆ. ಇಲ್ಲವಾದರೆ ಆತನ ಜೀವನ ನಿಯಂತ್ರಣವಿಲ್ಲದ ವಾಹನದಂತೆ. ದುರದೃಷ್ಟವೆಂದರೆ, ದೇಹದ ಆರೋಗ್ಯವನ್ನು ಕಾಪಾಡಿಕೊಳ್ಳಲು ನೀಡುವಷ್ಟು ಕಾಳಜಿಯನ್ನು ಮನಸ್ಸಿನ ಆರೋಗ್ಯವನ್ನು ಕಾಪಾಡಿಕೊಳ್ಳಲು ಜನರು ನೀಡುತ್ತಿಲ್ಲ ಎಂಬುದು. ವಾಸ್ತವವಾಗಿ, ಮನಸ್ಸಿಗೂ ಆರೋಗ್ಯವೆಂಬುದು ಇದೆ ಎನ್ನುವುದನ್ನು ಬಹಳಷ್ಟು ಮಂದಿ ಅರ್ಥಮಾಡಿಕೊಳ್ಳುವುದೇ ಇಲ್ಲ. ಖಿನ್ನತೆ, ಒತ್ತಡ, ಅನಾರೋಗ್ಯಕರ ಜೀವನಶೈಲಿ ಮನುಷ್ಯನ ಮಾನಸಿಕ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತವೆ.

ಇತ್ತೀಚಿನ ಒತ್ತಡದ ಬದುಕಿನಲ್ಲಿ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಒಂದು ಸವಾಲಿನ ಕೆಲಸವೇ ಆಗಿದೆ. ನಿತ್ಯ ಒಂದಲ್ಲ ಒಂದು ಸಮಸ್ಯೆಗಳು, ಸವಾಲುಗಳು ಮನುಷ್ಯನನ್ನು ಕಾಡುತ್ತಲೇ ಇರುತ್ತದೆ. ಕೆಲವೊಮ್ಮೆ ಸಮಸ್ಯೆಗಳ ಸುಳಿಯಿಂದ ಹೊರಬರಲಾರದೆ ಮನುಷ್ಯ ಖಿನ್ನತೆಗೆ ಜಾರುತ್ತಾನೆ. ಖಿನ್ನತೆಗೆ ಒಳಗಾದ ಮನುಷ್ಯನಿಗೆ ಆತ್ಮಹತ್ಯೆಯಂತಹ ಅಪಾಯಕಾರಿ ಯೋಚನೆಗಳು ಬರುತ್ತವೆ. ಅದರಲ್ಲೂ ಕರೋನ ವೈರಸ್ ಎಂಬ ಮಹಾಮಾರಿ ಜಗತ್ತಿಗೆ ಲಗ್ಗೆ ಇಟ್ಟ ಬಳಿಕ ಮನುಷ್ಯನ ಮಾನಸಿಕ ಆರೋಗ್ಯ ಹದಗೆಡುತ್ತಿದೆ. ಖಿನ್ನತೆ ಮತ್ತು ಆತಂಕದಂತಹ ಭಾವಗಳು ಹೆಚ್ಚಿನವರಲ್ಲಿ ಕಾಡುತ್ತಿವೆ. ಉದ್ಯೋಗ ನಷ್ಟ, ಆದಾಯ ಕುಸಿತ ಮುಂತಾದವುಗಳು ಮಾನಸಿಕ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತಿದೆ.

ನಮ್ಮಲ್ಲಿ ಅನೇಕರು ತಮ್ಮ ಜೀವನ ತುಂಬಾನೇ ಐಷಾರಾಮಿಯಾಗಿರಬೇಕು

Downloaded From:www.kpscvaani.com

ಅಂತ ಕನಸು ಕಾಣುತ್ತಿರುತ್ತಾರೆ. ತುಂಬಾ ಕಡಿಮೆ ಜನರು ತಮ್ಮ ಜೀವನ ಸಿಂಪಲ್ ಆಗಿ ಮತ್ತು ಮನಸ್ಸಿಗೆ ನೆಮ್ಮದಿ ಇದ್ದರೆ ಸಾಕಪ್ಪಾ ಅಂತ ಅಂದುಕೊಳ್ಳುತ್ತಾರೆ. ಹೀಗೆ ಮನಸ್ಸಿಗೆ ನೆಮ್ಮದಿ ಅನ್ನಿಸುವ ಸರಳವಾದ ರೀತಿಯಲ್ಲಿ ಬದುಕುವುದು ಎಲ್ಲರಿಗೂ ಸಿದ್ದಿಸುವಂತಹ ಕಲೆ ಅಲ್ಲ. ಹಾಗೆಂದ ಮಾತ್ರಕ್ಕೆ ಇದು ಸಿಗುವುದೇ ಇಲ್ಲ ಅಂತೇನಿಲ್ಲ. ಆದರೆ ಅದಕ್ಕೆ ಕೆಲವು ಅಂಶಗಳನ್ನು ನಾವು ರೂಢಿಸಿಕೊಳ್ಳಬೇಕು. ಈ ನೆಮ್ಮದಿಯ ವ್ಯಾಖ್ಯಾನ ಸಹ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ. ನಿಜವಾಗಿಯೂ ಜೀವನದಲ್ಲಿ ಸುಖ, ಶಾಂತಿ ಮತ್ತು ನೆಮ್ಮದಿಯಿಂದ ಬದುಕಲು ನಾವು ಕೆಲವೊಂದು ಅಭ್ಯಾಸಗಳಿಗೆ ಗುಡ್‌ಬೈ ಹೇಳಬೇಕಾಗುತ್ತದೆ.

ಪರಿಸರ ಮಾಲಿನ್ಯಕ್ಕಿಂತ ಮನಸ್ಸಿನ ಮಾಲಿನ್ಯ ಅಪಾಯಕಾರಿ. ಮನಸ್ಸಿನ ಮಾಲಿನ್ಯ ತೆಗೆಯಲು ಪುಸ್ತಕ ಓದು ಅವಶ್ಯಕ ಹಾಗೂ ಉತ್ತಮ ಅಭ್ಯಾಸ ರೂಡಿಸಿಕೊಳ್ಳುವುದು ಅವಶ್ಯಕ. ಹೊಸ ಪುಸ್ತಕ ಮನೆಗೆ ತಂದರೆ, ಹೊಸ ಹಿತೈಷಿ ಮನೆಗೆ ಬಂದಂತೆ. ಓದಿನ ಸುಖಕ್ಕೆ ಯಾರ ಹಂಗು ಇಲ್ಲ ಎಂದು ಲೇಖಕ ಹಾ.ಮಾ.ನಾಯಕ ಹೇಳುತ್ತಿದ್ದರು.

ಪ್ರತಿದಿನ ಕೇವಲ 10–20 ನಿಮಿಷಗಳ ಕಾಲ ಧ್ಯಾನ ಮಾಡುವುದರಿಂದ ಒತ್ತಡ, ಆತಂಕ ಮತ್ತು ನಕಾರಾತ್ಮಕ ಆಲೋಚನೆಗಳನ್ನು ದೂರಮಾಡಿ ಮನಸ್ಸನ್ನು ಶಾಂತಗೊಳಿಸಬಹುದು. ಇದು ಏಕಾಗ್ರತೆಯನ್ನು ಹೆಚ್ಚಿಸಿ, ಮಾನಸಿಕ ಸ್ಪಷ್ಟತೆಯನ್ನು ತರುತ್ತದೆ.

ಸಂತೃಪ್ತಿ ಹಾಗೂ "ಇರುವುದೇ ಭಾಗ್ಯ" ಎನ್ನುವ ಮನೋಭಾವನೆಯು ಮಾನಸಿಕ ನೆಮ್ಮದಿಗೆ ಅತ್ಯಗತ್ಯ. ನಮ್ಮ ಬಳಿ ಇರುವುದನ್ನು ಪ್ರೀತಿಸಿ, ಗೌರವಿಸುವುದೇ ನಿಜವಾದ ಸುಖದ ರಹಸ್ಯವಾಗಿದೆ.

ಆತ್ಮಾವಲೋಕನ ಎನ್ನುವುದು ನಮ್ಮ ಆಲೋಚನೆಗಳು, ನಡವಳಿಕೆಗಳು ಮತ್ತು ನಿರ್ಧಾರಗಳನ್ನು ಮೌಲ್ಯಮಾಪನ ಮಾಡಿಕೊಳ್ಳುವ ಅತ್ಯುತ್ತಮ ಪ್ರಕ್ರಿಯೆ. ಇದು ನಿಮ್ಮ ವೈಯಕ್ತಿಕ ಬೆಳವಣಿಗೆಗೆ ಮತ್ತು ಮಾನಸಿಕ ನೆಮ್ಮದಿಗೆ ಅತ್ಯಗತ್ಯ.

ನಮ್ಮ ಆಲೋಚನಾ ಶೈಲಿಯನ್ನು ಬದಲಾಯಿಸಿಕೊಳ್ಳುವುದು ಜೀವನದಲ್ಲಿ ಹೊಸ ದೃಷ್ಟಿಕೋನವನ್ನು ತರಲು ಮತ್ತು ಯಶಸ್ಸನ್ನು ಸಾಧಿಸಲು ಅತ್ಯಂತ ಪರಿಣಾಮಕಾರಿ ಮಾರ್ಗವಾಗಿದೆ. ಸಕಾರಾತ್ಮಕ ಮತ್ತು ಪ್ರಗತಿಪರ ಆಲೋಚನೆಗಳನ್ನು ಅಳವಡಿಸಿಕೊಳ್ಳಲು ಇದರಿಂದ ಸಾಧ್ಯವಾಗುತ್ತದೆ.

ಪ್ರಶಾಂತ ಭಾವವನ್ನು ನೀವು ಸೃಷ್ಟಿಸಲು ಸಾಧ್ಯವಿಲ್ಲ ಅಥವಾ ತಾನಾಗಿಯೇ ಅದು ಉದ್ಭವಿಸುವುದಿಲ್ಲ. ನೀವು ಬಯಸಲಿ ಅಥವಾ ಬಯಸದಿರಲಿ, ಶಾಂತತೆ ಎನ್ನುವುದು ನಿಮ್ಮೊಳಗೆ ಇದ್ದೇ ಇರುತ್ತದೆ.

ಮನಸ್ಸು ಒಂದು ಸುಂದರವಾದ ತೋಟದಂತೆ. ಅಲ್ಲಿ ಕಳೆಗಳು (ನಕಾರಾತ್ಮಕ ಯೋಚನೆಗಳು) ಬೆಳೆಯುವುದು ಸಹಜ. ಆದರೆ ತೋಟಗಾರನಂತೆ ನಾವು ದಿನನಿತ್ಯ ಆ ಕಳೆಗಳನ್ನು ಕಿತ್ತುಹಾಕಿ, ಸಕಾರಾತ್ಮಕತೆಯೆಂಬ ಸುಂದರ ಹೂವುಗಳನ್ನು ಬೆಳೆಸಬೇಕು. ಮನಸ್ಸಿನ ಮಾಲಿನ್ಯಕ್ಕೆ ಹೊರಗಿನ ಪ್ರಪಂಚದಲ್ಲಿ ಯಾವುದೇ ಸಿದ್ಧ ಮದ್ದಿಲ್ಲ; ನಮ್ಮ ಆಲೋಚನಾ ಶೈಲಿಯನ್ನು ಬದಲಾಯಿಸಿಕೊಳ್ಳುವುದೇ ಇದಕ್ಕಿರುವ ಏಕೈಕ ಮತ್ತು ಶಾಶ್ವತ ಪರಿಹಾರವಾಗಿದೆ.

ನಿಮ್ಹಾನ್ಸ್‌ನಿಂದ ಪರಿಹಾರ ಹುಡುಕಲು ಸಮೀಕ್ಷೆ

ವಿವಿಧ ವಯಸ್ಸಿನವರಲ್ಲಿ ನವರಲ್ಲಿ ಹೆಚ್ಚುತ್ತಿರುವ ಸಮಸ್ಯೆಗಳನ್ನು ಪತ್ತೆ ಮಾಡುವ ಹಾಗೂ ಈ ಬದಲಾವಣೆಯ ನಿಖರ ಚಿತ್ರಣ ನೀಡುವ ಉದ್ದೇಶದಿಂದ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯಿಂದ (ನಿಮ್ಹಾನ್ಸ್) ರಾಷ್ಟ್ರೀಯ ಮಾನಸಿಕ ಆರೋಗ್ಯ ಸಮೀಕ್ಷೆ (ಎನ್‌ಕೆಎಂಎಚ್‌ಎಸ್)–2 ನಡೆಸಲಾಗಿದೆ. ಈ ಸಮೀಕ್ಷಾ ವರದಿ ದಾಖಲೆಯೂ ಆಕ್ಟೋಬರ್‌ನಲ್ಲಿ ಪ್ರಕಟವಾಗುವ ಸಾಧ್ಯತೆಯಿದೆ. 2.5 ಲಕ್ಷಕ್ಕೂ ಹೆಚ್ಚು ಜನರನ್ನು ಒಳಗೊಂಡಿರುವ ಈ ಸಮೀಕ್ಷೆಯಲ್ಲಿ ಮಾನಸಿಕ ಕಾಯಿಲೆಗಳ ಅಂಕಿ ಅಂಶಗಳು ಮಾತ್ರವಲ್ಲದೆ, ಕೋವಿಡ್ ನಂತರ ಸಮಾಜದಲ್ಲಿ ಉಂಟಾದ ಮಾನಸಿಕ ಬದಲಾವಣೆಗಳನ್ನೂ ದಾಖಲಿಸಲಾಗಿದೆ. ಈ ವರದಿ ಮುಂದಿನ ದಿನಗಳಲ್ಲಿ ದೇಶದ ಮಾನಸಿಕ ಆರೋಗ್ಯ ನೀತಿಗೆ ಸಹಕಾರಿಯಾಗಲಿದೆ.

ಭಾರತ ಸರ್ಕಾರ ಮತ್ತು ಕರ್ನಾಟಕ ರಾಜ್ಯ ಸರ್ಕಾರವು ಮಾನಸಿಕ ಆರೋಗ್ಯವನ್ನು ಸುಧಾರಿಸಲು ಮತ್ತು ಸಾರ್ವಜನಿಕರಿಗೆ ಅಗತ್ಯ ನೆರವು ಒದಗಿಸಲು ಹಲವು ಪ್ರಮುಖ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ

ರಾಷ್ಟ್ರೀಯ ಮಾನಸಿಕ ಆರೋಗ್ಯ ಕಾರ್ಯಕ್ರಮ

ಇದು ಭಾರತ ಸರ್ಕಾರದ ರಾಷ್ಟ್ರೀಯ ಮಾನಸಿಕ ಆರೋಗ್ಯ



Downloaded From:www.kpscvaani.com

ಕಾರ್ಯಕ್ರಮದ ಅಡಿಯಲ್ಲಿ ಬರುವ ಒಂದು ಪ್ರಮುಖ ಯೋಜನೆಯಾಗಿದೆ. ಮಾನಸಿಕ ಆರೋಗ್ಯದ ಸಮಸ್ಯೆಗಳನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚಿ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಜನರಿಗೆ ಉಚಿತ ಚಿಕಿತ್ಸೆ ಮತ್ತು ಕೌನ್ಸೆಲಿಂಗ್ ಒದಗಿಸುವುದು ಇದರ ಮುಖ್ಯ ಉದ್ದೇಶವಾಗಿದೆ.

ಆರಂಭಿಕ ಪತ್ತೆ ಮತ್ತು ಚಿಕಿತ್ಸೆ : ಮಾನಸಿಕ ಅಸ್ವಸ್ಥತೆಗಳನ್ನು ಬೇಗನೆ ಗುರುತಿಸಿ ಸೂಕ್ತ ಚಿಕಿತ್ಸೆ ನೀಡುವುದು.

ಚಿಕಿತ್ಸೆಯ ಕೊರತೆ ನೀಗಿಸುವುದು : ಗ್ರಾಮೀಣ ಮತ್ತು ದೂರದ ಪ್ರದೇಶದ ಜನರಿಗೂ ಮಾನಸಿಕ ಆರೋಗ್ಯ ಸೇವೆಗಳನ್ನು ಸುಲಭವಾಗಿ ತಲುಪಿಸುವುದು.

ಜಾಗೃತಿ ಮೂಡಿಸುವುದು ಮಾನಸಿಕ ಕಾಯಿಲೆಗಳ ಬಗ್ಗೆ ಸಮಾಜದಲ್ಲಿರುವ ಮೂಢನಂಬಿಕೆ ಮತ್ತು ಕಳಂಕವನ್ನು ದೂರ ಮಾಡುವುದು.

ಸಿಬ್ಬಂದಿಗೆ ತರಬೇತಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯರು ಮತ್ತು ಆರೋಗ್ಯ ಕಾರ್ಯಕರ್ತರಿಗೆ ಮಾನಸಿಕ ಸಮಸ್ಯೆಗಳನ್ನು ಗುರುತಿಸಲು ತರಬೇತಿ ನೀಡುವುದು.

ಕರ್ನಾಟಕದಲ್ಲಿ ಕಾರ್ಯಕ್ರಮದ ವೈಶಿಷ್ಟ್ಯಗಳು

ಎಲ್ಲಾ ಜಿಲ್ಲೆಗಳಲ್ಲೂ ಲಭ್ಯ: ಪ್ರಸ್ತುತ ಕರ್ನಾಟಕದ ಎಲ್ಲಾ 30 ಜಿಲ್ಲೆಗಳಲ್ಲಿ ಮತ್ತು ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ ಈ ಕಾರ್ಯಕ್ರಮ ಅನುಷ್ಠಾನದಲ್ಲಿದೆ.

ಮನೋಚೈತನ್ಯ ಕಾರ್ಯಕ್ರಮ : ಕರ್ನಾಟಕ ಸರ್ಕಾರದ ವಿಶೇಷ ಯೋಜನೆಯಾದ ಇದರ ಅಡಿಯಲ್ಲಿ, ಪ್ರತಿ ತಿಂಗಳ ನಿಗದಿತ ಮಂಗಳವಾರಗಳಂದು ತಾಲ್ಲೂಕು ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರು ಉಚಿತವಾಗಿ ತಪಾಸಣೆ ಮತ್ತು ಚಿಕಿತ್ಸೆ ನೀಡುತ್ತಾರೆ.

ಉಚಿತ ಆಪ್ತಸಮಾಲೋಚನೆ ಮತ್ತು ಔಷಧಿ: ಜಿಲ್ಲಾ ಆಸ್ಪತ್ರೆಗಳಲ್ಲಿ ಮನೋವೈದ್ಯರು ಮತ್ತು ಕ್ಲಿನಿಕಲ್ ಸೈಕಾಲಜಿಸ್ಟ್‌ಗಳು ಲಭ್ಯವಿದ್ದು, ಉಚಿತ ಕೌನ್ಸೆಲಿಂಗ್ ಹಾಗೂ ಔಷಧಿಗಳನ್ನು ವಿತರಿಸಲಾಗುತ್ತದೆ.

ಕರ್ನಾಟಕ ಬ್ರೈನ್ ಹೆಲ್ತ್ ಇನಿಶಿಯೇಟಿವ್ : ಇದು ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಬೆಂಗಳೂರಿನ ಪ್ರತಿಷ್ಠಿತ ನಿಮ್ಹಾನ್ಸ್ ಸಂಸ್ಥೆಯ ಜಂಟಿ ಸಹಯೋಗದಲ್ಲಿ ಆರಂಭಿಸಲಾದ ಒಂದು ಅತ್ಯಂತ ಮಹತ್ವದ ಸಾರ್ವಜನಿಕ ಆರೋಗ್ಯ ಯೋಜನೆಯಾಗಿದೆ. ಮೆದುಳು ಮತ್ತು ನರಸಂಬಂಧಿ ಕಾಯಿಲೆಗಳನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚಿ, ಸೂಕ್ತ ಚಿಕಿತ್ಸೆ ನೀಡುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ.

ಈ ಯೋಜನೆಯ ಮುಖ್ಯ ಉದ್ದೇಶಗಳು

ಆರಂಭಿಕ ಪತ್ತೆ ಮತ್ತು ಚಿಕಿತ್ಸೆ ಪಾರ್ಶ್ವವಾಯು, ಅಪಸ್ಮಾರ/ಫಿಟ್ಸ್, ಮರೆವು ರೋಗ, ಮತ್ತು ತೀವ್ರ ತಲೆನೋವಿನಂತಹ ನರಸಂಬಂಧಿ ಸಮಸ್ಯೆಗಳನ್ನು ಆರಂಭದಲ್ಲೇ ಗುರುತಿಸುವುದು.

ಮೆದುಳಿನ ಆರೋಗ್ಯದ ಜಾಗೃತಿ ಸಾರ್ವಜನಿಕರಲ್ಲಿ ಮೆದುಳಿನ ಆರೋಗ್ಯವನ್ನು ಕಾಪಾಡಿಕೊಳ್ಳುವ ಬಗ್ಗೆ ಮತ್ತು ನರಸಂಬಂಧಿ ಕಾಯಿಲೆಗಳ ಬಗ್ಗೆ ಇರುವ ಮೂಢನಂಬಿಕೆಗಳನ್ನು ಹೋಗಲಾಡಿಸಲು ಜಾಗೃತಿ ಮೂಡಿಸುವುದು.

ವೈದ್ಯರಿಗೆ ವಿಶೇಷ ತರಬೇತಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯರು ಮತ್ತು ನರ್ಸ್‌ಗಳಿಗೆ ನರಸಂಬಂಧಿ ಕಾಯಿಲೆಗಳನ್ನು ಗುರುತಿಸಲು ಮತ್ತು ಪ್ರಾಥಮಿಕ ಚಿಕಿತ್ಸೆ ನೀಡಲು ನಿಮ್ಹಾನ್ಸ್ ತಜ್ಞರಿಂದ ವಿಶೇಷ ತರಬೇತಿ ನೀಡುವುದು.

ಪ್ರಮುಖ ವೈಶಿಷ್ಟ್ಯಗಳು

ಬ್ರೈನ್ ಹೆಲ್ತ್ ಕ್ಲಿನಿಕ್: ಜಿಲ್ಲಾ ಆಸ್ಪತ್ರೆಗಳಲ್ಲಿ ವಿಶೇಷ ಮೆದುಳಿನ ಆರೋಗ್ಯ ಚಿಕಿತ್ಸಾಲಯಗಳನ್ನು ಸ್ಥಾಪಿಸಲಾಗಿದೆ. ಇಲ್ಲಿ ರೋಗಿಗಳಿಗೆ ತಪಾಸಣೆ ಮಾತ್ರವಲ್ಲದೆ ಫಿಸಿಯೋಥೆರಪಿ, ಸ್ಪೀಚ್ ಥೆರಪಿ ಮತ್ತು ಸೈಕಾಲಜಿಕಲ್ ಕೌನ್ಸೆಲಿಂಗ್ ಸೇವೆಗಳೂ ಲಭ್ಯವಿರುತ್ತವೆ.

ಬಹುಶಿಸ್ತೀಯ ತಂಡ: ಪ್ರತಿ ಕ್ಲಿನಿಕ್‌ನಲ್ಲಿ ವೈದ್ಯರು, ಫಿಸಿಯೋಥೆರಪಿಸ್ಟ್, ಸ್ಪೀಚ್ ಥೆರಪಿಸ್ಟ್, ಸೈಕಾಲಜಿಸ್ಟ್ ಮತ್ತು ನರ್ಸ್ ಒಳಗೊಂಡ ವಿಶೇಷ ತಂಡ ಕಾರ್ಯನಿರ್ವಹಿಸುತ್ತದೆ.

ಟೆಲಿ-ನ್ಯೂರಾಲಜಿ: ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ವೈದ್ಯರು ಜಟಿಲವಾದ ಪ್ರಕರಣಗಳಲ್ಲಿ ಬೆಂಗಳೂರಿನ ನಿಮ್ಹಾನ್ಸ್ ತಜ್ಞ ವೈದ್ಯರೊಂದಿಗೆ ನೇರವಾಗಿ ಸಂಪರ್ಕ ಸಾಧಿಸಿ ಡಿಜಿಟಲ್ ಮೂಲಕ ಸಲಹೆ ಪಡೆಯಲು ಈ ವ್ಯವಸ್ಥೆ ಸಹಕಾರಿಯಾಗಿದೆ.

ರಾಷ್ಟ್ರೀಯ ಟೆಲಿ ಮಾನಸಿಕ ಆರೋಗ್ಯ ಕಾರ್ಯಕ್ರಮ

ಇದು ದೇಶದ ಪ್ರತಿಯೊಬ್ಬ ನಾಗರಿಕನಿಗೂ ಉಚಿತವಾಗಿ, ದಿನದ 24 ಗಂಟೆಯೂ (24x7) ದೂರವಾಣಿ ಮೂಲಕ ಮಾನಸಿಕ ಆರೋಗ್ಯ ಸೇವೆ ಮತ್ತು ಕೌನ್ಸೆಲಿಂಗ್ ಒದಗಿಸಲು ಭಾರತ ಸರ್ಕಾರ ಜಾರಿಗೆ ತಂದಿರುವ ಅತ್ಯಂತ ಪ್ರಮುಖ ಯೋಜನೆಯಾಗಿದೆ. ಮಾನಸಿಕ ಒತ್ತಡ, ಖಿನ್ನತೆ ಅಥವಾ ಯಾವುದೇ ರೀತಿಯ ಕಳವಳ ಎದುರಿಸುತ್ತಿರುವ ಜನರಿಗೆ ತಕ್ಷಣವೇ ವೃತ್ತಿಪರರ ನೆರವು ಸಿಗುವಂತೆ ಮಾಡುವುದು ಇದರ ಮುಖ್ಯ ಉದ್ದೇಶವಾಗಿದೆ.

ಉಚಿತ ಸಹಾಯವಾಣಿ ಸಂಖ್ಯೆಗಳು

ಯಾವುದೇ ವ್ಯಕ್ತಿ ಮಾನಸಿಕ ಒತ್ತಡದಲ್ಲಿದ್ದಾಗ ಕೆಳಗಿನ ಟೋಲ್-ಫ್ರೀ ಸಂಖ್ಯೆಗಳಿಗೆ ದೇಶದ ಯಾವುದೇ ಭಾಗದಿಂದ ಉಚಿತವಾಗಿ ಕರೆ ಮಾಡಬಹುದು:
14416 | 1800-89-14416

ಯಾರಿಗೆ ಉಪಯುಕ್ತ?

ಪರೀಕ್ಷೆಯ ಒತ್ತಡ – ವಿದ್ಯಾರ್ಥಿಗಳಲ್ಲಿ ಕಂಡುಬರುವ ಪರೀಕ್ಷಾ ಭಯ ಮತ್ತು ಆತಂಕ.

ಕೌಟುಂಬಿಕ ಸಮಸ್ಯೆಗಳು: ಕುಟುಂಬದ ಸದಸ್ಯರ ನಡುವಿನ ಭಿನ್ನಾಭಿಪ್ರಾಯಗಳು ಅಥವಾ ಸಂಬಂಧದ ಸಮಸ್ಯೆಗಳು.

ವ್ಯಸನ / ಮಾದಕವಸ್ತು ಬಳಕೆ: ಸಿಗರೇಟು, ಮದ್ಯಪಾನ ಅಥವಾ ಇತರ

Downloaded From:www.kpscvaani.com

ಮಾದಕವಸ್ತುಗಳ ಚಟದಿಂದ ಹೊರಬರಲು.

ಆರ್ಥಿಕ ಮತ್ತು ಕೆಲಸದ ಒತ್ತಡ: ಸಾಲದ ಬಾಧೆ, ನಿರುದ್ಯೋಗ ಅಥವಾ ಕಚೇರಿಯ ತೀವ್ರ ಒತ್ತಡ.

ಇತರ ಸಮಸ್ಯೆಗಳು: ತೀವ್ರ ಬೇಸರ, ಜ್ಞಾಪಕ ಶಕ್ತಿ ಕೊರತೆ, ಖಿನ್ನತೆ ಅಥವಾ ಆತ್ಮಹತ್ಯೆಯ ಆಲೋಚನೆಗಳು ಮೂಡಿದಾಗ.

ಕಿರಣ್ (KIRAN) ಎಂಬುದು ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ಆರಂಭಿಸಿರುವ 24/7 ಉಚಿತ ರಾಷ್ಟ್ರೀಯ ಮಾನಸಿಕ ಆರೋಗ್ಯ ಪುನರ್ವಸತಿ ಸಹಾಯವಾಣಿ ಆಗಿದೆ.

ಮಾನಸಿಕ ಒತ್ತಡ, ಖಿನ್ನತೆ, ಆತಂಕ ಅಥವಾ ಆತ್ಮಹತ್ಯೆಯ ಆಲೋಚನೆಗಳಿಂದ ಬಳಲುತ್ತಿರುವ ಜನರಿಗೆ ತಕ್ಷಣದ ಮಾನಸಿಕ ಪ್ರಥಮ ಚಿಕಿತ್ಸೆ ಮತ್ತು ಕೌನ್ಸೆಲಿಂಗ್ ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಕಿರಣ್ (KIRAN) ಕಾರ್ಯಕ್ರಮದ ಪ್ರಮುಖ ಮಾಹಿತಿ ಇಲ್ಲಿದೆ:

ಉಚಿತ ಸಹಾಯವಾಣಿ ಸಂಖ್ಯೆ

ಯಾವುದೇ ವ್ಯಕ್ತಿ ಮಾನಸಿಕವಾಗಿ ತೊಂದರೆಯಲ್ಲಿದ್ದಾಗ ದೇಶದ ಯಾವುದೇ ಭಾಗದಿಂದ ಈ ಕೆಳಗಿನ ಸಂಖ್ಯೆಗೆ ಉಚಿತವಾಗಿ ಕರೆ ಮಾಡಬಹುದು: 1800–599–0019

(ಗಮನಿಸಿ: ಇತ್ತೀಚಿನ ಕೇಂದ್ರ ಸರ್ಕಾರದ ವ್ಯವಸ್ಥೆಯಡಿ, ಈ ರಾಷ್ಟ್ರೀಯ ಸೇವೆಯನ್ನು ಆರೋಗ್ಯ ಇಲಾಖೆಯ ಟೆಲಿ–ಮಾನಸ್ (14416)ಸಹಾಯವಾಣಿಯೊಂದಿಗೂ ಸಂಯೋಜಿಸಿ ವಿಸ್ತರಿಸಲಾಗಿದೆ.)

ಮುಖ್ಯ ಉದ್ದೇಶಗಳು, ಸೇವೆಗಳು

ಆರಂಭಿಕ ತಪಾಸಣೆ ಮತ್ತು ಪ್ರಥಮ ಚಿಕಿತ್ಸೆ ಕರೆ ಮಾಡಿದ ವ್ಯಕ್ತಿಯ ಮಾನಸಿಕ ಸ್ಥಿತಿಯನ್ನು ಆರಂಭಿಕ ಹಂತದಲ್ಲೇ ಗ್ರಹಿಸಿ ಅವರಿಗೆ ಬೇಕಾದ ತುರ್ತು ಸಾಂತ್ವನ ನೀಡುವುದು.

ಮನೋವೈಜ್ಞಾನಿಕ ಬೆಂಬಲ ತೀವ್ರ ಮಾನಸಿಕ ಆಘಾತ, ಭಯ, ಅಥವಾ ಕಳವಳ ಎದುರಿಸುತ್ತಿರುವವರಿಗೆ ವೃತ್ತಿಪರ ಆಪ್ತಸಮಾಲೋಚನೆ ಒದಗಿಸುವುದು.

ಒತ್ತಡ ನಿರ್ವಹಣೆ ಕೌಟುಂಬಿಕ ಸಮಸ್ಯೆ, ಕೆಲಸದ ಒತ್ತಡ ಅಥವಾ ಆರ್ಥಿಕ ಬಿಕ್ಕಟ್ಟಿನಿಂದ ಉಂಟಾಗುವ ಮಾನಸಿಕ ತುಮುಲಗಳನ್ನು ನಿಭಾಯಿಸಲು ಮಾರ್ಗದರ್ಶನ ನೀಡುವುದು.

ತಜ್ಞರ ಕಡೆಗೆ ರೆಫರಲ್ ಸಮಸ್ಯೆಯು ತೀವ್ರ ಸ್ವರೂಪದ್ದಾಗಿದ್ದರೆ, ರೋಗಿಗಳನ್ನು ಅವರ ಸ್ಥಳೀಯ ಜಿಲ್ಲೆಯ ಮನೋವೈದ್ಯರು ಅಥವಾ ಮಾನಸಿಕ ಪುನರ್ವಸತಿ ಕೇಂದ್ರಗಳಿಗೆ ಶಿಫಾರಸು ಮಾಡುವುದು.

ಕಿರಣ್ ಸಹಾಯವಾಣಿಯ ಪ್ರಮುಖ ವೈಶಿಷ್ಟ್ಯಗಳು

ಕನ್ನಡ ಸೇರಿದಂತೆ 13 ಭಾಷೆಗಳಲ್ಲಿ ಲಭ್ಯ: ಈ ಸಹಾಯವಾಣಿಯು ಕನ್ನಡ, ಇಂಗ್ಲಿಷ್, ಹಿಂದಿ, ತಮಿಳು, ತೆಲುಗು, ಮಲಯಾಳಂ ಸೇರಿದಂತೆ ದೇಶದ 13 ಪ್ರಮುಖ ಭಾಷೆಗಳಲ್ಲಿ ಸೇವೆ ಒದಗಿಸುತ್ತದೆ. ಕರೆ ಮಾಡಿದಾಗ ಪ್ರಾದೇಶಿಕ ಭಾಷೆಯ ಆಯ್ಕೆಯಲ್ಲಿ ಕನ್ನಡವನ್ನು ಆರಿಸಿಕೊಂಡು ಸ್ಥಳೀಯ ತಜ್ಞರೊಂದಿಗೆ ಮಾತನಾಡಬಹುದು.

ವೃತ್ತಿಪರರ ತಂಡ: ಈ ಯೋಜನೆಯಡಿ ದೇಶಾದ್ಯಂತ ನೂರಾರು ಕ್ಲಿನಿಕಲ್ ಸೈಕಾಲಜಿಸ್ಟ್‌ಗಳು ಮತ್ತು ಮನೋವೈದ್ಯರು ಸ್ವಯಂಪ್ರೇರಿತರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಸಂಪೂರ್ಣ ಗೋಪ್ಯತೆ: ಕರೆ ಮಾಡುವ ವ್ಯಕ್ತಿಯ ಹೆಸರು, ವಿಳಾಸ ಅಥವಾ ವೈಯಕ್ತಿಕ ವಿವರಗಳನ್ನು ಸಂಪೂರ್ಣವಾಗಿ ಗೌಪ್ಯವಾಗಿಡಲಾಗುತ್ತದೆ. ಕರೆ ಮಾಡುವವರು ಬಯಸಿದರೆ ತಮ್ಮ ಗುರುತನ್ನು ಬಹಿರಂಗಪಡಿಸದೆಯೂ ಕೌನ್ಸೆಲಿಂಗ್ ಪಡೆಯಬಹುದು.

ವಿಕಲಚೇತನರಿಗೆ ವಿಶೇಷ ಆದ್ಯತೆ: ಮಾನಸಿಕ ಅಸ್ವಸ್ಥತೆ ಹೊಂದಿರುವ ವಿಕಲಚೇತನರು ಮತ್ತು ಅವರ ಕುಟುಂಬದವರಿಗೆ ಪುನರ್ವಸತಿ ಮಾರ್ಗದರ್ಶನ ನೀಡಲು ಇದು ವಿಶೇಷ ಒತ್ತು ನೀಡುತ್ತದೆ.

ECRC ಎಂದರೆ ತುರ್ತು ನಿಗಾ ಮತ್ತು ಚೇತರಿಕೆ ಕೇಂದ್ರ:

ಇದು ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ವಿವಿಧ ಸ್ವಯಂಸೇವಾ ಸಂಸ್ಥೆಗಳ ಸಹಯೋಗದೊಂದಿಗೆ ಜಾರಿಗೆ ತಂದಿರುವ ಒಂದು ಅತ್ಯಂತ ಮಾನವೀಯ ಮತ್ತು ಮಹತ್ವದ ಯೋಜನೆಯಾಗಿದೆ.

ಬೀದಿಗಳಲ್ಲಿ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ತೀವ್ರ ಮಾನಸಿಕ ಅಸ್ವಸ್ಥತೆಯಿಂದ ಅನಾಥರಾಗಿ ಅಲೆಯುತ್ತಿರುವ ನಿರಾಶ್ರಿತರನ್ನು ರಕ್ಷಿಸಿ, ಅವರಿಗೆ ಉಚಿತ ಆಶ್ರಯ, ಚಿಕಿತ್ಸೆ ಮತ್ತು ಪುನರ್ವಸತಿ ನೀಡುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ.

ಉದ್ದೇಶಗಳು

ನಿರಾಶ್ರಿತರ ರಕ್ಷಣೆ ಮತ್ತು ಆಶ್ರಯ: ಮಾನಸಿಕ ಅಸ್ವಸ್ಥತೆಯಿಂದ ರಸ್ತೆ ಬದಿಯಲ್ಲಿ ವಾಸಿಸುವ ನಿರ್ಗತಿಕರನ್ನು ಗುರುತಿಸಿ, ಸುರಕ್ಷಿತ ಆಶ್ರಯ ನೀಡುವುದು.

ಉಚಿತ ವೈದ್ಯಕೀಯ ಮತ್ತು ಮಾನಸಿಕ ಚಿಕಿತ್ಸೆ: ರೋಗಿಗಳಿಗೆ ಅಗತ್ಯವಿರುವ ಉಚಿತ ವೈದ್ಯಕೀಯ ತಪಾಸಣೆಗಳು, ರಕ್ತ ಪರೀಕ್ಷೆಗಳು, ಸ್ಕ್ಯಾನಿಂಗ್ ಮತ್ತು ಮನೋವೈದ್ಯಕೀಯ ಔಷಧಿಗಳನ್ನು ಒದಗಿಸುವುದು.

ಸಾಮಾಜಿಕ ಪುನರ್ವಸತಿ ಮತ್ತು ಕೌಶಲ್ಯಾಭಿವೃದ್ಧಿ: ಚೇತರಿಸಿಕೊಂಡ ವ್ಯಕ್ತಿಗಳು ಸ್ವಾವಲಂಬಿಗಳಾಗಲು ಸಣ್ಣಪುಟ್ಟ ಉದ್ಯೋಗ ತರಬೇತಿ ನೀಡುವುದು.

ಕುಟುಂಬದೊಂದಿಗೆ ಮರುಜೋಡಣೆ: ರೋಗಿಗಳು ಗುಣಮುಖರಾದ ನಂತರ ಅವರ ಮೂಲ ವಿಳಾಸವನ್ನು ಪತ್ತೆಹಚ್ಚಿ, ಅವರನ್ನು ಅವರ ಸ್ವಂತ ಕುಟುಂಬದವರೊಂದಿಗೆ ಮರುಸೇರ್ಪಡೆ ಮಾಡುವುದು.

Downloaded From:www.kpscvaani.com

ಚಿತ್ರಪಂಕ್ತಿ-83



ವಿದ್ಯಾ ವಿ. ಹಾಲಭಾವಿ

ಎಡದಿಂದ ಬಲಕ್ಕೆ

1. ಗಾಂಧೀಜಿಯವರ ಪತ್ನಿ ಹೆಸರು (4)
3. ಈ ರಾಜ್ಯವಾಗಬೇಕೆನ್ನುವುದು ಗಾಂಧೀಜಿಯವರ ಆಶಯವಾಗಿತ್ತು (3)
6. ಸ್ವಾತಂತ್ರ್ಯ ಎಂದು ಹೀಗೂ ಹೇಳಬಹುದು (4)
7. ಶ್ರೀಗಂಧ ಇಲ್ಲಿದೆ (3)
9. ಗಾಂಧಿ ಸಂಚಾರದ ನೆನಪುಗಳನ್ನು ಉಳಿಸಿಕೊಂಡಿರುವ ಈ ಊರು ನಂಜನಗೂಡು ತಾಲ್ಲೂಕಿನಲ್ಲಿದೆ (5)
12. ಈಗ ತಾನೇ ಆರಂಭಿಸಿರುವ ಬೇಸಾಯ (3)
13. ಗಾಂಧೀಜಿ ಬಳಸಿದ ನೈತಿಕ ಹೋರಾಟದ ವಿಧಾನ (4)
15. ಗಾಂಧೀಜಿ ನೇಯಲು ಬಳಸುತ್ತಿದ್ದ ಸಾಧನ (3)
16. ಮೇಲುಜಾತಿ ಅಲ್ಲದ ಇವರ ಉದ್ಧಾರಕ್ಕಾಗಿ ಗಾಂಧೀಜಿ ಶ್ರಮಿಸಿದರು (4)

ಮೇಲಿಂದ ಕೆಳಕ್ಕೆ

1. ಗಾಂಧೀಜಿಯ ತಂದೆಯ ಹೆಸರು (5)
2. ಗಾಂಧೀಜಿಯ ಜನಪ್ರಿಯ ಗೌರವನಾಮ (2)
4. ಉಲ್ಟಾ ಕಾಣುತ್ತಿರುವ ಗುಡಿಸಲು ಕೊನೆಗೆ ದೀರ್ಘವಾಗಿದೆ (3)
5. ಮೊದಲು ಉಪ್ಪಿಗೆ ವಿಧಿಸುತ್ತಿದ್ದ ಕರ (2)
6. ಗಾಂಧೀಜಿಯ ಮೊದಲ ಹೆಸರು (5)
8. ತೋಟವಿಲ್ಲಿ ಉಲ್ಟಾ ಕಾಣುತ್ತಿದೆ (2)
10. ಸೇವಕ ಇಲ್ಲಿ ತಿರುಗಿ ನಿಂತಿದ್ದಾನೆ (2)
11. ಗದಗ ಜಿಲ್ಲೆಯ ನಾಗಾವಿಯಲ್ಲಿ ಈ ಆಶ್ರಮದ ಪ್ರತಿರೂಪ ನಿರ್ಮಾಣವಾಗಿದೆ (5)
13. ಪ್ರಶ್ನೆಗೆ ಪೂರಕವಾಗಿ ಹೇಳುವ ಮರುನುಡಿ (3)
14. ಗಾಂಧೀಜಿಯವರ ಸೇವಾಗ್ರಾಮ ಆಶ್ರಮವಿದ್ದ ಸ್ಥಳ (2)

ಪಕ್ಷಿನೋಟ

ಮೇಲಿಂದ ಕೆಳಕ್ಕೆ
1. ಕರಮಚಂದ 2. ಬಾಪು 4. ಬಾಣಂತಿ 5. ತಿಂಥ
6. ತ್ರಿಮಾಸ್ತಿಯಾಶ್ರ 8. ನಿಲ 10.ಕಂಡ
11. ಸಬರಮತಿ 13. ಉತ್ತರ 14. ಪೋರ್ಬಂದರ್

ಎಡದಿಂದ ಬಲಕ್ಕೆ
1. ಕಸ್ತೂರಬಾ 3. ಸ್ವರಾಜ್ಯ 6. ಮಹಾತ್ಮತ್ವ
7. ಚಂದನ 9. ಬದನವಾಳು 12. ಉಳುಮೆ
13. ಉಪವಾಸ 15. ಚರಕ 16. ಕೆಳವರ್ಗ


–: ಸೂಚನೆ :–

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.


ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ-ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Hemanth M Nimbalkar, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at :M/s Rajhans Enterprises, #No.134, 4th Main Road, Industrial Town, Rajajinagar, Bangalore - 560 044.

Downloaded From:www.kpscvaani.com




ಮಂಗಳೂರಿನಲ್ಲಿ 25–2–1934



ಕಾರವಾರದಲ್ಲಿ ಗಾಂಧೀಜಿ – 27–2–1934

Downloaded From:www.kpscvaani.com

Regd No.KA/BGGPO/2592/2024-26 Licensed to post without prepayment Licence No. PMG/BG/ WPP-414/2024-26
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26



"ಬದುಕಿನುದ್ದಕ್ಕೂ ಬಾಪೂಗೆ ಜೊತೆಯಾದ ಕಸ್ತೂರಬಾ"
ಮಹಾತ್ಮ ಗಾಂಧೀಜಿ ಮತ್ತು ಕಸ್ತೂರಬಾ ಗಾಂಧಿ ಅವರ ಅಪರೂಪದ ಭಾವಚಿತ್ರ.